Mr. SPEAKER.—Not all. As Sri H. K. Veeranna Gowda said, some demands may come up for discussion later. In respect of such demands cut motions can be given by tomorrow.

Fixing time-limit for Budget speech for each speaker

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).— ಬಡ್ಜೆಟ್ ಚರ್ಚೆ ಪ್ರಾರಂಭವಾಗುವುದಕ್ಕಿಂತ ಮುಂಚೆ ಒಂದು ವಿಷಯ ಹೇಳಬೇಕಾಗಿದೆ. ಮೊದಲನೆಯ ದಿವಸ ಹೆಚ್ಚುಮಂದಿ ಸದಸ್ಯರು ಮಾತನಾಡುವುದಿಲ್ಲ. ಆ ಮೇಲೆ ಎರಡನೆಯ ದಿನದಿಂದ ಅನೇಕರು ಮಾತನಾಡಲು ಬಯಸುತ್ತಾರೆ. ಆದುದರಿಂದ ಆಗ ಕಾಲವನ್ನು ನಿಗದಿಮಾಡುವುದು ಕಷ್ಟವಾಗುತ್ತದೆ. ಆದಕಾರಣ ಈಗಲೇ ಒಂದು ಕಾಲವನ್ನು ನಿಗದಿಮಾಡಿಕೊಂಡು ಆ ಪ್ರಕಾರ ಸದಸ್ಯರು ಮಾತನಾಡಲು ಅವಕಾಶವಾದರೆ ಎಲ್ಲರಿಗೂ ಬಡ್ಜೆಟ್ ಮೇಲೆ ಮಾತನಾಡಲು ಅವಕಾಶ ಸಿಕ್ಕುತ್ತದೆ. ಮಾನ್ಯ ಸದಸ್ಯರು ಒಪ್ಪುವುದಾದರೆ ಒಬ್ಬೊಬ್ಬರಿಗೆ ಇಷ್ಟಿಷ್ಟು ಕಾಲವೆಂದು ಗೊತ್ತುಮಾಡ ಬಹುದು. ಹೀಗೆ ಮಾಡಿದರೆ ಒಳ್ಳೆಯದು.

Sri T. SUBRAMANYA (Tumkur District—General).—The Hon'ble Speaker may kindly adjust according to the number of speakers during the first day.

Sri H. C. LINGA REDDY (Kolar District—General).—I would suggest a maximum of 20 minutes for each speaker.

Mr. SPEAKER.—But if the first speaker goes on for one hour?

Sri T. SUBRAMANYA.—I think the Hon'ble Speaker can rely upon the wisdom of the Members also.

Sri V. S. NARAYANA RAO (Bangalore City—General).—Some of us did not get an opportunity to speak on Highness's speech.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ನಾನೊಂದು ಸಲಹೆಯನ್ನು ಕೊಡುತ್ತೇನೆ. ಈ ದಿನ ಎಷ್ಟು ಜನ ಬಡ್ಜೆಟ್ ಮೇಲೆ ಮಾತನಾಡುವುದಕ್ಕೆ ಸಿದ್ಧರಾಗಿದ್ದಾರೆಂಬುದನ್ನು ತಿಳಿದುಕೊಂಡು ಆ ಸಂಖ್ಯೆಯಿಂದ ಈಗ ಇರುವ ಕಾಲವನ್ನು ಭಾಗಿಸಿಬಿಟ್ಟರೆ ಸುಲಭವಾಗಿ ಗೊತ್ತಾಗುತ್ತದೆ; ಎಲ್ಲರಿಗೂ ಇದರಿಂದ ಅನುಕೂಲವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಬೆಳಿಗ್ಗೆ 8ರಿಂದ 12 ಗಂಟೆಯವರೆಗೆ ಸಭೆ ಸೇರುವುದೆಂದು ಮಾಡಿದರೆ ಬಹಳ ಕಡಿಮೆಯಾಗುತ್ತದೆ. ಒಂದು ಘಂಟೆಯವರೆಗೆ ಎಂದಾದರೂ ಮಾಡಿದರೆ ಉತ್ತಮ. ಸರಿಯಾಗಿ ಎಲ್ಲರೂ ಚರ್ಚೆ ಮಾಡಲು ಅನುಕೂಲ.

ಅಧ್ಯಕ್ಷರು.—ನೆನ್ನೆಯ ದಿವಸ ಸಭೆಯವರು 8ರಿಂದ 12ರವರೆಗೆ ಸಭೆ ನಡೆಯುವುದೆಂದು ಗೊತ್ತುಮಾಡಿದ್ದಾರೆ, ಅದನ್ನು ಈಗ ನಾನು ಹೇಗೆ ಬದಲಾಯಿಸುವುದು ?

ಶ್ರೀ ಟಿ. ರಾಮಾಚಾರ್ಯರು (ಕೋಲಾರ ಜಿಲ್ಲೆ).—ನೆನ್ನೆ ಚರ್ಚೆ ನಡೆಯುವಾಗ ಒಂದು ವಿಷಯ ನಡೆದುದನ್ನು ತಮಗೆ ತಿಳಿಸಿದ್ದೇನೆ. ಆ ವಿಷಯದಲ್ಲಿ, ಏನೂ ಹೇಳಿಲ್ಲ......... ....

Mr. SPEAKER.—It has not gone into the Proceedings. It is only after it was brought to my notice that I knew it. There is no use discussing that issue now.

Sri. T. RAMACHAR.—It has taken place on the floor of this House, Sir.

Mr. SPEAKER.—But the Hon'ble Member did not bring it to my notice as soon as the alleged remark was made. He only wrote about it afterwards. I find from the official records that there is no reference to the alleged remarks. I therefore do not think it advisable to take up that question and discuss it now.

ಶ್ರೀ ಎಂ. ಮಾದಯ್ಯನವರು.—ಅದರ ಮೇಲೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾವು ಹೇಳುವುದಿಲ್ಲ. ವಿಷಯವೇನೆಂಬುದನ್ನು ತಿಳಿಸಿದರೆ ಸಾಕು.

Mr. SPEAKER.—When it has not gone into the Proceedings it is not proper that the Hon'ble Member should demad a discussion. When I have not self heard it, it is not desirable to make any reference to it.

Sri M. N. JOIS (Mysore District General).—As long as it does not form part of the official proceedings I think there is no use wasting time over that matter.

THE BUDGET FOR 1951-52.

General Discussion—First Stage.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಅಧ್ಯಕ್ಷರೇ, ಈ ಸಾರಿ ಮಾನ್ಯ ಹಣಕಾಸಿನ ಸಚಿವರು ಸಭೆಯ ಮುಂದಿಟ್ಟಿರತಕ್ಕ ಅಂದಾಜು ಪಟ್ಟಿಯು ಬಹಳ ಆಶಾದಾಯಕವಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇನೆ. ಇದರಲ್ಲಿ ಜನಗಳ ಪುರೋಭಿವೃದ್ಧಿಮಾಡತಕ್ಕ ಕೆಲಸಗಳಿಗೆ ಹೆಚ್ಚು ಹೆಚ್ಚಾಗಿ ಹಣವನ್ನೊದಗಿಸಿದ್ದಾರೆ. ಇದರಿಂದ ದೇಶದಲ್ಲಿ ಆರ್ಥಿಕಾಭಿವೃದ್ಧಿ, ವಿದ್ಯಾಭಿವೃದ್ಧಿ, ಆರೋಗ್ಯಾಭಿವೃದ್ಧಿ ಇತರ ಅನೇಕ ಬಾಬುಗಳಲ್ಲಿ ಅಭಿವೃದ್ಧಿ ನಡೆದು ಜನರಿಗೆ ಉತ್ಸಾಹ ಮತ್ತು ಉತ್ತೇಜನ ದೊರೆತು ದೇಶದ ಅಭಿವೃದ್ಧಿಗೆ ಸಾಧನವಾಗುತ್ತದೆಂದು ನಾನು ಭಾವಿಸುತ್ತೇನೆ.

---

* Speech asterisked have not been revised by the Hon'ble Member concerned.

ಆದರೆ ಒಂದು ವಿಷಯದಲ್ಲಿ ಮಾತ್ರ ನಾನು ಸ್ವಲ್ಪ ಸಂಕೋಚವನ್ನು ಸೂಚಿಸಬೇಕಾಗಿದೆ. ಹೋದಸಲ ನಮ್ಮ ಮುಂದಿಟ್ಟ ಆಯವ್ಯಯಗಳ ಅಂದಾಜು ಪಟ್ಟಿಯ ವಿಷಯದಲ್ಲಿ ಇದೇ ಒಂದು ವಿಧವಾದ ಆಶೆಯನ್ನು ಹೊರಪಡಿಸಿದೆವು. ಅನೇಕ ದೇಶಾಭ್ಯುದಯಕ್ಕೆ ಸಾಧಕವಾದ ಕೆಲಸಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿದ್ದರು ಮತ್ತು ಅದಕ್ಕಾಗಿ .ಬೇಕಾದಷ್ಟು ಹಣವನ್ನು ಖರ್ಚುಮಾಡಿದರು. ಆದರೂ ಕೂಡ ಅನೇಕ ಮುಖ್ಯ ಮುಖ್ಯವಾದ ಕೆಲಸಗಳಿಗೆ ಒದಗಿಸಿದ್ದ ಹಣ ಖರ್ಚಾಗದೆ ಉಳಿದದ್ದು ಒಂದು ವಿಷಾದಕರವಾದ ಸಂಗತಿ. ವಿದ್ಯಾ ಇಲಾಖೆ, ವೈದ್ಯ ಇಲಾಖೆ, ಜನಾರೋಗ್ಯ ಇಲಾಖೆ, ಪಶುವೈದ್ಯ ಇಲಾಖೆ ಮುಂತಾದ ಇಲಾಖೆಗಳಲ್ಲಿ ಹೀಗಾಗಿದೆ. ಜನರಿಗೆ ಬಹಳವಾಗಿ ಉಪಯುಕ್ತವಾದ ಇಲಾಖೆಗಳಲ್ಲಿ, ಜನರಿಗೆ ಹೆಚ್ಚು ಹಿತಕಾರಿಯಾದ ಇಲಾಖೆಗಳಲ್ಲಿ ಒದಗಿಸಿದ ಹಣವನ್ನು ಖರ್ಚುಮಾಡದೆ ಉಳಿಸಿರತಕ್ಕದ್ದು ನ್ಯಾಯವಲ್ಲವೆಂದು ನನಗೆ ಎನಿಸುತ್ತದೆ. ಈ ಸಾಲಿನಲ್ಲಿ ಕೊಟ್ಟಿರತಕ್ಕ ಈ ಅಂದಾಜು ಪಟ್ಟಿಯಲ್ಲಿ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನೊದಗಿಸಿದ್ದಾರೆ ಮತ್ತು ಯಾವ ಯಾವ ಇಲಾಖೆಯವರು ಏನೇನು ಕಾರ್ಯಕ್ರಮಗಳನ್ನನುಸರಿಸುತ್ತಾರೆಂಬುದು ಬಹಳ ಸಂಕ್ಷೇಪವಾಗಿ ತಿಳಿಸಲ್ಪಟ್ಟಿದೆ. ಇದು ಆಯವ್ಯಯ ಪಟ್ಟಿಯಿಂದಲೂ ಮತ್ತು ಹಣಕಾಸಿನ ಸೆಕ್ರೆಟೆರಿಯವರು ಒದಗಿಸಿರುವ ಮೆಮೊರಾಂಡಮಿನಿಂದಲೂ ವ್ಯಕ್ತವಾಗುತ್ತದೆ. ಅನೇಕ ಮುಂದುವರಿದ ದೇಶಗಳಲ್ಲಿರುವ ಸಂಪ್ರದಾಯವನ್ನು ನಮ್ಮ ಸರ್ಕಾರದವರು ಅನುಸರಿಸಿದರೆ ಸದಸ್ಯರಾದ ನಮಗೆ ಬಹುಮಟ್ಟಿಗೆ ತೋರುವಂತೆ ದೇಶದ ಜನರಿಗೆ ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುತ್ತೇನೆ. ಅದೇನೆಂದರೆ, ಒಂದೊಂದು ಇಲಾಖೆಯಲ್ಲಿಯೂ ಎಷ್ಟು ಕೆಲಸವಿದೆ, ಎಷ್ಟು ಕೆಲಸಗಳಿಗೆ ಹಣವನ್ನೊದಗಿಸಲಾಗುತ್ತದೆಯೋ ಆ ಇಲಾಖೆಯವರು ತಮ್ಮ ಇಲಾಖೆಯಲ್ಲಿ ಕಳೆದ ಸಾಲಿನಲ್ಲಿ ಏನೇನು ಕಾರ್ಯಕಲಾಪಗಳನ್ನು ನಡೆಸಿದರು, ಯಾವ ಯಾವ ನಡೆಯಬೇಕಾಗಿದ್ದ ಕಾರ್ಯಗಳು ಉಳಿದಿವೆ, ಯಾವ ಯಾವುವು ನಡೆಯಲಿಲ್ಲ, ಅಡಚಣೆಗಳೇನು ಬಂದವು, ಜನರ ಸಲಹೆ ಮತ್ತು ಸಹಕಾರ ಎಷ್ಟುಮಟ್ಟಿಗೆ ಅವರಿಗೆ ಒದಗಿತು ಎಂಬುದನ್ನೆಲ್ಲಾ ವಿಶದವಾಗಿ ತಿಳಿಸಿ, ಮುಂದೆ ಅವರ ಇಲಾಖೆಗೆ ಒದಗಿಸುವ ಮೊಬಲಗಿನಪೈಕಿ ಯಾವ ರೀತಿಯ ಕೆಲಸಕಾರ್ಯಗಳನ್ನು ತೆಗೆದುಕೊಂಡು ನಡೆಸುತ್ತಾರೆ, ಹಾಗೆ ನಡೆಸಲು ಏನು ಸಿಬ್ಬಂದಿ ಸಲಕರಣೆಗಳನ್ನು ಒದಗಿಸಿದ್ದಾರೆ ಎಂಬುದನ್ನೆಲ್ಲಾ ತಿಳಿಸಿ ವಿವರವಾದ ಒಂದು ವರದಿಯನ್ನು ತಯಾರುಮಾಡಿ ಪ್ರತಿಯೊಂದು ಇಲಾಖೆಯವರೂ ಕಳುಹಿಸಿದರೆ, ಬಡ್ಜೆಟ್ಟು ನಮ್ಮ ಕೈಸೇರುವಾಗ ಅಂಥ ಒಂದು ವಿವರಗಳ ವರದಿಯೂ ಸದಸ್ಯರ ಮುಂದಿದ್ದರೆ ಪ್ರತಿಯೊಂದು ಇಲಾಖೆಯವರೂ ಹಿಂದೆ ಏನೇನುಮಾಡಿದರು, ಮುಂದೆ ಏನೇನು ಮಾಡಬೇಕೆಂದಿದ್ದಾರೆ ಎಂಬುದನ್ನೆಲ್ಲಾ ಕೂಲಂಕಷವಾಗಿ ತಿಳಿಯುವುದಕ್ಕೆ ಅವಕಾಶವಾಗುತ್ತದೆ. ನನಗೆ ತಿಳಿದಮಟ್ಟಿಗೆ ಅನೇಕ ಮುಂದುವರೆದ ದೇಶಗಳಲ್ಲಿ ಇಂತಹ ಒಂದು ಸಂಪ್ರದಾಯ ನಡೆದು ಬರುತ್ತಿದೆ. ಇದನ್ನು ನಮ್ಮ ಸರ್ಕಾರದವರೂ ಸಹ ಅನುಸರಿಸಿ ಒಂದೊಂದು ಇಲಾಖೆಗೂ ಏನೇನು ಬಡ್ಜೆಟ್ಟಿನಲ್ಲಿ ಒದಗಿಸುತ್ತಾರೋ ಅದಕ್ಕೆ ಸಂಬಂಧಪಟ್ಟ ವಿವರಗಳನ್ನೊಳಗೊಂಡ ಒಂದು ಪಟ್ಟಿಯನ್ನೊದಗಿಸಲು ಏರ್ಪಾಡುಮಾಡುತ್ತಾರೆಂದು ನಂಬಿ ಸಲಹೆಮಾಡುತ್ತಿದ್ದೇನೆ.

ಇನ್ನು ಕೆಲವು ಇಲಾಖೆಗಳ ಕಾರ್ಯಕಲಾಪಗಳ ವಿಚಾರವನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ರೆವೆನ್ಯೂ ಇಲಾಖೆ ಕೆಲವು ಬಾಬುಗಳಲ್ಲಿ ಎಂದರೆ, ಕಂದಾಯ ಕೌಳಿಗೆಗಳನ್ನು ವಸೂಲುಮಾಡುವ ಕೆಲಸದಲ್ಲಿ ಬಹಳ ವಿಚಕ್ಷಣೆಯನ್ನು ತೋರಿಸಿ, ಇನ್ನು ಕೆಲವು ಕೆಲಸಗಳಲ್ಲಿ ಇದೇ ವಿಚಕ್ಷಣೆಯನ್ನು ತೋರಿಸದೇಯಿರುವ ಸಂದರ್ಭಗಳನ್ನು ಈ ಸಮಯದಲ್ಲಿ ಸೂಚಿಸಬೇಕೆಂದಿದ್ದೇನೆ. ಎಲ್ಲ ಸಂಗತಿಗಳನ್ನೂ ತಿಳಿಸಲು ನಾನು ಹೊರಡುವುದಿಲ್ಲ. ಏಕೆಂದರೆ ಅದಕ್ಕೆ ಸಾಕಾದಷ್ಟು ಕಾಲಾವಕಾಶವಿಲ್ಲ. ಕೆಲವನ್ನು ಮಾತ್ರ ಸೂಚಿಸಬೇಕಾಗಿದೆ. ಈಗ ರೆವೆನ್ಯೂ ಇರಾಖೆಯಲ್ಲಿ ಗ್ರಾಮಬಡಾವಣೆಗಳ ಬಗ್ಯೆ ಜಮೀನುಗಳನ್ನು ಅಕ್ವೈರ್‌ಮಾಡಿಕೊಳ್ಳತಕ್ಕ ವಿಧಾನದಲ್ಲಿ ಕೆಲವು ಕುಂದುಕೊರತೆಗಳಿವೆ. ನನಗೆ ತಿಳಿದಿರುವಮಟ್ಟಿಗೆ ಅನೇಕ ಸಂದರ್ಭಗಳಲ್ಲಿ ಹೀಗೆ ಗ್ರಾಮಬಡಾವಣೆಗೆ ಅಗತ್ಯವಿಲ್ಲದಂಥ ಪ್ರಸಂಗಗಳಲ್ಲಿ ಕೂಡ ಜಮೀನುಗಳನ್ನು ಅನಾವಶ್ಯಕವಾಗಿ ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಈ ಒಂದು ಕಾರಣದಿಂದ ಈ ಲ್ಯಾಂಡ್ ಅಕ್ವಿಜಿಷರ್ಷ ಕಾನೂನಿನಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡತಕ್ಕದ್ದು ಅತ್ಯಗತ್ಯವಾಗಿರುತ್ತೆಂಬುದಾಗಿ ನಾನು ಈ ಶಾಸನಸಭೆಗೆ ಸದಸ್ಯನಾಗಿ ಬಂದ ಸುಮಾರು 20 ವರ್ಷಗಳ ಪರ್ಯಂತರದಲ್ಲೂ ಸರ್ಕಾರಕ್ಕೆ ಒತ್ತಾಯಪಡಿಸುತ್ತಾಬಂದಿದ್ದಾಗ್ಯೂ ಅದಿನ್ನೂ ಆಗಿರುವುದಿಲ್ಲ. ಇದ್ದ ಹಾಗೇ ಇದೆ. ಇಂದು ಯಾರು ಆ ದಿವಸ ಈ ಮಾನ್ಯಸಭೆಯಲ್ಲಿ ಮಾನ್ಯಸಚಿವರುಗಳಾಗಿದ್ದರೋ ಅವರೇ ಹಿಂದೆ ಈ ಸಭೆಯ ಮಾನ್ಯಸದಸ್ಯರುಗಳಾಗಿದ್ದಾಗ ಈ ಕಾನೂನನ್ನು ಸೂಕ್ತರೀತಿಯಲ್ಲಿ ತಿದ್ದುಪಡಿಮಾಡತಕ್ಕದ್ದು ಉಚಿತವಾಗಿರುತ್ತೆಂಬ ವಿಷಯದಲ್ಲಿ ಪ್ರಸ್ತಾಪಮಾಡಿದ್ದಾರೆ. ಹೀಗೆ ಅಷ್ಟು ದಿವಸಗಳಿಂದಲೂ ಒತ್ತಾಯಮಾಡುತ್ತಿದ್ದರೂ ಇದಿನ್ನೂ ಆಗದೆ ಇರತಕ್ಕದ್ದರಿಂದ ಇಂದು ಈ ವಿಚಾರ ಬಹಳ ಪ್ರಮಾದಕ್ಕೆ ಬಂದುಹೋಗಿದೆ. ಗ್ರಾಮಗ್ರಾಮಗಳಲ್ಲೆಲ್ಲಾ ಒಂದೊಂದು ಪಕ್ಷದವರೂ ಒಂದೊಂದು ಪಾರ್ಟಿ ಪಂಗಡಗಳನ್ನು ಮಾಡಿಕೊಂಡು ಹೋಗಲು ಇಲ್ಲಿಯತನಕ ಹೀಗೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕದ್ದು ಸಾಧುವಾದುದಲ್ಲವೆಂದು ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಅಂದರೆ ಈ ಲ್ಯಾಂಡ್ ಅಕ್ವಿಜಿಷನ್ ಆಕ್ಟೇ ಸರಿಯಲ್ಲವೆಂದು ಯಾರೂ ಭಾವಿಸಬಾರದು. ಆದರೆ ಕೆಲವು ಗ್ರಾಮಗಳಲ್ಲಿ ಬಡಾವಣೆಗೆ ಹಾಗೆ ಅವಶ್ಯಕತೆಗಳು ಕಂಡುಬಾರದಿದ್ದರೂ, ಅಂಥಾ ಗ್ರಾಮದ ಅಕ್ಕಪಕ್ಕದಲ್ಲಿರುವ ಕೆಲವು ಫಲವತ್ತಾದ ಜಮೀನುಗಳನ್ನು ಯಾರು ಅವುಗಳನ್ನಿಟ್ಟುಕೊಂಡಿರುತ್ತಾರೋ ಅಂಥವರ ಮೇಲಿನ ಒಂದು ದ್ವೇಷಾಸೂಯೆಯಿಂದ, ಅವುಗಳನ್ನು ಅವರ ಕೈತಪ್ಪಿಸಬೇಕೆಂಬ ಒಂದೇ ಒಂದು ಉದ್ದೇಶದಿಂದ ವಿಶೇಷವಾಗಿ ಹಣ ಖರ್ಚುಮಾಡಿಕೊಂಡು, ವಿಪರೀತ ಕಷ್ಟನಷ್ಟಗಳಿಗೀಡಾಗಿ ಅಮುಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರುಗಳು ಇತ್ಯಾದಿ ಇಲಾಖೆಯವರ ಮೇಲ್ಪಟ್ಟು ಕಡೆಗೆ ಸರ್ಕಾರದ ತೀರ್ಪು ಕೊಡತಕ್ಕ ಮಟ್ಟದವರೆಗೂ ವ್ಯಾಜ್ಯ ವ್ಯವಹಾರಗಳನ್ನು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಅಂಥಾ ಗ್ರಾಮಗಳಿಗೆ ಬಡಾವಣೆ ಅನಾವಶ್ಯಕವಾಗಿದ್ದು, ಅಲ್ಲಿ ವಾಸಮಾಡತಕ್ಕ ಜನರಿಗೆ ಹೊಸದಾಗಿ ಮನೆಗಳನ್ನು ಕಟ್ಟಿಕೊಳ್ಳತಕ್ಕ ಅವಶ್ಯಕತೆ ಇಲ್ಲದಿದ್ದಾಗ್ಯೂ, ಅವರಿಗೆಲ್ಲಾ ದೊಡ್ಡ ದೊಡ್ಡ ವಿಶಾಲವಾದ ಮನೆಗಳಿದ್ದರೂ, ಈ ರೀತಿ ಅನಾವಶ್ಯಕವಾಗಿ ಯಾವುದೋ ದ್ವೇಷಾಸೂಯೆಗಳ ಉದ್ದೇಶಕ್ಕಾಗಿಯೇ ಹೀಗೆ ಜಮೀನುಗಳನ್ನು ಈಗ ಅಕ್ವೈರ್‌ಮಾಡಿಕೊಳ್ಳಲಾಗುತ್ತಿದೆ. ಯಾರೂ ಹಾಗೆ ಮಾಡುತ್ತಿಲ್ಲವೆಂದು

(ಶ್ರೀ ಟಿ. ಮಾದಯ್ಯಗೌಡರು).

ಸರ್ಕಾರದವರು ಸುಲಭವಾಗಿ ಒಂದು ಉತ್ತರಕೊಡಬಹುದು. ಆದರೆ ಹಾಗೆ ನಡೆದಿರತಕ್ಕ ಅನೇಕ ಸಂದರ್ಭಗಳನ್ನು ನಾನೇ ನೋಡಿದ್ದೇನೆ. ಊರಿನ ಅಕ್ಕಪಕ್ಕದ ಜಮೀನು ಬಹಳ ಫಲವತ್ತಾಗಿರುತ್ತದೆ. ಆದರೆ ಬೇರೆ ಜಮೀನುಗಳು ಅಷ್ಟು ಫಲವತ್ತಾಗಿರುವುದಿಲ್ಲ. ಆದರೆ ಹಾಗೆ ಫಲವತ್ತಾಗಿಲ್ಲದ ಜಮೀನು ಊರಿಗೆ ಕೇವಲ ಸಮೀಪವಾಗಿದ್ದಾಗ್ಯೂ ಅಂಥಾದ್ದನ್ನು ಅಕ್ವೈರ್‌ಮಾಡಿಕೊಳ್ಳದೆ ಊರಿಗೆ ದೂರವಾಗಿರತಕ್ಕ ಮತ್ತು ಫಲವತ್ತಾಗಿರತಕ್ಕಂಥ ಜಮೀನುಗಳನ್ನು ಬೇಕೆಂದು ಅಕ್ವೈರ್‌ಮಾಡಿಕೊಳ್ಳುತ್ತಾರೆ. ಹೋಗಲಿ ಹಾಗೆ ಅಕ್ವೈರ್‌ಮಾಡಿಕೊಂಡು 20—30 ವರ್ಷಗಳಾಗಿದ್ದರೂ ಆ ಸ್ಥಳದಲ್ಲಿ ಇನ್ನೂ ಮನೆಗಳನ್ನೇ ಕಟ್ಟಿರುವುದಿಲ್ಲ. ಅಂಥಾ ಫಲವತ್ತಾದ ಜಮೀನಿನ ಸ್ಥಿತಿ ಇಂದು ಏನಾಗಿದೆಯೆಂದರೆ ಅಲ್ಲೆಲ್ಲಾ ಲಾಂಟಾನಾ ವಗೈರೆ ಗಿಡಗಳು ಬೆಳೆದು, ಆ ಸ್ಥಳದಲ್ಲಿ ಸತ್ತುಹೋದ ನಾಯಿ ವಗೈರೆಗಳನ್ನು ಹೂಳಲಿಕ್ಕೆ ಉಪಯೋಗಿಸುತ್ತಿದ್ದಾರೆ. ಹೀಗೆ ಬಡಾವಣೆಗಾಗಿ ಅಕ್ವೈರ್‌ಮಾಡಿಕೊಂಡ ಎಷ್ಟೆಷ್ಟು ಗ್ರಾಮಗಳಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆಂಬ ಬಗ್ಗೆ ಸರ್ಕಾರದವರು ಏನಾದರೂ ಒಂದು ಸರ್ವೆ ನಡೆಸಿದ್ದಾರೆಯೇ ? ನನಗೆ ಗೊತ್ತಿರುವ ಹಾಗೆ ದೊಡ್ಡನ ಗ್ರಾಮದ ಹೋಬಳಿ, ಹಿಂಗನಹಳ್ಳಿ ವಗೈರೆ ಗ್ರಾಮಗಳಲ್ಲಿ ಅಕ್ವೈರ್ ಮಾಡಿಕೊಂಡಿರತಕ್ಕ ಜಮೀನೆಲ್ಲ ನಾಶವಾಗಿ ಅದರಿಂದ ಯಾವ ಪ್ರಯೋಜನವನ್ನೂ ಪಡೆಯದೆ, ಅನಾದರಣೆಮಾಡಿದ್ದಾರೆ. ಇದೇ ಸಂಬಂಧವಾಗಿ ಒಬ್ಬ ಹೆಣ್ಣುಮಗಳ ಒಂದು ಜಮೀನನ್ನು ಉದ್ದಿಶ್ಯಪೂರ್ವಕವಾಗಿ ಆಕೆಯನ್ನು ಹಾಳುಮಾಡಬೇಕೆಂಬ ದುರುದ್ದೇಶದಿಂದ ಗ್ರಾಮಸ್ಥರೆಲ್ಲಾ ಐಕಮತ್ಯದಿಂದ ಬಡಾವಣೆ ನೆಪದಲ್ಲಿ ಅದನ್ನು ನಿಷ್ಕಾರಣವಾಗಿ ಅಕ್ವೈರ್‌ಮಾಡಿಕೊಂಡ ಸಂದರ್ಭದಲ್ಲಿ ಆಕೆ ಕೊನೆಗೆ ಶ್ರೀಮನ್ಮಹಾರಾಜರವರ ತನಕ ದೂರನ್ನು ತೆಗೆದುಕೊಂಡುಹೋಗಿದ್ದರೂ, ಏನೂ ಆಕೆಗೆ ಪ್ರಯೋಜನವಾಗಲಿಲ್ಲ. ಹೀಗೆ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಗಳಲ್ಲಿ, ಹತ್ತು ಹದಿನೈದು ವರ್ಷಗಳ ಮೇಲಾಗಿದ್ದರೂ ಒಂದಾದರೂ ಮನೆಯನ್ನು ಕಟ್ಟಿರುವುದಿಲ್ಲ. ಹೀಗೆ ಸಂಸ್ಥಾನಾಮಳೆ ಬರೀ ಒಂದು ಹೊಟ್ಟೆಕಿಚ್ಚಿನಿಂದ ಎಷ್ಟೋ ಜನರು ಅರ್ಜಿಹಾಕಿಕೊಳ್ಳುತ್ತಿದ್ದಾರೆ. ಆದರೆ ತಹಲ್‌ವರೆಗೆ ಯಾರೂ ಅದನ್ನು ಸರಿಯಾಗಿ ಪರಾಂಬರಿಸಿ ನೋಡಿಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಸಚಿವರು).—ಇಡೀ ಸಂಸ್ಥಾನವನ್ನೇ ತೆಗೆದುಕೊಂಡಾಗ್ಯೂ ಅಂಥಾ ಸಂದರ್ಭಗಳು ಎಷ್ಟಿರಬಹುದು ?

ಶ್ರೀ ಟಿ. ಮಾದಯ್ಯಗೌಡರು.—ನನಗೆ ಗೊತ್ತಿರುವ ಹಾಗೆ ಹುಣಸನಹಳ್ಳಿಯಲ್ಲಿ ಹಾಗೆ ನಡೆದಿದೆ. ಅಲ್ಲಿ ಬಡಾವಣೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಎಷ್ಟೋ ವರ್ಷಗಳಾಯಿತು. ಆದಾಗ್ಯೂ ಅಲ್ಲಿ ಇನ್ನೂ ಮನೆಗಳನ್ನೇ ಕಟ್ಟಿಲ್ಲ. ಈ ವಿಚಾರಗಳನ್ನೆಲ್ಲಾ ನಾವು ಸರ್ಕಾರದಲ್ಲಿ ಹೇಳಿಕೊಂಡರೆ, ಹಾಗೆ ಒಂದಾವರ್ತಿ ಅಕ್ವೈರ್‌ಮಾಡಿಕೊಂಡ ಜಮೀನುಗಳ ಮೇಲೆ ಸರ್ಕಾರದವರಿಗೆ ಯಾವ ಅಧಿಕಾರವೂ ಇರುವುದಿಲ್ಲವೆಂದು ಹೇಳಿಬಿಡುತ್ತಾರೆ. ಈ ರೀತಿಯಾಗಿ ಎಷ್ಟೋ ಕಡೆ ಫಲವತ್ತಾದ, ಅಂದರೆ ರಾಗಿ, ಭತ್ತ ಇತ್ಯಾದಿ ಧಾನ್ಯಗಳನ್ನು ಬೆಳೆಸಲು ಅನುಕೂಲವಾಗಿದ್ದಂಥ ಭೂಮಿಯೆಲ್ಲ ಬಂಜರಾಗಿ ಯಾವ ಪ್ರಯೋಜನವೂ ಇಲ್ಲದೆ ನಿರರ್ಥಕವಾಗಿ ನಿಂತುಹೋಗಿದೆ.

ಆದರೆ ಇದೇ ವಿಚಾರದಲ್ಲಿ ನಾನು ತಿಳಿಸಬೇಕೆಂದಿರುವ ಮತ್ತೊಂದು ಅಂಶವೇನೆಂದರೆ, ಆಗತ್ಯವಾಗಿದ್ದು ತೀರಾ ಅನಿವಾರ್ಯವೆಂದು ಯಾವ ಗ್ರಾಮಗಳವರು ಬಡಾವಣೆಗೆ ಅರ್ಜಿಹಾಕಿಕೊಳ್ಳುತ್ತಾರೆಯೋ ಅಂಥವರಿಗೆ ಗ್ರಾಮದಲ್ಲಿರತಕ್ಕ ಪ್ರೋಗ್ರೆಸಿವ್ ಪಾರ್ಟಿಯವರು ಹಾಗೆಮಾಡಲು ಅವಕಾಶವನ್ನೇ ಕೊಡುತ್ತಿಲ್ಲ. ಹಾಗೆ ಮನೆಗಳನ್ನು ಕಟ್ಟಿಕೊಳ್ಳಲು ಹತ್ತಾರುವರ್ಷಗಳಿಂದ ಅವಕಾಶ ಸಿಕ್ಕದೆ ತೊಂದರೆಪಡುತ್ತಿದ್ದಾರೆ. ಹೀಗೆ ನಾನಾ ಕಾರಣಗಳಿಂದ ಈ ಕಾನೂನು ಸರಿಯಾಗಿಲ್ಲದೆಯಿರುವುದರಿಂದ ಇದನ್ನು ಕೂಡಲೆ ಬದಲಾವಣೆ ಮಾಡಿಜನರಿಗೆ ಅನುಕೂಲ ಕಲ್ಪಿಸತಕ್ಕದ್ದು ಅತ್ಯಗತ್ಯವಾಗಿದೆ. ಇದು ಇನ್ನೂ ಬದಲಾವಣೆ ಆಗಲಿಲ್ಲವೆಂದು ತಿಳಿಸಲು ಬಹಳ ವಿಷಾದಪಡುತ್ತೇನೆ. ಈ ಬಗ್ಗೆ ನಾನೊಂದು ಸಲಹೆ ನೀಡಬೇಕೆಂದಿದ್ದೇನೆ. ಅದೇನೆಂದರೆ, ಮಾನ್ಯಮಂತ್ರಿಗಳು ಈ ಬಗ್ಗೆ ಒಬ್ಬ ಪ್ರತ್ಯೇಕವಾದ ಅಧಿಕಾರಿಗಳನ್ನು ನೇಮಿಸಿ ಈ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ, ಅದರಂತೆ ಅನುಕೂಲಗಳನ್ನು ಕಲ್ಪಿಸತಕ್ಕದ್ದು ಬಹಳ ಮುಖ್ಯವಾದ ಅಂಶ.

ಇನ್ನು ರೆಕಾರ್ಡ್‌ಆಫ್‌ರೈಟ್ಸ್ ಕಾನೂನಿನ ಬಗ್ಗೆ ಎರಡು ಮಾತುಗಳನ್ನಾಡಲಿಚ್ಛಿಸುತ್ತೇನೆ. ಇದು ರೈತರಿಗೆ ಬಹಳ ಮುಖ್ಯವಾದ ಕಾನೂನು. ಈ ಬಗ್ಗೆ ಇಂದು ಯಾರಾದರೂ ಯಾವ ತಾಲ್ಲೂಕು ಕಛೇರಿಗೇ ಹೋಗಿ ತಮಗೆ ಮ್ಯೂಟೇಷನ್ ದಾಖಲೆ ಬೇಕಾಗಿದೆಯೆಂದು ಅರ್ಜಿ ಹಾಕಿಕೊಂಡರೆ ಅದು ವರ್ಷಾನುಗಟ್ಟಲೆ ಸಿಕ್ಕುವಂತೆಯೇ ಇಲ್ಲ. ಹಾಗೇನಾದರೂ ಒಂದುವೇಳೆ ಸಿಕ್ಕಿದರೂ ಅದು ಕೇವಲ 10—15 ವರ್ಷಗಳ ಹಿಂದೆ ಬಂದು ಆಸ್ತಿಗೆ ಯಾರು ಹಕ್ಕುದಾರರಾಗಿದ್ದರೋ ಅಂಥವರ ಹೆಸರಿನಲ್ಲಿರತಕ್ಕ ದಾಖಲೆ ಸಿಕ್ಕಬಹುದು. ಆಗ ಅಂಥಾ ಪಹಣಿಗಳನ್ನು ಅವರು ತೆಗೆದುಕೊಂಡು ಹೋಗಿ ಹಿಂದೆ ಯಾರ ಹೆಸರಿನಲ್ಲಿರುತ್ತದೋ ಅಂಥಾದ್ದರಮೇಲೆ ಸಿವಿಲ್ ಕೇಸುಗಳಲ್ಲಿ ವ್ಯವಹಾರ ಹೂಡಬೇಕಾಗಿದೆ. ಇದನ್ನು ಮೊದಲು ಸರಿಪಡಿಸಬೇಕು.

ಇನ್ನು ಜನಾರೋಗ್ಯ ಮತ್ತು ವೈದ್ಯ ಇಲಾಖೆಯ ಬಗ್ಗೆ ಕೊಂಚ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಪ್ರತಿ ವರ್ಷವೂ ಮೈಸೂರು ಸಂಸ್ಥಾನದಲ್ಲಿರತಕ್ಕ ಜನರು ಹೊರಗಡೆ ಎಲ್ಲೆಲ್ಲಿ ಕಾಲರ ಇತ್ಯಾದಿ ಉಪದ್ರವಗಳಿವೆಯೋ ಅಂಥಾ ಕಡೆಗಳಿಗೆಲ್ಲಾ ಹೋಗಿ ತನ್ಮೂಲಕ ದೇಶಕ್ಕೆ ಈ ಉಪದ್ರವಗಳನ್ನು ತಂದು ಹರಡುತ್ತಿರುವುದು ವರ್ಷೇ ವರ್ಷೇ ಹೆಚ್ಚಾಗುತ್ತಿದೆ. ಚಿಕ್ಕಲ್ಲೂರು, ಕೊಳ್ಳೆಗಾಲದ ತಾಲ್ಲೂಕಿನಲ್ಲಿದ್ದು ನಮ್ಮ ಸಂಸ್ಥಾನದ ಎಲ್ಲೆಗೆ ಬಹಳ ಸಮೀಪದಲ್ಲಿರತಕ್ಕದ್ದಾಗಿದೆ. ಈ ಸ್ಥಳಕ್ಕೆ ಜನರು ಹೋಗಿ......................

Sri S. RANGA RAO (Chitaldrug District-General).—I rise to a point of order. Sub Clause (1) of Rule 54 says:

"On a day or days to be appointed by His Highness the Maharaja subsequent to the day on which the Budget is presented and for such time...........the Assembly shall be at liberty to discuss the Budget as a whole or any question of principle involved therein,............"

ಈಗ ಈ ಸಭೆಯಲ್ಲಿ ಬಜೆಟ್‌ಮೇಲೆ ಮಾತನಾಡಬೇಕೆಂದು ನಿಂತಿರುವಾಗ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನಲ್ಲಿ ಏನೇನು ಕುಂದುಕೊರತೆಗಳಿವೆ, ಎಲ್ಲೆಲ್ಲಿ ಏನೇನು, ಯಾರು ಯಾರಿಗೆ ಎಷ್ಟೆಷ್ಟುಮಟ್ಟಿನ ಅನಾನುಕೂಲಗಳಾಗಿರುತ್ತವೆಂಬ ವಿಚಾರಗಳನ್ನೆಲ್ಲಾ ಇಷ್ಟು ವಿವರವಾಗಿ ಚರ್ಚೆಮಾಡುತ್ತಾ ಹೋದರೆ ಒಂದೊಂದು ವಿಚಾರಕ್ಕೆ

ಒಬ್ಬೊಬ್ಬ ಸದಸ್ಯರಿಗೆ 3 ದಿವಸಗಳ ಅವಕಾಶಕೊಟ್ಟರೂ ಅದೂ ಸಾಕಾಗುವುದಿಲ್ಲ. We may discuss the principles involved therein. ಅಷ್ಟೆ ವಿನಾ ಏನೇನು ನಡೆಯಿತು, ಎಲ್ಲೆಲ್ಲಿ ನಡೆಯಿತು ಎಂಬ ವಿವರಗಳು ಅನವಶ್ಯಕವಾಗಿವೆ.

ಅಧ್ಯಕ್ಷರು.—ಈಗ ಅಕ್ಟಿಜಿಷನ್ ಕ್ರಮದಲ್ಲಿ ಏನೇನು ತೊಂದರೆಗಳಿವೆಯೋ ಅವುಗಳನ್ನು ಸರಿಪಡಿಸಬೇಕೆಂದು ಹೇಳುವಾಗ ಕೆಲವನ್ನು ನಿದರ್ಶನದ ಬಗ್ಗೆ ತಿಳಿಸಿದ್ದಾರೆ.

Sri S. RANGA RAO.—It must be only on principles involved therein.

ಅಧ್ಯಕ್ಷರು.—ಈ ಅಕ್ವಿಜಿಷನ್ ಕಾರ್ಯಕ್ರಮಗಳು ಯಾವ ರೀತಿಯಲ್ಲಿ ನಡೆಯುತ್ತಿವೆಯೆಂಬುದನ್ನು ತಿಳಿಸಿದ್ದಾರೆ. ಅಷ್ಟೇ. ಇದರಲ್ಲಿ ಕ್ರಿಯಾಲೋಪವೆಲ್ಲಿದೆ ?

Sri S. RANGA RAO.—Only the principle involved therein and not the details.

Mr. SPEAKER.—How does the Hon'ble Member say that it is not in order?

Sri S. RANGA RAO.—Otherwise there will be no end for discussion.

Sri H. M. CHANNABASAPPA (Mysore District—General).—I would like to submit to the Chair that the Budget could be discussed as a whole or any question of principle involved therein. So it is open to the Hon'ble Member to discuss the Budget as a whole.

ಶ್ರೀ ಟಿ. ಮಾದಯ್ಯಗೌಡರು.—ಅಧ್ಯಕ್ಷರೇ ಮೈಸೂರು ಸೀಮೆಯಲ್ಲಿ ಜನರ ಆರೋಗ್ಯಭಾಗ್ಯಕ್ಕೆ ಸರ್ಕಾರದವರು ಪ್ರತಿವರ್ಷವೂ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದಾಗ್ಯೂ ಈ ಸಾಂಕ್ರಾಮಿಕ ರೋಗಗಳ ಉಪದ್ರವದಿಂದ ಪ್ರತಿ ವರ್ಷವೂ ಸಂಸ್ಥಾನದಲ್ಲಿ ಸಹಸ್ರಾರು ಜನರು ಮೃತಿ ಹೊಂದುತ್ತಿದ್ದಾರೆ. ಇದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಅಕ್ಕಪಕ್ಕದ ದೇಶಗಳಲ್ಲಿ ಎಲ್ಲೆಲ್ಲಿ ಈ ಕಾಲರ ವಗೈರೆ ಸಾಂಕ್ರಾಮಿಕ ರೋಗಗಳ ಚಿಹ್ನೆ ಇರುತದೆಯೋ ಅಂಥಾ ಕಡೆಗೆ ನಮ್ಮ ಸಂಸ್ಥಾನದಿಂದ ವಿಶೇಷವಾಗಿ ಜನರು ಜಾತ್ರೆ ಇತ್ಯಾದಿಗಳಿಗೆ ಹೋಗಿಬರುತ್ತಿರುವುದರಿಂದ ಆ ಉಪದ್ರವವೂ ನಮ್ಮ ಸಂಸ್ಥಾನಕ್ಕೂ ಹರವಿ ಜನರಿಗೆ ಹೆಚ್ಚಿನ ತೊಂದರೆಗಳಿಗೆ ಕಾರಣವಾಗಿದೆ. ಮೊದಲು ಇದಕ್ಕೆ ಪ್ರಾಮುಖ್ಯತೆ ಕೊಟ್ಟು ತಾವು ಏನೇನು ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಬೇಗ ಮಾಡಬೇಕೆಂದು ಸೂಚಿಸುತ್ತೇನೆ. ಈ ಮಹದೇಶ್ವರ ಮತ್ತು ಚಿಕ್ಕಲ್ಲೂರು ಜಾತ್ರೆಗಳಿಗೆ ಜನರು, ಅಲ್ಲಿ ಕಾಲರ ಇತ್ಯಾದಿಗಳ ಉಪದ್ರವವಿದ್ದಾಗ್ಯೂ ಲಕ್ಷ್ಯಮಾಡದೆ ಅಲ್ಲಿಗೆ ಹೋಗಿ ಬಂದುದೇ ಕಾರಣವಾಗಿ ನಮ್ಮ ಜಿಲ್ಲೆಯೊಂದರಲ್ಲೇ ಸುಮಾರು ಒಂದು ಸಾವಿರ ಮಂದಿ ಮೃತಿ ಹೊಂದಿದ್ದಾರೆಂದು ತಿಳಿಸಲು ನಾನು ತುಂಬಾ ವಿಷಾದಪಡುತ್ತೇನೆ. ನಮ್ಮ ಸಂಸ್ಥಾನದ ಆರೋಗ್ಯ ಇಲಾಖಾ ಅಧಿಕಾರಿಗಳು ತಕ್ಕ ಕಾರ್ಯಕ್ರಮಗಳನ್ನು ಅತಿ ಬೇಗ ಕೈಗೊಂಡ ಪ್ರಯುಕ್ತ ಈ ಸಂಖ್ಯೆ ಇಷ್ಟಕ್ಕೆ ಇಳಿದಿರುತ್ತೆಂದು ಭಾವಿಸುತ್ತೇನೆ. ದೇಶದಲ್ಲಿ ಜನರಿಗೆ ಆರೋಗ್ಯವನ್ನುಂಟುಮಾಡುವುದಕ್ಕಾಗಿ ಹೆಚ್ಚು ತರಕಾರಿ, ಹಣ್ಣು ಹ ಪಲು ಬೆಳೆಯಬೇಕೆಂದು ಹೇಳಬೇಕು; ಹಾಲಿನ ಅಭಾವ ಬಹಳ ವಿಷಾದಸ್ಥಿತಿಯಲ್ಲಿದೆ. ಪ್ರತಿಯೊಬ್ಬರಿಗೂ ಸುಮಾರು 12 ಔನ್ಸುಗಳಷ್ಟು ಹಾಲಾದರೂ ಬೇಕೆಂದು ಹೇಳುವಾಗ 2 ಔನ್ಸ್ ಕೂಡ ಸಿಕ್ಕುತ್ತಿಲ್ಲ. ಇದಕ್ಕೆ ಯಾವ ಯೋಜನೆಯನ್ನೂ ಮಾಡುತ್ತಿಲ್ಲವೆಂದು ಕಾಣುತ್ತದೆ.

ಮತ್ತೊಂದು ವಿಚಾರ ಬಹಳ ಸುಲಭವಾದುದು. ಕುಟ್ಟದ ಅಕ್ಕಿಯನ್ನು ಉಪಯೋಗಿಸುವುದಕ್ಕೆ ಜನರಿಗೆ ಪ್ರೋತ್ಸಾಹ ಕೊಡುವುದಕ್ಕೆ ಬದಲಾಗಿ ದಿನೇದಿನೇ ಮಿಲ್ಲುಗಳಿಗೆ ಹೆಚ್ಚುಹೆಚ್ಚಾಗಿ ಲೈಸೆನ್ಸ್ ಕೊಡುತ್ತಿದ್ದಾರೆ, ಇದು ಸರಿಯಲ್ಲ. ಹೋಟಲುಗಳನ್ನು ಹತೋಟಿಯಲ್ಲಿಡಬೇಕೆಂದು ಪ್ರಶ್ನೋತ್ತರಗಳ ಕಾಲದಲ್ಲಿ ಬೇಕಾದಷ್ಟು ಹೇಳಿದೆ. ಕಳ್ಳಬಟ್ಟಿ ಇಳಿಸಿ ಕುಡಿಯುವುದು ಬಹು ಜಾಸ್ತಿಯಾಗಿ ದೇಶದಲ್ಲಿ ಬಹಳಮಟ್ಟಿಗೆ ಜನರ ಆರೋಗ್ಯ ಕೆಡುತ್ತಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಪಾನನಿರೋಧವನ್ನು ಜಾರಿಗೆ ತರದೆ ಇರಬೇಕಾಗಿತ್ತು. ತಂದಮೇಲೆ ಯಾವ ರೀತಿಯಾದರೂ ಕಳ್ಳಬಟ್ಟಿ ತಯಾರುಮಾಡದಂತೆ ನೋಡಿಕೊಳ್ಳಬೇಕು. ಸರಿಯಾಗಿ ವ್ಯವಸ್ಥೆ ಮಾಡಿಲ್ಲದಿರುವುದರಿಂದ ಜನಾರೋಗ್ಯ ವಿಪರೀತವಾಗಿ ಕೆಡುತ್ತಿದೆ. ಇದಕ್ಕೆ ಕಾರಣ, ಜನಾರೋಗ್ಯ ಇಲಾಖೆಯವರು ತೃಪ್ತಿಕರವಾಗಿ ಕೆಲಸ ಮಾಡಿಲ್ಲದೇ ಇರುವುದು ಈಚೆಗೆ ಹೆಲ್ತ್ಯೂನಿಟ್ ಪ್ರಾರಂಭಿಸಿ ಡಿ. ಡಿ. ಟಿ. ಮುಂತಾದುವನ್ನು ಉಪಯೋಗಿಸುತ್ತಿರುವುದರಿಂದ ಬಹಳ ಮಟ್ಟಿಗೆ ಮಲೆನಾಡಿನಲ್ಲೂ ಮತ್ತು ಮೈದಾನದಲ್ಲೂ ಮಲೇರಿಯ ಹರಡದಂತಾಗಿ ಸಹಾಯವಾಗುತ್ತಿದೆ. ಆದರೂ ಸಹ ಇನ್ನೂ ಕೆಲವುಕಡೆ ಹೆಲ್ತ್ ಇಲಾಖೆಯವರು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದಕ್ಕೆ ಗಮನ ಕೊಡದಿರುವುದು ಬಹಳ ವಿಷಾದಕರ. ಉದಾಹರಣೆಗೆ ನೀರಾವರಿ ಕಾಮಗಾರಿಗಳು ಏರ್ಪಟ್ಟಿರುವ ಸ್ಥಳಗಳಲ್ಲಿ ಮುಂಜಾಗ್ರತೆಯಿಂದ ಮಲೇರಿಯ ಅಲ್ಲಿ ಉತ್ಪತ್ತಿಯಾಗದಹಾಗೆ ಮಾಡಬೇಕೆಂದು ಹಿಂದೆ ಅನೇಕ ಸಲ ಹೇಳಿದ್ದೇವೆ. ಕಣ್ವ ಪ್ರಾಜೆಕ್ಟನ್ನು ಕೈಕೊಂಡಾಗ ನೀರು ಬಿಡುವುದಕ್ಕೆ ಮುಂಚೆ ಎಲ್ಲಾ ವಿಧವಾದ ಏರ್ಪಾಡುಗಳನ್ನೂ ಮಾಡುತ್ತೇವೆಂದು ನ್ಯಾಯವಿಧಾಯಕಸಭೆಯಲ್ಲಿ ಸರ್ಕಾರದವರು ವಾಗ್ದಾನಮಾಡಿದ್ದರು. ಆದರೆ ಈ ದಿವಸ ಏನಾದರೂ ಮಾಡಿದ್ದಾರೆಯೆ ಎಂದು ನೋಡಿದರೆ ಏನೂ ಕಂಡುಬರುತ್ತಿಲ್ಲ. ಆ ಪ್ರಾಜೆಕ್ಟಿನ ಬಳಿ ಅನೇಕ ಗ್ರಾಮಗಳಲ್ಲಿ ಮಲೇರಿಯ ಆಗಲೇ ಷುರುವಾಗಿ ಅನೇಕರು ಮರಣಕ್ಕೆ ತುತ್ತಾಗಿದ್ದಾರೆ. ಹೀಗೆ ವಾಗ್ದಾನ ಮಾಡಿದ್ದನ್ನೂ ಕೂಡ ಸರ್ಕಾರದವರು ನಡೆಸಿಲ್ಲ. ವಿಶ್ವೇಶ್ವರಯ್ಯ ನಾಲಾ ಬಂದಮೇಲೆ ಅಲ್ಲಿ ಕಲಿತಿರುವ ಪಾಠವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದೇ ಇರುವುದಕ್ಕೆ ವಿಷಾದವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು.

ಆಸ್ಪತ್ರೆಗಳ ವಿಚಾರವನ್ನು ಬಡ್ಜೆಟ್ ಮೆಮೋರಾಂಡಂನಲ್ಲಿ ನೋಡಿದೆ. ಯುದ್ಧಾನಂತರ ಪುನರ್ರಚನಾ ಯೋಜನೆಗಳಿಗೆ ಸುಮಾರು 18 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಆದರೆ ಅದರಲ್ಲಿ ಒಂದು ಚಿಕ್ಕ ಕಾಸಾದರೂ ಗ್ರಾಮಾಂತರಗಳ ಉಪಯೋಗಕ್ಕೆ ತೋರಿಸಿಲ್ಲ. ಮಾನ್ಯ ಹಣಕಾಸಿನ ಸಚಿವರ ಭಾಷಣವನ್ನು ನೋಡಿದರೂ ಗ್ರಾಮಾಂತರಗಳಿಗಾಗಿ ವೈದ್ಯ ಸಹಾಯಕ್ಕೆ ಒಂದು ಕಾಸೂ ಉಪಯೋಗಿಸಲು ವ್ಯವಸ್ಥೆಮಾಡಿಲ್ಲ. ಗ್ರಾಮಗಳಿಗೆ ವೈದ್ಯ ಸಹಾಯ ಬೇಕಿಲ್ಲವೆ ? ಏಕೆ ಈ ವಿಧವಾದ ಅನ್ಯಾಯ ಮಾಡಿದ್ದೀರಿ ಎಂದು ಕೇಳಬೇಕಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಇನ್ನೂ ಆಸ್ಪತ್ರೆಗಳ

(ಶ್ರೀ ಟಿ. ಮಾದಯ್ಯಗೌಡರು).

ಏರ್ಪಾಡೇ ಇಲ್ಲ. ಉದಾರಣೆಗೆ ಚೆನ್ನಪಟ್ಟಣವು ಒಂದು ದೊಡ್ಡ ತಾಲ್ಲೂಕು. ಅಲ್ಲಿ ಸುಮಾರು 1½ ಲಕ್ಷ ಜನಸಂಖ್ಯೆಯಿರುವಾಗ ಒಂದೇ ಒಂದು ಆಸ್ಪತ್ರೆಯನ್ನು ಕೊಟ್ಟಿದ್ದೀರಿ. ಸುಮಾರು 10—15 ಮೈಲಿಗಳ ದೂರ ಬಂದರೂ ಆಸ್ಪತ್ರೆಯ ಸಹಾಯವಿಲ್ಲವೆಂದು ಹೇಳಿದರೆ ಅದು ಹೆಮ್ಮೆಪಡುವ ವಿಚಾರವಲ್ಲ. ಅನೇಕ ಸಂದರ್ಭಗಳಲ್ಲಿ ಈ ವಿಚಾರ ಹೇಳಿದೆ. ಕೆಲವು ತಾಲ್ಲೂಕುಗಳಲ್ಲಿ ಎರಡರಿಂದ ನಾಲ್ಕು ಆಸ್ಪತ್ರೆಗಳವರೆಗಿದೆ. ಅದೇ ಚನ್ನಪಟ್ಟಣ ತಾಲ್ಲೂಕಿನಲ್ಲಿ ಅಷ್ಟು ದೊಡ್ಡ ತಾಲ್ಲೂಕಿನಲ್ಲಿ ಅಷ್ಟು ಜನರಿರುವಕಡೆ ಒಂದೇ ಒಂದು ಆಸ್ಪತ್ರೆಯಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರ.—ಕೆಲವು ಕಡೆ ಸಾರ್ವಜನಿಕರು ಮುಂದೆ ಬಂದು ಆಸ್ಪತ್ರೆಗೆ ಕಟ್ಟಡ ವಗೈರೆ ಕೊಡುತ್ತಾರೆ. ಬಹುಶಃ ಅಲ್ಲಿ ಆ ತರಹ ಇಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಮಾದಯ್ಯಗೌಡರು.—ಅಲ್ಲಿ ಒಬ್ಬ ಮಹನೀಯರು ಬೇಕಾದಷ್ಟು ಹಣ ಕೊಡುತ್ತೇವೆ, ಕಟ್ಟಡ ಕೊಡುತ್ತೇವೆ ಆಸ್ಪತ್ರೆ ಕೊಡಿ ಎಂದು ಹೇಳಿ ಬಹಳ ದಿವಸ ಆಯಿತು. ಆದರೂ ಕೊಟ್ಟಿರುವುದಿಲ್ಲ.

ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡು ಜನರ ಉಪಯೋಗಕ್ಕಾಗಿ ಕೆಲವನ್ನು ಮಾಡಿ ಸರ್ಕಾರದವರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಆದರೆ ಮಾಡಿದ್ದನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಹೋದರೆ ಏನು ಪ್ರಯೋಜನ? ನಾವು ಕಣ್ಣಾರೆ ನೋಡಿರುವ ಹಾಗೆ ಕಣ್ವ ಪ್ರಾಜೆಕ್ಟಿನಲ್ಲಿ ನೀರು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ. ಸರಿಯಾಗಿ ಉಪಯೋಗಿಸುತ್ತಿಲ್ಲವೆಂದು ಇಲಾಖೆಯವರಿಗೆ ಹೇಳಿದರೂ ಪ್ರಯೋಜನವಾಗಿಲ್ಲ. ಅಲ್ಲಿ ಕೆಲವು ತೋಟಗಳವರು ನಿಗದಿಯಾದ ಹಣ ಕೊಡುತ್ತೇವೆ, ಕೊಂಚ ನೀರು ಕೊಡಿ ಎಂದು ಕೇಳಿ ಮಂತ್ರಿಗಳಿಗೂ ಹೇಳಿದ್ದಾರೆ. ಆದರೆ ನೋಡುತ್ತೇವೆ, ಮಾಡುತ್ತೇವೆ ಎಂದು ಹೇಳಿ ಇದುವರೆಗೆ ಏನೂ ಮಾಡಿಲ್ಲ. ಎಷ್ಟೋ ವರ್ಷದಿಂದ ಕೇಳುತ್ತಿದೆ. ಮೊದಲು ಬೇಕಾದ ಹಾಗೆ ನೀರಿತ್ತು, ತೋಟಗಳೂ ಚೆನ್ನಾಗಿದ್ದುವು. ಕಣ್ವ ಪ್ರಾಜೆಕ್ಟಾದ ಮೇಲೆ ನೀರನ್ನು ತೋಟಗಳಿಗೆ ಕೊಡಿ ಎಂದು ಎಷ್ಟೋ ದಿವಸದಿಂದ ಕೇಳಿದರೂ, ಎಷ್ಟೋ ಅರಿಕೆ ಮಾಡಿದರೂ ಫಲದಾಯಕವಾಗಿಲ್ಲ. ಅದು ಹೋಗಲಿ, ನೀರನ್ನಾದರೂ ಸರಿಯಾಗಿ ಉಪಯೋಗಿಸುತ್ತಿದ್ದಾರೆಯೆ ಅಂದರೆ ಅದೂ ಇಲ್ಲ. ಎಷ್ಟೋ ದೂರದಲ್ಲಿರುವ ತೋಟಗಳಿಗೆ, ಒಂದು ಕಾಸು ವರಮಾನವೂ ಇಲ್ಲದೇ ಇರುವ ಕಡೆಗೆ ನೀರನ್ನು ಕೊಟ್ಟಿದ್ದಾರೆ. ಇದನ್ನು ಪರೀಕ್ಷಿಸಿ ನೋಡಬಹುದು. ಬಹು ನೀರು ವ್ಯರ್ಥವಾಗುತ್ತಿದ್ದರೂ ಸರ್ಕಾರದವರು ಏಕೆ ಇದಕ್ಕೆ ಗಮನ ಕೊಡುತ್ತಿಲ್ಲ? ಏಕೆ ಸರಿಯಾದ ವ್ಯವಸ್ಥೆ ಮಾಡುತ್ತಿಲ್ಲ? ಇದೊಂದೂ ಅರ್ಥವಾಗುವುದಿಲ್ಲ. ನೀರಾವರಿ ಪ್ರಾಜೆಕ್ಟ್ ಮಾಡಿದ ಮೇಲೆ ಸರಿಯಾದ ಏರ್ಪಾಡಾಗದಿದ್ದರೆ ಅದು ತುಂಬಾ ವ್ಯಸನಕರ ಎಂದು ಹೇಳಬೇಕಾಗುತ್ತದೆ.

ವೆಟರಿನರಿ ಇಲಾಖೆಯವರನ್ನು ಆಸ್ಪತ್ರೆ ಸೌಕರ್ಯ ಅಲ್ಲಿಗೆ ಒದಗಿಸಿಕೊಡಿ ಎಂದು ಕೇಳಿದೆ. ಚೆನ್ನಪಟ್ಟಣ ತಾಲ್ಲೂಕು ಹಳ್ಳಿಕಾರ ದನಗಳಿಗೆ ಪ್ರಸಿದ್ಧಿಯಾಗಿದೆ. ಆದರೆ ಅಲ್ಲಿ ಸಾಕಷ್ಟು ಆಸ್ಪತ್ರೆಯಿಲ್ಲ, ಒಂದೇ ಒಂದಿದೆ.

ಕುರಿಕ್ಷೇತ್ರಗಳನ್ನು ಪ್ರಾರಂಭಮಾಡಿ ಒಳ್ಳೆಯ ಟಗರುಗಳನ್ನು ತಯಾರಿಸಿ ರೈತರಿಗೆ ಹಂಚಿದರೆ ಒಳ್ಳೆಯ ತಳಿ ಏರ್ಪಡುತ್ತದೆಂದು ತಿಳಿದುಕೊಂಡಿದ್ದೆವು. ಈಚೆಗೆ ಸರ್ಕಾರದವರು ಯಾವ ವಿಧವಾದ ಅಡ್ವೈಸ್ ಹೊಂದಿದರೋ ಗೊತ್ತಿಲ್ಲ, ಅದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಈಗ ಅವರು ಹೊಂದಿರುವ ಅಡ್ವೈಸ್ ಸರಿಯಾದುದಲ್ಲವೆಂದು ನನ್ನ ಭಾವನೆ. ಎಲ್ಲಾ ಕುರಿಗಳನ್ನೂ ಒಂದೇ ಕ್ಷೇತ್ರದಲ್ಲಿಟ್ಟು ಸಾಕುತ್ತೇವೆ ಎಂದು ಹೇಳುತ್ತಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಎರಡು ಮೂರು ಕ್ಷೇತ್ರಗಳನ್ನು ಮಾಡಿ ಆಯಾಯ ತಾಲ್ಲೂಕುಗಳಿಗೆ ತಕ್ಕಂತೆ ಟಗರುಗಳನ್ನು ರೈತರಿಗೆ ಹಂಚಿ, ತಳಿ ಅಭಿವೃದ್ಧಿ ಮಾಡಿದರೆ ದೇಶದಲ್ಲಿ ಕಂಬಳಿ ಕೈಗಾರಿಕೆ ಅಭಿವೃದ್ಧಿಯಾಗುತ್ತದೆ ಮತ್ತು ಆಹಾರ ಪರಿಸ್ಥಿತಿಯೂ ಉತ್ತಮಗೊಳ್ಳುತ್ತದೆ ಎಂಬುದರಲ್ಲಿ ಏನೂ ಸಂಶಯವಿಲ್ಲ. ಆದರಲ್ಲೂ ಈ ವಿಷಯದಲ್ಲಿ ಮಾನ್ಯಮಂತ್ರಿಗಳಾದ ಶ್ರೀ ಮರಿಯಪ್ಪನವರಿಗೆ ಬೇರೆಯವರ ಅಡ್ವೈಸ್ ಹೆಚ್ಚಾಗಿ ಬೇಕಾಗಿಲ್ಲ. ನಾಗಮಂಗಲ ತಾಲ್ಲೂಕಿನಲ್ಲಿರುವ ಅವರ ಸ್ವಂತ ಹಳ್ಳಿಯಲ್ಲಿ ಅವರಿಗೆ ಅನುಭವ ಇದೆ, ನೋಡಿದ್ದಾರೆ. ಈಗ ಕುರಿಗಳು ಹೀನ ಸ್ಥಿತಿಗೆ ಬರುತ್ತಾ ಇವೆ. ಸರಿಯಾದ ಒಂದು ಯೋಜನೆ ಇಲ್ಲ. ಕುರಿ ಅಭಿವೃದ್ಧಿಯನ್ನು ಯಾವ ರೀತಿ ಮಾಡುತ್ತಿದ್ದೇವೆ ಎಂಬುದನ್ನು ಹೇಳಿದರೆ ಚೆನ್ನಾಗಿತ್ತು. ಇನ್ನೊಂದು ವಿಚಾರದೇನೆಂದರೆ ಶೀಪ್‌ಬ್ರೀಡಿಂಗ್ ವಿಷಯದಲ್ಲಿ ತರಪೇತು ಹೊಂದಲು ಒಬ್ಬರು ಹೊರದೇಶಗಳಿಗೆ ಹೋಗಿಬಂದರು. ಅವರನ್ನು ಇವತ್ತು ಆಫೀಸಿನಲ್ಲಿ ಕುಳಿತುಕೊಂಡು ಕರೆಸ್‌ಪಾಂಡೆನ್ಸ್ ನಡೆಸುವುದಕ್ಕೆ ಇಟ್ಟುಕೊಂಡಿದ್ದಾರೆ. ನನಗಾದರೂ ಅನ್ನಿಸುತ್ತದೆ. ಈಚೀಚೆಗೆ ಜನರಲ್ಲಿ ಮತ್ತು ಕೆಳದರ್ಜೆಯ ನೌಕರರಲ್ಲಿ ಸರ್ಕಾರ ಎಂದರೆ ಏನು ಭಯ ಇರಬೇಕೋ ಅದು ಇಲ್ಲ, ಕಡಿಮೆಯಾಗುತ್ತಾ ಇದೆ. ಇದನ್ನು ಸರಿಪಡಿಸದೆ ಇದ್ದರೆ ಎಷ್ಟು ಹಣ ಖರ್ಚು ಮಾಡಿ ಎಷ್ಟು ಯೋಜನೆ ಹಾಕಿದರೂ ಪ್ರಯೋಜನವಿಲ್ಲ. ಅದೆಲ್ಲಾ ನಿಷ್ಪ್ರಯೋಜನವಾಗುತ್ತದೆ ಎಂದು ನನ್ನ ಭಾವನೆ. ಒಂದು ಉದಾಹರಣೆ ಹೇಳುತ್ತೇನೆ. ಅನೇಕ ಹಳ್ಳಿಗಳಲ್ಲಿದ್ದಂಥಾ ಸರ್ಕಾರಿ ಜಮೀನುಗಳನ್ನೆಲ್ಲಾ ರೈತರು ಕಿತ್ತುಕೊಂಡಿದ್ದಾರೆ, ತಮ್ಮ ಸ್ವಾಧೀನಪಡಿಸಿಕೊಂಡಿದ್ದಾರೆ. ಸರ್ಕಾರಿ ಜಮೀನುಗಳನ್ನು ಮಾತ್ರವಲ್ಲದೆ ಆಯಾಯ ಗ್ರಾಮಗಳಲ್ಲಿರುವ ಫಾರೆಸ್ಟ್ ಎಲ್ಲಾ ಹೋಗಿದೆ. ಅವರಲ್ಲಿ ಸ್ವಲ್ಪವೂ ಭಯ, ಭೀತಿ ಇಲ್ಲದೆ ಸಾವಿರಾರು ಎಕರೆಗಳನ್ನು ಸ್ವಾಧೀನ ಮಾಡಿಕೊಂಡಿದ್ದರೂ ಅವರನ್ನು ಏಕೆ ಹೀಗೆ ಮಾಡಿದ್ದೀರಿ ಎಂದು ಯಾರೊಬ್ಬರೂ ಕೇಳಿಲ್ಲ. ಹೆಚ್ಚು ಆಹಾರ ಬೆಳೆಯುವುದಕ್ಕೆ ಜಮೀನು ಕೊಡಿ, ನ್ಯಾಯವಾದ ರೀತಿ ನೀತಿಗಳು ಇಲ್ಲ. ಆದರೆ ಭಯ ಭೀತಿ ಇಲ್ಲದೆ, ನೀತಿ ಇಲ್ಲದೆ ಜನ ಆ ರೀತಿ ಮಾಡುತ್ತಿರುವುದಕ್ಕೆ ಯಾವ ವಿಧವಾದ ಕಾರ್ಯಕ್ರಮ ಕೈಕೊಂಡಿದ್ದೀರೋ ನನಗಂತೂ ಗೊತ್ತಿಲ್ಲ. ಉದಾಹರಣೆಗೆ ಕ್ಲೋಸ್‌ಪೇಟೆ ತಾಲ್ಲೂಕಿನಲ್ಲಿ ಹೊನಗೊಂದಿ ಫಾರೆಸ್ಟ್ ಇದೆ. ಅಲ್ಲಿ ಒಂದು ಜಮೀನಿನಲ್ಲೂ ಬಿಡದಂತೆ ಮರಗಳನ್ನೆಲ್ಲಾ ಕಡಿದಿದ್ದಾರೆ. ಜನರಲ್ಲಿ ನೀತಿ ಹೊರಟು ಹೋಗಿದೆ. ಸಾವಿರಾರು ಎಕರೆ ಸರ್ಕಾರಿ ಜಮೀನು ಪರಭಾರೆಯಾಗಿದೆ. ಇದು ಏನು ಎಂಬುದನ್ನು ವಿಚಾರ ಮಾಡುತ್ತಾ ಇಲ್ಲ. ಹೀಗೆಯೇ ಮರಗಳನ್ನು ಕಡಿಯಬೇಡಿ ಎಂದು ಹೇಳುತ್ತೀರಿ, ಆದಗೂ ಅನೇಕ ಮರಗಳನ್ನು ಕಡಿದು ಹಾಕುತ್ತಿದ್ದಾರೆ. ಕೆರೆಗಳಲ್ಲಿ ನೀರು ವ್ಯರ್ಥವಾಗುವುದನ್ನು ಆಗಲೇ ಹೇಳಿದೆ. ಮಂತ್ರಿಗಳು ಸಂಚಾರ ಮಾಡುವಾಗ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡುವುದನ್ನು ನೋಡುತ್ತಾ ಇದ್ದೀರಿ. ನಿಮ್ಮ ಕಣ್ಣು ಎದುರಿಗೆ ಆಗುತ್ತಾ ಇರುವ ಕಾನೂನು ಭಂಗವನ್ನು

ನೋಡಿಕೊಂಡು ಸುಮ್ಮನೆ ಇದ್ದರೆ ಅದು ದಿನ ದಿನಕ್ಕೆ ಜಾಸ್ತಿಯಾಗಿ ದೇಶದಲ್ಲಿ ಒಂದು ವಿಧವಾದ ಪರಿಸ್ಥಿತಿ ಏರ್ಪಟ್ಟು, ದೇಶ ಕೀಳ್ ದರ್ಜೆಗೆ ಇಳಿಯಲು ಅವಕಾಶ ವಾಗುತ್ತದೆ. ಅದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಗೊಳ್ಳದಿದ್ದರೆ ಏನು ಪ್ರಯೋಜನ ಎಂದು ಅನ್ನಿಸುತ್ತದೆ. ಯಾವ ನೌಕರರಾಗಲೀ ಯಾವ ಜನಗಳಾಗಲೀ ದೇಶದ ಅಭ್ಯುದಯಕ್ಕೆ ಕಂಟಕರಾಗಿ ವರ್ತಿಸುತ್ತಾರೋ ಅಂಥವರನ್ನು ಸ್ವಲ್ಪ ಬಿಗಿಯಾಗಿ ಜೋರಿನಿಂದ ಹದ್ದುಬಸ್ತಿನಲ್ಲಿಡಲು ತಕ್ಕ ಶಿಕ್ಷೆ ಕೊಡದಿದ್ದರೆ, ಧೈರ್ಯ ತೆಗೆದುಕೊಂಡು ಕೆಲಸ ಮಾಡದೇ ಇದ್ದರೆ ದೇಶದ ಸ್ಥಿತಿ ಉತ್ತಮವಾಗುವುದಿಲ್ಲ. ಕೇವಲ ಬಡ್ಜೆಟ್ಟನ್ನು ನೋಡಿಕೊಂಡು ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡುತ್ತೇವೆ ಎಂದರೆ ದೇಶ ಅಭಿವೃದ್ಧಿ ಸ್ಥಿತಿಗೆ ಬರುವುದಿಲ್ಲ. ಅದರ ಜೊತೆಗೆ ನಿಮ್ಮ ಆಡಳಿತ ದಕ್ಷತೆಯಿಂದ ನಡೆಯಬೇಕೆಂದು ನಾನು ಹೇಳಬೇಕಾಗಿದೆ. ಹಿಂದೆ ಅನೇಕ ಸಲ ಇದನ್ನು ಒತ್ತಿ ಹೇಳಿದ್ದೇನೆ. ಈಗಲೂ ಸಹ ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಹಣಕಾಸಿನ ಸ್ಥಿತಿಯ ವಿಚಾರದಲ್ಲಿ ನನಗಂತೂ ಸಂಶಯವಿಲ್ಲ, ಬಹಳ ಚೆನ್ನಾಗಿದೆ. ಬಹಳ ದಕ್ಷತೆಯಿಂದ ಇದನ್ನು ಉಪಯೋಗಿಸಿ ಜನಗಳ ಏಳಿಗೆಯಾಗುವಂತೆ ಮಾಡಬೇಕು. ಹಾಗೆ ಮಾಡಿದರೆ ಸರ್ಕಾರದವರು ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರಾಗುತ್ತಾರೆ ಎಂದು ಹೇಳಿ ನನ್ನ ಭಾಷಣವನು ಮುಗಿಸುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಅಧ್ಯಕ್ಷ ಮಹಾಶಯ, ಈ ವರ್ಷ ನಮ್ಮ ಸಚಿವರು ನಮ್ಮ ಮುಂದೆ ಇಟ್ಟಿರತಕ್ಕಂಥ ಬಡ್ಜೆಟ್ ನೋಡಿ ಕೆಲವು ವಿಷಯಗಳಲ್ಲಿ ಮಾತ್ರ ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ನಿಂತಿದ್ದೇನೆ. ಹಣಕಾಸಿನ ಸಚಿವರು ಮಾಡಿದಂಥ ವ್ಯಾಖ್ಯಾನದ ಪ್ರತಿಯೊಂದು ವಾಕ್ಯವನ್ನೂ ನಾನು ಬಹಳ ಶ್ರದ್ಧೆಯಿಂದ ಗಮನಿಸಿ, ಅವರು ಹೊಂದಿರತಕ್ಕಂಥ ಒಂದು ಸಂಶಯವೇನಿದೆಯೋ ಅದು ಯಥೇಷ್ಟವಾಗಿ ಉತ್ಪನ್ನವಾಗದಂತೆ ನಿವಾರಣೆ ಮಾಡಿಕೊಳ್ಳಲು ಸಲಹೆ ಕೊಡಲಿಕ್ಕೆ ನಿಂತಿದ್ದೇನೆ. ನಾವು ಅಧಿಕಾರಕ್ಕೆ ಬಂದು ಮೂರು ವರ್ಷ ಆಯಿತು. ಈ ಮೂರು ವರ್ಷದಿಂದ ರಾಷ್ಟ್ರನಿರ್ಮಾಣ ಕಾರ್ಯಗಳೇನಿವೆಯೋ ಅವಕ್ಕೆ ಹೇರಳವಾಗಿ ಹಣ ಖರ್ಚುಮಾಡುತ್ತ ಇದ್ದೇವೆ. ತಾವು ಗಮನಿಸಿದರೆ 1946–47 ರಲ್ಲಿ 352 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ. 1948–49 ರಲ್ಲಿ 690 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. 1949–50 ರಲ್ಲಿ 790 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ. ಈ ವರ್ಷ 925 ಲಕ್ಷ ರೂಪಾಯಿ ಖರ್ಚಾಗಿದೆ. ರಾಷ್ಟ್ರ ನಿರ್ಮಾಣ ಕಾರ್ಯಗಳಿಗೆ ಇಷ್ಟು ಖರ್ಚು ಮಾಡುವುದರಲ್ಲಿ ವಿದ್ಯಾಭ್ಯಾಸಕ್ಕೆ $327\frac{1}{2}$ ಲಕ್ಷ ರೂಪಾಯಿ ಖರ್ಚುಮಾಡುತ್ತಾ ಇದ್ದೇವೆ. ಇದರ ಜೊತೆಗೆ ರೈತರಿಗೆ ಅನುಕೂಲವಾಗಲೆಂದು ಹೇಳಿ ಮಲ್ಟಿ ಪರ್ ಪಸ್ ಕೋ ಆಪರೇಟೀವ್ ಸೊಸೈಟಿಗಳನ್ನು ಇಟ್ಟಿದ್ದೇವೆ. ಅವುಗಳಿಂದ ಜನಗಳಿಗೆ ಅನುಕೂಲವಾಗಿಲ್ಲವೆಂದು ಯಾರೂ ಹೇಳುವ ಹಾಗಿಲ್ಲ. ಎಲ್ಲೋ ಅಲ್ಲೊಂದು, ಇಲ್ಲೊಂದು ಸೊಸೈಟಿಯಲ್ಲಿ ಅಲ್ಪ ಸ್ವಲ್ಪ ಅವ್ಯವಸ್ಥೆ ಇದ್ದರೂ ಬಹಳ ಜನಗಳಿಗೆ ಅದರಿಂದ ಅನುಕೂಲವಾಗಿದೆ ಎನ್ನುವುದನ್ನು ಅನೇಕ ಜನಗಳು ಒಪ್ಪಬೇಕು. ಇದರ ಜೊತೆಗೆ ಹಳ್ಳಿಗಳ ಉದ್ಧಾರವಾಗಲಿ, ಜನಗಳು ಮುಂದೆ ಬರಲಿ ಎಂಬ ಉದ್ದೇಶದಿಂದ ಗ್ರಾಮಾಭಿವೃದ್ಧಿ ಮಾಡಿದೆವು, ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡಿದೆವು. ಇಷ್ಟೆಲ್ಲಾ ಆದರೂ ಹಣಕಾಸಿನ ಸಚಿವರು ಸಿಂಹಾವಲೋಕನ ಮಾಡುತ್ತಾ ಕೊನೆಯಲ್ಲಿ "Have all these brought no benefits to people !" ಎಂದು ಹೇಳಿ ಕೊಳ್ಳಬೇಕಾಗಿದೆ. ಹೀಗೆ ಹೇಳಬೇಕಾದರೆ ಅವರ ಮನಸ್ಸಿನಲ್ಲಿ ಏನೋ ಇರಬೇಕು; ಅಥವಾ ದೇಶದಲ್ಲಿರತಕ್ಕ ಟೀಕೆಯನ್ನು ಅವರು ಗಮನಿಸಿದ್ದಾರೆ ಎಂದು ತಿಳಿದುಕೊಂಡೆ. ಅದಕ್ಕೋಸ್ಕರವೇ ನಾನು ತಮ್ಮ ಗಮನವನ್ನು ಸೆಳೆಯುತ್ತಾ ಇರತಕ್ಕದ್ದು ಯಾವ ಅಂಶಕ್ಕೆ ಎಂದರೆ ನಾವು ಕಮ್ಯುನಿಸ್ಟ್ಸ್ ಅಲ್ಲ, ಸೋಷಿಯಲಿಸ್ಟ್ಸ್ ಅಲ್ಲ; ಬಡ್ಜೆಟ್ ನಾವು ಮಾಡುವಾಗ್ಗೆ ಗಾಂಧಿಯನೈಟ್ಸ್ ಎನ್ನುವುದನ್ನು ತೋರಿಸಿಕೊಳ್ಳುವ ಸಿದ್ಧಾಂತವನ್ನು ಹೊಂದಿ, ಸರಿಯಾದ ಪಂಥವನ್ನು ಹೂಡದೇ ಇರುವುದರಿಂದ ಅದೇ ನಮ್ಮ ಮೇಲೆ ಇರತಕ್ಕ ಟೀಕೆಗೆ ಒಂದು ಬಹಳ ಪ್ರಾಮುಖ್ಯವಾದ ಕಾರಣವಾಗಿದೆ ಎಂದು ನನ್ನ ಅಭಿಪ್ರಾಯ. ನಾವು ಸೋಷಿಯಲಿಸ್ಟಿಕ್ ಬಡ್ಜೆಟ್ ಮಾಡಿಲ್ಲ. ಮಾಡುವುದಕ್ಕೆ ಆಗುವುದೂ ಇಲ್ಲ. ಕ್ಯಾಪಿಟಲಿಸ್ಟಿಕ್ ನೇಷನಂತೆ ಬಡ್ಜೆಟ್ ಮಾಡಬೇಕೆಂಬುದು ನಮ್ಮ ಇಚ್ಛೆ ಅಲ್ಲ. ದೇಶದಲ್ಲಿ ಹೊಂದಬಹುದಾದ ಅನುಕೂಲಗಳು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೆಯಾಗಲಿ ಎಂಬುದು ನಮ್ಮ ಆಸೆಯಾಗಿದೆ. ಅಲ್ಲದೆ ದೇಶದಲ್ಲಿ ಜನಗಳೆಲ್ಲಾ ಸ್ವಯಂ ಪರಿಪೂರ್ಣತೆಯಿಂದ ತುಂಬಿರಲಿ ಎಂಬುದೇ ನಮ್ಮ ಆಸೆ. ಅದನ್ನು ಆಗಗೊಳಿಸತಕ್ಕ ವಿಧಾನದಲ್ಲಿ ಹಿಡಿದಿರುವ ದಾರಿ ಸರಿಯಲ್ಲ ಎಂಬುದನ್ನು ಸರ್ಕಾರದವರ ಗಮನಕ್ಕೆ ನಾನು ಆ ರೂಲಿಂಗ್ ಪಾರ್ಟಿಯ ಸದಸ್ಯನಾಗಿದ್ದು ತರಲಿಚ್ಛಿಸುತ್ತೇನೆ. ಗಾಂಧಿ ಶಿಷ್ಯರು ಎಂಬುದನ್ನು ಮರೆತು ಬಿಟ್ಟಿರಾ ಎಂದು ಕೇಳುತ್ತಿರುವುದು ಏಕೋ ನನಗೆ ಗೊತ್ತಿಲ್ಲ. ಉತ್ಪತ್ತಿ ಜಾಸ್ತಿ ಆಗಬೇಕು ಎಂಬ ಮಾತನ್ನು ಕೇಂದ್ರದಿಂದ ಇಲ್ಲಿಯವರೆಗೂ ಕೇಳುತ್ತಾ ಇದ್ದೇವೆ. ಉತ್ಪತ್ತಿ ಜಾಸ್ತಿಯಾಗಬೇಕಾದರೆ, ಆರ್ಥಿಕ ಜೀವನದ ಮಟ್ಟ ಏರಬೇಕಾದರೆ, ಅತಿ ಪ್ರಾಮುಖ್ಯವಾದ ಒಂದು ಸಲಕರಣೆಯನ್ನು ಮರೆತು ಬಡ್ಜೆಟ್ ತಯಾರು ಮಾಡುತ್ತಾ ಇದ್ದೇವೆ. ಇದನ್ನು ಹೇಳಬೇಕಾದರೆ, ಖಾದಿಯನ್ನು ಏಕೆ ಮರೆತಿರಿ ಎಂದು ಕೇಳುತ್ತೇನೆ. ಬಟ್ಟೆಗೆ ಬ್ಲಾಕ್ ಮಾರ್ಕೆಟ್ ಎಂದು ಹೇಳುತ್ತ ಇದ್ದೇವೆ. ಪರ್ಮಿಟ್ ಹಂಚುವಾಗ ಒಬ್ಬನೇ ದುಡ್ಡು ಮಾಡದಿರಲೆಂದು 12 ಜನಕ್ಕೆ ಕೊಟ್ಟಿದ್ದೇವೆ. ಇಷ್ಟೆಲ್ಲಾ ಆದರೂ ದೇಶದಲ್ಲಿ ಇವತ್ತು ಏನು ಆಗುತ್ತ ಇದೆ! ಉತ್ಪತ್ತಿ ಕಮ್ಮಿ ಎಂದು ಜನಕ್ಕೆ ಹೇಳುತ್ತೇವೆ. ಎಂದರೆ, ವಿದ್ಯಾಭ್ಯಾಸದ ಕ್ರಮ, ಸಮಾಜದ ವ್ಯವಸ್ಥೆಯಿಂದ ಉತ್ಪತ್ತಿ ಮಾಡದೇ ಇರುವವರ ಸಂಖ್ಯೆ ಜಾಸ್ತಿಯಾಗಿ ಉತ್ಪತ್ತಿ ಮಾಡುವವರ ಮೇಲೆ ಹೊರೆ ಬಹಳ ಜಾಸ್ತಿಯಾಗಿದೆ. ಉತ್ಪತ್ತಿ ಮಾಡುವವನ ಮೇಲಿರತಕ್ಕ ಹೊರೆಯನ್ನು ಕಡಿಮೆಮಾಡಬೇಕಾದರೆ ನನಗೆ ತಿಳಿದಿರುವ ಹಾಗೆ—ಶ್ರೀ ದಾಸಪ್ಪನವರೂ ಒಪ್ಪುತ್ತಾರೆಂದು ತಿಳಿದಿದ್ದೇನೆ—ಗಾಂಧಿಯವರು ವಿಧಾಯಕಮಾಡಿದ ರಚನಾತ್ಮಕ ಕಾರ್ಯಕ್ರಮಗಳ ವಿನಾ ಬೇರೆ ಏನೂ ಇಲ್ಲ. ಅವುಗಳಿಂದಲೇ ರಾಷ್ಟ್ರದ ಆತ್ಮನಿರ್ಮಾಣವಾಗಬೇಕೇ ಹೊರತು ಬೇರಾವ ವಿಧಾನದಿಂದಲೂ ಸಾಧ್ಯವಿಲ್ಲವೆಂದು ಅವರೂ ಒಪ್ಪುತ್ತಾರೆಂದು ನಂಬಿದ್ದೇನೆ. ಈ ಖಾದಿಗೆ ಈಗ ಹೆಚ್ಚಿಗೆ ಪ್ರೋತ್ಸಾಹ ದೊರೆಯುತ್ತಿಲ್ಲವೆಂದು ಕಾಣುತ್ತೆ. ನಾವಿದನ್ನು ಕಡ್ಡಾಯವಾಗಿ ಮಾಡಬೇಕು. ನಮ್ಮ ಉದ್ದೇಶ ಸುಲಿಗೆ ರಹಿತವಾದದ್ದು. ಸತ್ಯವನ್ನು ಸೃಷ್ಟಿ ಮಾಡಬೇಕೆಂದಿದ್ದೇವೆ. ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಸುಲಿಗೆ ಮಾಡಬಾರದು, ತಿಳುವಳಿಕೆಯುಳ್ಳವನು ತಿಳುವಳಿಕೆಯಿಲ್ಲದವನನ್ನು ಸುಲಿಗೆ ಮಾಡಬಾರದು; ವಿದ್ಯಾವಂತ

(ಶ್ರೀ ಟಿ. ಸುಬ್ರಹ್ಮಣ್ಯರವರು.)

ಅವಿದ್ಯಾವಂತನನ್ನು, ಅದೇ ರೀತಿ ಐಶ್ವರ್ಯವಂತ ಬಡವನನ್ನು ಸುಲಿಗೆ ಮಾಡಬಾರದು. ಇಂಥಾ ಸಮಾಜವನ್ನು ಕಲ್ಪನೆಮಾಡುವಾಗ ಅದಕ್ಕೆ ಸಾಧನವಾಗುವ ಖಾದಿಯನ್ನು ಮರೆತಿರುವುದು ನನಗಂತೂ ತೃಪ್ತಿಯಿಲ್ಲ. ಅಂಕಿ ಅಂಶಗಳೇನೇ ಇರಲಿ, ಈ ವರ್ಷ ಅದರ ಹೆಸರೂ ಕೂಡ ಇಲ್ಲಿಲ್ಲ. ಅಲ್ಲಿ ಇಲ್ಲಿ ಸಹಾಯ ಮಾಡುವಂತೆ ಅಲ್ಪಸ್ವಲ್ಪ ಕೊಟ್ಟಿರಬಹುದು ; ಅದರಿಂದೇನೂ ತೃಪ್ತಿಯಾಗುವುದಿಲ್ಲ. ಅದೆಲ್ಲಾ ತೇಪೆಯ ಕೆಲಸ, ಇದೇ ದಾರಿ ಹಿಡಿದು ಪೂರ್ಣಮನಸ್ಸಿನಿಂದ ಕೆಲಸ ಮಾಡಿದರೆ ನಮ್ಮ ಜೀವಮಾನ ಸುಖಮಯವಾಗುತ್ತದೆ. ಅದೇ ನಮ್ಮ ಜೀವದ ಉಸಿರಾಗುತ್ತದೆ. ಒಂದು 8 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಮುಡುಪಾಗಿಟ್ಟು ಹಳ್ಳಿಗಳಲ್ಲಿ ಖಾದಿ ತಯಾರುಮಾಡುವುದಕ್ಕೆ ಏರ್ಪಾಡು ಮಾಡಿಕೊಟ್ಟರೆ ಇನ್ನು ಅವರೆಂದಿಗೂ ಹೊರಗಿನವರನ್ನು ಆಶ್ರಯಿಸಬೇಕಾಗಿರುವುದಿಲ್ಲ. ಈ ರೀತಿಯಾಗಿ ಹಳ್ಳಿಗಳಲ್ಲಿ ಪರಿಪೂರ್ಣತೆಯನ್ನು ಉಂಟು ಮಾಡುವುದಕ್ಕೆ ಪ್ರಯತ್ನಮಾಡಬೇಕು. ಅದನ್ನು ಇದುವರೆಗೂ ಮಾಡದಿರುವುದರಿಂದಲೇ ಇಷ್ಟೊಂದು ಕೂಗಿಗೆ ಮುಖ್ಯವಾದ ಕಾರಣವೆಂದು ಹೇಳುತ್ತೇನೆ.

ಎರಡನೆಯದಾಗಿ ಪಾನನಿರೋಧವನ್ನೂ ಕೂಡ ಹೀಗೆಯೇ ಮರೆತಿದ್ದೀರಿ. ದೇಶದಲ್ಲೆಲ್ಲಾ ಕೂಗೆದ್ದು ಈ ಪೆಂಡಿಯನ್ನು ಹೊಡೆದೋಡಿಸಬೇಕೆಂದು ಹೊರಟಿದ್ದೀರಿ ಅಂಥವರೀಗ ಪಾನನಿರೋಧವನ್ನು ನಿಲ್ಲಿಸಿದರೆ ದೇಶಕ್ಕೆ ಅಪಾಯ ಹೆಚ್ಚುತ್ತದೆ ಎನ್ನುತ್ತೀರಿ. ಈಗ ಎರಡು ಕೋಟಿಗಳ ಆದಾಯವಿರುವ ಕಡೆ 4 ಕೋಟಿ ರೂಪಾಯಿಗಳು ಹೆಚ್ಚಿಗೆ ಬರುತ್ತದೆ. ಇದರಿಂದ ರಾಷ್ಟ್ರನಿರ್ಮಾಣ ಕಾರ್ಯಗಳನ್ನು ಕೈಕೊಂಡು ಜನರ ಜೀವನದ ಮಟ್ಟವನ್ನು ಹೆಚ್ಚಿಸುವುದಕ್ಕೂ ದೇಶದ ಉತ್ಪತ್ತಿಯನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆಂಬ ಕೂಗೂ ಬರುತ್ತಿದೆ. ಆದರೆ, ಒಂದು ಮುಖ್ಯವಾದ ತತ್ವವನ್ನು ಮರೆತಿದ್ದೀರಿ. ಶೇಕಡ 12 ಜನರೂ ಈಗ ಕುಡಿಯುತ್ತಾ ಇಲ್ಲವೆಂದು ಹೇಳಬಹುದು. ಅಂದ ಮೇಲೆ ಸುಮಾರು ಶೇಕಡ 10 ಜನರಿಂದ ಬರುವ ಎರಡು ಕೋಟಿ ರೂಪಾಯಿಗಳು ಹೋಗುತ್ತಿವೆ. ಶೇಂದಿ ಕಂಟ್ರಾಕ್ಟರುಗಳಿಂದ ಮತ್ತು ಇತರ ವಿಧಗಳಿಂದ ಒಂದು ಕೋಟಿ ರೂಪಾಯಿ ಆಗಬಹುದು. ಇದೂ ಸೇರಿ ಒಟ್ಟಿನಲ್ಲಿ 3 ಕೋಟಿ ರೂಪಾಯಿಗಳು ಈ ಪಾನನಿರೋಧದಿಂದ ಹೋಗುತ್ತಿರಬಹುದು. ಈ ಮೂರು ಕೋಟಿ ರೂಪಾಯಿಗಳನ್ನು ಉತ್ಪತ್ತಿಮಾಡಿಕೊಳ್ಳುವುದಕ್ಕೆ ಬೇರೆ ವಿಧಾನವಿಲ್ಲದೆ, ಈಗ ನೀವು ಅದನ್ನು ಕೈಬಿಡುತ್ತಿದ್ದೀರಿ. ಆದರೆ ಒಂದು ಮುಖ್ಯ ವಿಷಯವನ್ನು ನೀವು ಗಮನಿಸಬೇಕು. ಈ ಒಂದು ನೀತಿಯನ್ನು ಅನುಸರಿಸುವುದರಿಂದ ನೀವು ಅನೇಕ ವಿಷಯಗಳನ್ನು ಸಾಧಿಸಬಹುದು. ಜನರ ನೈತಿಕ ಮಟ್ಟವನ್ನು ಹೆಚ್ಚಿಸಬಹುದು, ಜೀವನ ಮಟ್ಟವನ್ನು ಹೆಚ್ಚಿಸಬಹುದು. ಯಾವುದನ್ನು 20 ವರ್ಷಗಳಿಂದ ಘಂಟಾಘೋಷವಾಗಿ ಕೂಗಿಕೊಳ್ಳುತ್ತಿದ್ದೇವೋ ಅದನ್ನು ಸಾಧಿಸುವುದಕ್ಕೆ ಇದನ್ನು ಜಾರಿಗೆ ತರುವುದರಿಂದ ಸಾಧ್ಯವಾಗುತ್ತದೆ. ಈಗ ನೀವು 5 ಡಿಸ್ಟ್ರಿಕ್ಟ್‌ಗಳಲ್ಲಿ ಇದನ್ನು ಜಾರಿಗೆ ತಂದಿದ್ದೀರಿ. ಅದನ್ನು ಪೂರ್ಣವಾಗಿ ತರುವುದು ಒಳ್ಳೆಯದು. 150 ವರ್ಷಗಳಿಂದ ದಕ್ಷತೆಯಿಂದ ಕೆಲಸ ಮಾಡಿ ಯಾವ ಕಳ್ಳ ಬಟ್ಟಿ ಸಾರಾಯಿಯನ್ನು ಹಿಂದಿನ ಸರ್ಕಾರದವರು ನಿಲ್ಲಿಸಿದ್ದರೋ, ಅಂಥಾದ್ದು ಹೋಗಿ ನೀವು ರಾಜ್ಯಕ್ಕೆ ಬಂದ ಮೂರೇ ವರ್ಷದಲ್ಲಿ ಮನೆ ಮನೆಯಲ್ಲೂ ಕಳ್ಳಬಟ್ಟಿ ಸಾರಾಯಿ ತಯಾರಾಗಲಿಕ್ಕೆ ಶುರುವಾಯಿತು. ಅದನ್ನು ನಿವಾಗೆ ಮಟ್ಟ ಹಾಕಲಿಕ್ಕಾಗಿಲ್ಲ. ಏನೇ ಇರಲಿ, ಪಾನನಿರೋಧವಿರುವ ಕಡೆ ಕುಡಿತದಲ್ಲಿ 50 ಜನರಿಗೆ ಜಾಸ್ತಿ ಜನರು ಬಿಟ್ಟಿದ್ದಾರೆಂದು ನಾನು ಖಂಡಿತ ಹೇಳಬಲ್ಲೆ. ಎಲ್ಲೋ ದೊಡ್ಡಮನುಷ್ಯನಾದವನು ಗಡಿಪ್ರದೇಶಕ್ಕೆ ಹೋಗಿ ಕುಡಿದು ಬರಬಹುದು. ಅಥವಾ ಕಳ್ಳವ್ಯಾಪಾರಮಾಡುವ ಚಟ ಇರುವವನು ದುಡ್ಡು ಮಾಡಬೇಕೆಂಬ ಚಟದಿಂದ ಕಳ್ಳಮಾರಾಟ ಮಾಡುತ್ತಿರಬಹುದು. ಅಂದ ಮಾತ್ರಕ್ಕೇ ಪಾನನಿರೋಧ ಪೂರ್ಣ ಸಫಲವಾಗಲಿಲ್ಲವೆಂದು ಬಿಟ್ಟು ಬಿಡಬೇಕೆಂದು ಹೇಳುವುದು ನ್ಯಾಯವಲ್ಲ ; ಹಾಗೆ ಮಾಡುವುದು ದೇಶಕ್ಕೆ ಅಪರಾಧ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ಏನೇ ಆಗಲಿ ಧೈರ್ಯಮಾಡಿ. ಅರ್ಧಂಬರ್ಧಮಾಡಿದರೆ ಕೆಟ್ಟ ಹೆಸರು ಬರುತ್ತದೆಯೇ ಹೊರತು ಯಶಸ್ಸು ಬರುವುದಿಲ್ಲ. ಅದ್ದರಿಂದ ದಯವಿಟ್ಟು ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ದುಡ್ಡಿಲ್ಲದೆ ಇದ್ದರೂ ಏನಾದರೂ ಮಾಡಿ ಇದನ್ನು ಸಾಧಿಸಬೇಕು. ಇವೆರಡನ್ನೂ ನಾನು ಮಂತ್ರಿಮಂಡಳದ ಪಾರ್ಟಿಯ ಸದಸ್ಯನಾಗಿ ಒತ್ತಾಯ ಮಾಡುತ್ತೇನೆ. ನಾವಿದಕ್ಕೆ ಒಪ್ಪಿಗೆ ಕೊಟ್ಟಿಲ್ಲವೆಂದು ಸಾರ್ವಜನಿಕರಿಗೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ. ಇವೆರಡನ್ನೂ ಖಂಡಿತ ಮರೆಯಬಾರದೆಂದು ನಾನು ಒತ್ತಿ ಹೇಳುತ್ತೇನೆ.

ಇವೆರಡೂ ಆದಮೇಲೆ, ದೇಶದಲ್ಲಿ ಇನ್ನೊಂದು ಕೂಗಿದೆ. ಅದೇನೆಂದರೆ ಆಹಾರದ್ದು. ನಿಜ, ಇಷ್ಟೊಂದು ದುಡ್ಡು ಖರ್ಚುಮಾಡುತ್ತಿದ್ದೇವೆ, ನಿಗಾ ತೆಗೆದುಕೊಳ್ಳುತ್ತಿದ್ದೇವೆ, ಮುಂದೆ ಏನೇನೋ ಮಾಡಬೇಕೆಂಬ ಉದ್ದೇಶ ಹೊಂದಿದ್ದೇವೆಂದು ಹೇಳಿದ್ದಾರೆ. ಅಂದ ಮಾತ್ರಕ್ಕೇ ಈ ಹೊಟ್ಟೆ ಕೂಗು ಹೋಗುವುದಿಲ್ಲ. ಮುಖ್ಯವಾಗಿ ಇಂದಿನ ಹೊಟ್ಟೆಯ ಕೂಗನ್ನು ತಪ್ಪಿಸುವ ಯೋಚನೆ ಮಾಡಬೇಕು. ಈಗ ನೀವು ಕೊಡುತ್ತಿರುವುದಾದರೂ 9 ಔನ್ಸು, 10 ಔನ್ಸು, ಇದಕ್ಕೆ ಹೆಚ್ಚಿಗೆ ಕೊಡುವುದಕ್ಕೆ ಚೈತನ್ಯವಿಲ್ಲ. ಆದರಿಂದ ನಾವು ಜೀವನ ಮಾಡುವ ಹಾಗಿಲ್ಲ; ಹೊರಗಿನಿಂದ ತರುವ ಹಾಗಿಲ್ಲ, ಒಟ್ಟಿನಲ್ಲಿ ಈ ಕಷ್ಟ ಪರಿಹಾರವಾಗುವುದಿಲ್ಲ. ಮನೆಯಲ್ಲಿರತಕ್ಕ ಹೆಣ್ಣು ಮಕ್ಕಳು ಕಾಂಗ್ರೆಸ್ಸನ್ನು ಶಪಿಸುವುದನ್ನು ತಪ್ಪಿಸುವ ಹಾಗಿಲ್ಲ. ಸರ್ಕಾರಕ್ಕೂ ಕಷ್ಟವಿದೆಯೆಂಬುದನ್ನು ನಾನು ಒಪ್ಪಿರುತ್ತೇನೆ. ಅಂದ ಮಾತ್ರಕ್ಕೇ ನೆಪಹೇಳಿದ್ದರಿಂದ ತೃಪ್ತಿಯಾಗುವುದಿಲ್ಲ. ಸರಿಯಾದ ದಾರಿಯನ್ನು ಕೂಡಲೆ ಕಂಡುಹಿಡಿದು ಜನಗಳಿಗೆ ಒದಗಿರುವ ಈ ಕಷ್ಟವನ್ನು ನಿವಾರಣೆ ಮಾಡದಿದ್ದರೆ ಗತ್ಯಂತರವಿಲ್ಲವೆಂದು ನಾನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಇದಕ್ಕೆ ಅನೇಕ ಮಾರ್ಗಗಳುಂಟು ಯೋಚನೆ ಮಾಡಬಹುದು. ಒಂದು ಸಲಹೆಯನ್ನು ಮೊನ್ನೆ ಕೊಟ್ಟಿದ್ದೇನೆ ನಾವು ಕೊಡುವುದು ಇಷ್ಟು. ಇದಕ್ಕಿಂತ ಹೆಚ್ಚಿಗೆ ಬೇಕಾದರೆ ಎಲ್ಲಿಂದಲಾದರೂ ತರಿಸಿಕೊಳ್ಳಿ ಎಂದು ಹೇಳಬಹುದು. ಇದನ್ನು ಯೋಚನೆ ಮಾಡಿನೋಡಬಹುದು

ಆಮೇಲೆ ಮಳೆಯಿಲ್ಲ ಮಳೆಯಿಲ್ಲ ಎಂದು ಹೇಳಿ ಮರಗಳು ಕಡಿಮೆಯಾಗಿ ಮಳೆ ಬರುವುದಕ್ಕೆ ಅಡ್ಡಿಯಾಗಿದೆಯೆಂದು ಹೇಳುತ್ತಿದ್ದಾರೆ ಮಳೆ ಬರುವುದಕ್ಕೆ ಮುಖ್ಯವಾಗಿ ಎರಡು ಅಂಶಗಳಿರಬೇಕು. ಮೊದಲನೆಯದು ಅರಣ್ಯಗಳು. ಎರಡನೆಯದು ಅದಕ್ಕಿಂತ ಮುಖ್ಯವಾಗಿ ಹುಲ್ಲುಗಾವಲುಗಳು. ನೆಲದಲ್ಲಿ ಹಸರು ತುಂಬಿ, ಆ ಹಸುರೆಲೆಗಳಿಂದ ಹೊರಸೂಸುವ ತಂಪು ವಾತಾವರಣ ಉಂಟಾಗಬೇಕು. ದೊಡ್ಡ ದೊಡ್ಡ ಮರಗಳು ಬೆಳೆದು ಬರಬೇಕಾದರೆ ಅನೇಕ ವರ್ಷಗಳು ಬೇಕು. ಆದರೆ ಮಳೆ ಬಂದ ಮಾರನೆಯ ದಿವಸವೇ ಭೂಮಿಯಲ್ಲಿ ಹಸುರು ಹುಲ್ಲು ಚಿಗುರಿಬಂದು ಅದರ ಗರಿಗಳ ಮೂಲಕ

ಎಲ್ಲಾ ಕಡೆಗೂ ತಂಪನ್ನು ಹರಡುತ್ತದೆ. ಈ ಅಂಶವನ್ನು ಮಾನ್ಯ ಮಂತ್ರಿಗಳು ಮರೆತಿರುವಂತೆ ಕಾಣುತ್ತದೆ. ಎಲ್ಲೆಲ್ಲಿ ಕಾವಲುಗಳೂ, ಗೋಮಾಳಗಳೂ ಸ್ವಲ್ಪ ಹೆಚ್ಚಿಗೆ ಇವೆಯೆಂದು ತೋರಿದುವೋ ಆ ತಕ್ಷಣ grow more food campaign ಗಾಗಿ ಆ ಜಮೀನುಗಳನ್ನು ಸಾಗಿಗೆ ಕೊಟ್ಟುಬಿಡುತ್ತಿದ್ದಾರೆ. ಇದು ಬಹಳ ತಪ್ಪು. ಜಮೀನು ಕೊಡಬೇಕೆಂದರೆ ಏನಿದ್ದರೂ ಮಲೆನಾಡಿನಲ್ಲಿ ವಿಶಾಲವಾಗಿ ಪಾಳುಬಿದ್ದಿರುವ ಪ್ರದೇಶಗಳನ್ನು ಕೊಡಬಹುದೇ ಹೊರತು ಇಂಥಾ ಗೋಮಾಳಗಳನ್ನೂ ಕಾವಲುಗಳನ್ನೂ ಕೊಡುವುದರಿಂದ grow more food ಯೋಜನೆಗೆ ಇನ್ನೂ ಅಡಚಣೆಯೇ ಆಗುತ್ತದೆಂದು ಹೇಳುತ್ತೇನೆ. ಸರ್ಕಾರಿ ಅಫೀಸರುಗಳೇನಿದ್ದರೂ ಎರಡಕ್ಕೆ ಎರಡು ಸೇರಿದರೆ ನಾಲ್ಕು ಎಂದು ಹೇಳುವುದಕ್ಕೆ ತಿಳಿದಿರತ್ತಾರೆಯೇ ಹೊರತು, ಅದರ ಮುಂದಿನ ಪರಿಣಾಮವೇನಾಗುತ್ತದೆಂದು ಯೋಚನೆ ಮಾಡುವುದಿಲ್ಲ. ಎಷ್ಟೋ ಕಡೆಗಳಲ್ಲಿ ಗೋಮಾಳ ಲೆಕ್ಕಾಚಾರಕ್ಕಿಂತ ಸ್ವಲ್ಪ ಜಾಸ್ತಿ ಇದ್ದರೂ ಆ ಜಾಸ್ತಿ ಪ್ರದೇಶವನ್ನು ಗೋಮಾಳದಿಂದ ತೆಗೆದುಹಾಕಿ ಸಾಗಿಗೆ ಕೊಟ್ಟಿರುವ ಸಂದರ್ಭಗಳಿವೆ. ಹೀಗೆ ಕೊಡುವುದರಿಂದ ಏನು ಸಾಧನೆಯಾಯಿತು? ಇನ್ನೊಂದೇನೆಂದರೆ, ಭೂಮಿಯ ಸ್ವಭಾವ ಸಸ್ಯಗಳನ್ನು ಸಮೃದ್ಧಿಯಾಗಿ ಬೆಳೆಸುವುದು. ತನ್ನಷ್ಟಕ್ಕೆ ತಾನೇ ಬೇಕಾದಷ್ಟು ಸಸ್ಯಗಳು ಹುಟ್ಟುತ್ತವೆ. ಇದೆಲ್ಲಾ ಸೂರ್ಯ ಚಂದ್ರರು ಹುಟ್ಟುವಂತೆ ಸ್ವಾಭಾವಿಕವಾದುವುಗಳು. ಮಳೆ ಜಾಸ್ತಿಯಾಗಿರುವ ಕಡೆ ತಾನೇ ಚೆನ್ನಾಗಿ ಬೆಳೆಯುತ್ತದೆ, ಸ್ವಲ್ಪ ಕಡಿಮೆಯಾಗಿರುವ ಕಡೆ ಅಷ್ಟು ಹೆಚ್ಚಾಗಿ ಬೆಳೆಯುವುದಿಲ್ಲ. ಆದ್ದರಿಂದ ಇಂಥ ಮಳೆ ಕಡಿಮೆಯಾಗಿರುವ ಕಡೆ ಈ ಸಸ್ಯಗಳು ಹಾಳಾಗದಂತೆ ನೋಡಿಕೊಳ್ಳಬೇಕು. ಈ ಸಸ್ಯಗಳಿಗೇನಾದರೂ ಎಳೆಯದರಲ್ಲಿ ಆಡುಗಳು ಬಾಯಿಹಾಕಿತೆಂದರೆ ಅವುಗಳ ಪರಿಣಾಮ ಆಗಿಹೋಗುತ್ತೆ. ಆದ್ದರಿಂದ ಅದರಷ್ಟಕ್ಕೆ ಅದೇ ಬೆಳೆಯುವುದಕ್ಕೆ ಅಡ್ಡಿಬರುವುದು, ಅಡಚಣೆ ಮಾಡುವುದು ತಪ್ಪು. ಆದಕ್ಕೆ ನನ್ನ ಸಲಹೆ ಇಷ್ಟೇ. ಸ್ಥೂಲವಾಗಿ ಹೇಳುತ್ತೇನೆ. ಎಲ್ಲಿ ಮಳೆ ಮೂವತ್ತು ಅಂಗುಲಗಳಿಗೆ ಕಡಿಮೆಯಾಗುತ್ತದೆಯೋ ಅಲ್ಲಿ ಆಡುಗಳನ್ನು ಬೆಳೆಸುವುದನ್ನು ವಿರೋಧಮಾಡಬೇಕು ಅವುಗಳನ್ನು ಬೆಳೆಗಳನ್ನು ತಿನ್ನುವುದಕ್ಕೆ ಬಿಡಬಾರದು. ಸಿಲೋನ್‌ನಲ್ಲಿ ಈ ರೀತಿ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಮಳೆ ಕಡಿಮೆಯಾಗಿರುವ ಕಡೆ ರೈತರು ಆಡುಗಳನ್ನು ಸಾಕುವುದು ಬೇಕಾಗಿಲ್ಲ. ಅವುಗಳ ಹಾವಳಿ ಬಹಳ ಹೆಚ್ಚು. ಆದುದರಿಂದಲೇ ಮಳೆ ಜಾಸ್ತಿ ಬರುತ್ತಿದ್ದ ಕಡೆ, ಕಡಿಮೆಯಾಗುತ್ತದೆ ಎಂದು ಪ್ರವೀಣರು ಹೇಳಿದ್ದಾರೆ.

ಒಬ್ಬ ಸದಸ್ಯರು.—ಮಹಾತ್ಮ ಗಾಂಧಿಜಿಯವರು ಆಡಿನ ಹಾಲನ್ನು ಕುಡಿಯುತ್ತಿದ್ದರು!

ಶ್ರೀ ಟಿ. ಸುಬ್ರಹ್ಮಣ್ಯರವರು.—ಗಾಂಧಿಜಿಯವರು ಆಡಿನ ಹಾಲನ್ನು ಕುಡಿದಿರಬಹುದು, ಆಡುಗಳಿಂದ ಹಣವೂ ಬರಬಹುದು, ಆದರೆ ಎಲ್ಲೆಲ್ಲಿ 28 ಅಥವ 30 ಅಂಗುಲಕ್ಕಿಂತ ಮಳೆ ಕಡಿಮೆ ಬೀಳುತ್ತದೆಯೋ ಅಲ್ಲಿ ಆಡುಗಳನ್ನು ಬೆಳೆಸಬಾರದೆಂದು ಹೇಳುತ್ತೇನೆ. ಇದು ನನ್ನ ಸಿದ್ಧಾಂತ. ಇದನ್ನು ಹೇಳಿದ್ದೇನೆ. ಬೇಕಾದರೆ ಇದರಂತೆ ಮಾಡಬಹುದು, ಇಲ್ಲದಿದ್ದರೆ ಬಿಡಬಹುದು.

ಹೆಚ್ಚು ಬೆಳೆ ಬೆಳೆಯುವ ಯೋಜನೆಯ ಸಂಬಂಧವಾಗಿ ಒಂದು ವಿಷಯ ಹೇಳಬೇಕಾಗಿದೆ. ಈ ಸಂಬಂಧವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಒಂದೆರಡು ಜಿಲ್ಲೆಗಳಲ್ಲಿ concentrate ಮಾಡಿರುವುದಾಗಿ ಮಂತ್ರಿಗಳು ಹೇಳಿದರು. ಹೀಗೆ ಮಾಡುವುದು ಸರಿಯಲ್ಲ. ಉದಾಹರಣೆಗಾಗಿ ಹೇಳುತ್ತೇನೆ—ಚನ್ನರಾಯಪಟ್ಟಣ, ಅಸತಿ, ತುರುವೇಕೆರೆ, ತಿಪಟೂರು ತಾಲ್ಲೂಕುಗಳಲ್ಲಿರುವ ವ್ಯಾಲಿಯಲ್ಲಿ ನಮ್ಮ ಪೂರ್ವಿಕರು ಕೆರೆಗಳನ್ನು ಹೇಗೆ ಕಟ್ಟಿದ್ದಾರೆಂದರೆ, ಒಂದು ಸಣ್ಣ ಕೆರೆಯಿದ್ದರೆ ಅದರ ಮುಂದೆ ಇನ್ನೊಂದು ದೊಡ್ಡ ಕೆರೆ, ಅದರ ಮುಂದೆ ಇನ್ನೂ ದೊಡ್ಡಕೆರೆ ಹೀಗೆ ಕಟ್ಟಿದ್ದಾರೆ. ಒಂದು ಕೆರೆ ತುಂಬಿದರೆ ಹೆಚ್ಚಿನ ನೀರು ಮುಂದಿನ ಕೆರೆಗೆ ಹೋಗುತ್ತದೆ. ಅವುಗಳನ್ನು ಕಟ್ಟಿದವರು ನಮ್ಮ ಪೂರ್ವಿಕರು, ಈಗಿರತಕ್ಕ ಇಂಜಿನಿಯರುಗಳಲ್ಲ. ಈಗ ಎಂಟು ವರ್ಷಗಳಿಂದ ನೊಣವಿನಕೆರೆ ತುಂಬಿಲ್ಲ, ಇದಕ್ಕಾಗಿ ಜನ ಮಂತ್ರಿಗಳಲ್ಲಿ ಬಂದು, ಅಧಿಕಾರಿಗಳಲ್ಲಿ ಬಂದು ಹೇಳಿಕೊಂಡು ಆ ಕೆಲಸ ಮಾಡಿಸಿಕೊಳ್ಳಬೇಕೇ ಅಥವಾ ಗಡಿಯಾರ ನಡೆದಹಾಗೆ ಸರ್ಕಾರದ ಯಂತ್ರ ನಡೆಯುತ್ತದೆಯೆ? ಏಕೆ ಆ ಕೆರೆಗಳು ತುಂಬುತ್ತಿಲ್ಲ, ಮಳೆ ಬರದೇ ಇರುವುದು ಕಾರಣವೇ, ಅಥವಾ ಸರಿಯಾಗಿ ಕೆರೆಗೆ ನೀರು ಹರಿದುಬರುತ್ತಿಲ್ಲವೇ ಅಥವಾ ಬಂದ ನೀರು ಅಲ್ಲಿ ನಿಲ್ಲುತ್ತಿಲ್ಲವೇ ಎಂಬುದನ್ನು ವಿಚಾರಣೆ ಮಾಡಿ ನೋಡಬೇಡವೆ? ಇದನ್ನು ಮಾಡದಿದ್ದರೆ ಅಪರಾಧ, ಇಂಥ ಕೆಲಸಗಳನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕೆಂದು ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನೊಂದು ವಿಷಯ. ಶ್ರೀ ಚನ್ನಬಸಪ್ಪನವರು ಅನೇಕ ವಿಷಯಗಳನ್ನು ನನ್ನ ಕಿವಿಗೆ ಹಾಕಿದರು. ಅವುಗಳೆಲ್ಲವೂ ನಡೆದಿವೆ ಎಂದು ಹೇಳಿದರು. ಅಂಥಾದ್ದೇನಾದರೂ ನಡೆದಿದ್ದರೆ ಅದು ದೇಶಕ್ಕೆ ಶೋಭಾಯಮಾನವಾದುದಲ್ಲ, ಮುಖಕ್ಕೆ ಮಸಕು ಹಾಕಿಕೊಳ್ಳಬೇಕಾಗುತ್ತದೆ. ಯಾರೇ ಆಗಲಿ, ಯಾವ ಅಧಿಕಾರಿಗಳೇ ಆಗಲಿ ಮಿತಿಮೀರಿ ವರ್ತಿಸಿದರೆ ಅದರಿಂದ ದೇಶಕ್ಕೇ, ಸರ್ಕಾರಕ್ಕೇ ಕೆಟ್ಟ ಹೆಸರು ಬರುತ್ತದೆ. ಯಾರಾದರೂ ಅಧಿಕಾರಿಗಳು ಹೆಚ್ಚು ದವಸವನ್ನು ಒದಗಿಸುತ್ತೇವೆಂಬ ನೆಪದಲ್ಲಿ ತಪ್ಪು ಹೆಜ್ಜೆಯನ್ನಿಟ್ಟರೆ ಅದರಿಂದ ಕೆಟ್ಟ ಪರಿಣಾಮವಾಗುತ್ತದೆ. ಹೊರಗಿನವರು ಈ ದೇಶದಲ್ಲಿ ಶಿಷ್ಟರಿಗೆ, ಯೋಗ್ಯರಿಗೆ, ಜಾಗವೇ ಇಲ್ಲ ಎಂದು ಹೇಳಬಹುದು. ಇಂತಹ ಅಧಿಕಾರಿಗಳಿಗೆ ತಕ್ಕ ಶಿಕ್ಷೆಮಾಡಬೇಕು.

ಬಡ್ಜೆಟ್ಟಿನ ಅಂಕಿ ಅಂಶಗಳು ನಮ್ಮನ್ನು ಗಾಬರಿಗೊಳಿಸುತ್ತವೆ. ಆದರೆ ಒಳಹೊಕ್ಕು ನೋಡಿದರೆ ಗಾಬರಿಗೊಳ್ಳಲು ಕಾರಣವೇನೂ ಇಲ್ಲ. ಅರ್ಥ ಸಚಿವರು ಇನ್ನೊಂದು ಮಾತನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

'Let it not be forgotten that along with the reserves we inherited huge subsidies, revised scales, capital commitments on Irrigation, Electricity and Iron and Steel Works, and various other postwar schemes.'

ಎಂದು ಹೇಳಿದ್ದಾರೆ. ಅವರು, ಅರ್ಥಸಚಿವರು 'ನಾನು ಬಹಳ ಹಿಡಿತದ ಮನುಷ್ಯ' ಎಂದು ಹೇಳಿಕೊಳ್ಳುತ್ತಾರೆ, ಅದನ್ನು ನಾನು ಒಪ್ಪುವುದಿಲ್ಲ. ಅವರಿಗೆ ಅವರೇ ಬೆನ್ನು ತಟ್ಟಿಕೊಂಡರೆ ನಾವು ಒಪ್ಪಬೇಕಲ್ಲ. ನಾನೇ ಶಿವ ಎಂದುಕೊಳ್ಳಬಹುದು, ಆದರೆ ಯಾವನಾದರೂ ಬಂದು ಕಾಲಿಗೆ ಬೀಳಬೇಕಲ್ಲ! ಅದಿರಲಿ, ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಖರ್ಚು ಮಾಡಬೇಕಾಯಿತು, ಸಂಬಳಗಳನ್ನು ಹೆಚ್ಚು ಕೊಡಬೇಕಾಯಿತು ಈ ಖರ್ಚುಗಳನ್ನೆಲ್ಲಾ ಬಿಟ್ಟು ಹೋದರು, ಹಿಂದಿನವರು; ಆದರೆ ಅವುಗಳ ಜೊತೆಗೆ ಒಂದು ಬಿಗಿಯಾದ ಆಡಳಿತವನ್ನೂ ಬಿಟ್ಟುಹೋದರೆಂಬುದನ್ನು ಮರೆಯಬಾರದು. ಆದರೆ ಅಂತಹ ಆಡಳಿತ ಯಂತ್ರ ಈ ಹೊತ್ತು ಛಿದ್ರವಾಗಿ ಹೋಗಿದೆಯೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅವರಿಗಿಂತ ಹೆಚ್ಚು ಹಣವನ್ನು ಈಗ ಖರ್ಚುಮಾಡುತ್ತಿದ್ದೇವೆ. ಆದರೆ ಅವ

(ಶ್ರೀ ಟಿ. ಸುಬ್ರಹ್ಮಣ್ಯರವರು.)

ರಲ್ಲಿದ್ದ ಆಡಳಿತ ದಕ್ಷತೆಯನ್ನು ತೋರಿಸುತ್ತಿಲ್ಲ. ಹೀಗೆ ಛಿದ್ರವಾಗುವುದಕ್ಕೆ ಕೆಲವು ಕಾರಣಗಳಿವೆ. ಅನೇಕ ಸರ್ಕಾರಿ ಅಧಿಕಾರಿಗಳಿದ್ದಾರೆ. ಇವರಲ್ಲಿ ಹಣ ತಿನ್ನುವವರೂ ಇದ್ದಾರೆ, ಸತ್ಯವಂತರೂ ಇದ್ದಾರೆ, ಬಚ್ಚಿ ಒಳಗೆ ವ್ಯಾಪಾರ ಮಾಡುವವರೂ ಇದ್ದಾರೆ. ಈ ವಿಷಯದ ಗೋಜಿಗೆ ನಾನು ಈಗ ಹೋಗುವುದಿಲ್ಲ; ಇದಕ್ಕೆ ಕೆಚ್ಚೆದೆ ಬೇಕಾಗುತ್ತದೆ. ಒಟ್ಟಿನಲ್ಲಿ ಆಡಳಿತ ಸಡಿಲವಾಗುತ್ತಿದೆಯೆಂಬುದು ನಿಜ. ಸರ್ಕಾರದಲ್ಲಿ ಭಯವಿಲ್ಲ, ಪ್ರಜಾಸರ್ಕಾರ ಎಂಬ ಪ್ರೇಮವೂ ಇಲ್ಲ. ಈ ಯಂತ್ರದ ಕೀಲು ಕೀಲೂ ಸಡಿಲವಾಗುತ್ತಿದೆ. ಇದಕ್ಕೆ ನಾವೇ ಬಹುಮಟ್ಟಿಗೆ ಕಾರಣಕರ್ತರೆಂದು ಹೇಳಬಹುದು. ಈ ಹೊತ್ತು ಇದನ್ನು ಸರಿಪಡಿಸದೇ ಹೋದರೆ ಕಾಲ ಮಿಂಚಿ ಹೋಗಬಹುದು! ಡೆಪ್ಯುಟಿ ಕಮೀಷನರು ಅಥವಾ ಸಬ್ ಡಿವಿಜನ್ ಆಫೀಸರು ಅವರವರ ಕ್ಷೇತ್ರದಲ್ಲಿ ನಿರ್ವಂಚನೆಯಿಂದ, ನಿರ್ದಾಕ್ಷಿಣ್ಯದಿಂದ ಕೆಲಸಮಾಡಬೇಕೆಂದಿದ್ದರೆ ನಾವು ಅವರು ಹಾಗೆ ಮಾಡುವುದಕ್ಕೆ ಬಿಡದೇಯಿರುವ ಸಂದರ್ಭಗಳೂ ಇವೆ. ಇಂತಹ ಪ್ರಸಂಗಗಳಾಗದೇಯಿರುವಹಾಗೆ ನೋಡಿಕೊಳ್ಳಬೇಕು. ಹಾಗೆ ಮಾಡದಿದ್ದರೆ ತೊಂದರೆಯಾಗುತ್ತದೆ. ನಾನು ಇನ್ನೂ ಅನೇಕ ವಿಷಯಗಳಲ್ಲಿ ಬಹಳ ಮಾತನಾಡಬೇಕೆಂದಿದ್ದೆ, ಆದರೆ ತಾವು ಏನು ಹೇಳುತ್ತೀರೋ ಗೊತ್ತಿಲ್ಲ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದು ನನ್ನ ಆಶೆ. ಅದೇನೆಂದರೆ, ಶ್ರೀ ಮಾದಯ್ಯಗೌಡರು ಹೇಳಿದ ಹಾಗೆ ಸರ್ಕಾರದವರು ಹಣವನ್ನೊದಗಿಸುತ್ತಾರೆ, ಒದಗಿಸಿದ ಹಣವೆಲ್ಲ ಸರಿಯಾಗಿ ಖರ್ಚಾಗದೇಹೋದರೆ ಹಣವನ್ನೊದಗಿಸಿ ಏನೂ ಪ್ರಯೋಜನವಿಲ್ಲ. ಉದಾಹರಣೆಗೆ ಹೇಳುವುದಾದರೆ, ತುಮಕೂರು ಜಿಲ್ಲೆಯಲ್ಲಿ ಸ್ಯಾನಿಟೇಷನ್‌ಗಾಗಿ ಹೋದವರ್ಷ 40 ಸಾವಿರ ರೂಪಾಯಿ ಒದಗಿಸಿದರು. ಆದರೆ ಖರ್ಚಾಗಿರುವುದು ಕೇವಲ ಎರಡು ಸಾವಿರ ರೂಪಾಯಿ. ಹೀಗಾದರೆ ಏನು ಪ್ರಯೋಜನ?

ಇನ್ನೊಂದು ವಿಚಾರ. ಈ ದೇಶದಲ್ಲಿ ನಾವೆಲ್ಲ ಅನ್ನ ತಿನ್ನುತ್ತಾ ಜೀವಿಸುವವರು. ಸರ್ಕಾರದವರು ನಮಗೆ ಮಣ್ಣು ಮುಕ್ಕಿಸುತ್ತಿದ್ದಾರೆ. ಯಾವ ರಸ್ತೆಯಲ್ಲಿ ಹೋದರೂ ನಾವು ಮಣ್ಣು ಮುಕ್ಕದೇ ಹೋಗುವುದಕ್ಕಾಗುವುದಿಲ್ಲ. Mechanise ಮಾಡಬೇಕೆಂಬುದೇನೋ ಸರಿ, ಆದರೆ ಅತಿಯಾಗಬಾರದು. ಈಗ ಅರ್ಧಘಂಟೆಗೊಂದೊಂದು ಬಸ್ಸು ರಸ್ತೆಗಳಲ್ಲಿ ಹೋಗುತ್ತದೆ. ಎತ್ತಿನಗಾಡಿಗಳನ್ನು ಕೊಂದಿದ್ದೇವೆ. ಹಳ್ಳಿಗಳಲ್ಲಿ ರೈತ ಮಳೆಗಾಲದಲ್ಲಿ ಎತ್ತು ದನಗಳನ್ನಿಟ್ಟುಕೊಂಡು ಸಾಗುವಳಿ ಕೆಲಸ ಮಾಡುತ್ತಿದ್ದ. ಬೇಸಿಗೆಯಲ್ಲಿ ಹುಲ್ಲು, ಕಾಳು ಮುಂತಾದವನ್ನು ಸಂತೆಗಳಿಗೆ ಹೇರಿಕೊಂಡುಹೋಗಲು ಎತ್ತಿನ ಗಾಡಿಗಳನ್ನು ಉಪಯೋಗಿಸುತ್ತಿದ್ದ, ದನಗಳನ್ನು ಚೆನ್ನಾಗಿ ಸಾಕುತ್ತಿದ್ದ, ಈ ಹೊತ್ತು ಏನಾಗಿದೆ? ಅನೇಕ ಜನರು ಬಸ್ಸುಗಳಲ್ಲಿ ಕುಳಿತುಕೊಳ್ಳುತ್ತಾರೆ, ಬಸ್ಸುಗಳನ್ನಿಟ್ಟುಕೊಂಡಿರುವವರಿಗೂ ಹಣ ಬರುತ್ತದೆ. ಆದರೆ ಇದರ ಜೊತೆಗೆ ನಮ್ಮ ದೇಶದ ಹಣವೂ ಹೊರಗೆ ಹೋಗುತ್ತಿದೆ. ಇದನ್ನು ತಡೆಗಟ್ಟಬೇಕು. ಬಸ್ಸುಗಳು ಹೆಚ್ಚಿದಷ್ಟೂ ಜನ ಅವುಗಳಲ್ಲಿ ಕುಳಿತುಕೊಳ್ಳುವುದೂ ಹೆಚ್ಚುತ್ತದೆ. ಹೆಂಡದ ಅಂಗಡಿಯನ್ನು ಊರಿನಲ್ಲಿಟ್ಟು ಕುಡಿಯಬೇಡಿ ಎಂದು ಹೇಳಿದರೆ ಪ್ರಯೋಜನವಿಲ್ಲ. ಆ ಕುಡಿಯುವ ಚಟವಿರುವವರು ಕುಡಿದೇ ಕುಡಿಯುತ್ತಾರೆ. ಆದಕಾರಣ ಅದನ್ನು ತೆಗೆಯಬೇಕು. ವಿಪರೀತ ಬಸ್ಸುಗಳಿಗೆ ಅವಕಾಶ ಕೊಟ್ಟರೆ ಒಂದು ಮೈಲಿ, ಅರ್ಧಮೈಲಿ ದೂರ ಹೋಗಬೇಕಾಗಿರುವವನೂ ಕೂರುತ್ತಾನೆ. ಅಲ್ಲದೆ ಎಷ್ಟು ಬಸ್ ಲೈಸೆನ್ಸ್ ಕೊಡಬೇಕೋ ಅಷ್ಟನ್ನು ಕೊಡದೆ ಜಾಸ್ತಿ ಕೊಟ್ಟರೆ ರಸ್ತೆಗಳನ್ನು ಚೆನ್ನಾಗಿಡುವುದಕ್ಕಾಗುವುದಿಲ್ಲ, 1940ನೆಯ ಇಸವಿಯಲ್ಲಿದ್ದ traffic ನೋಡೋಣ 1950ನೆಯ ಇಸವಿಯಲ್ಲಿರುವ traffic ನೋಡೋಣ, ಎಷ್ಟೋ ಹೆಚ್ಚಿದೆ; ಹೀಗಿರುವಾಗ ರಸ್ತೆ ರಿಪೇರಿಗೆ ಅಷ್ಟೇ ಹಣ ಒದಗಿಸಿದರೆ ಪ್ರಯೋಜನವಿಲ್ಲ, ರಸ್ತೆಯನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕಾಗುವುದಿಲ್ಲ. ಆದುದರಿಂದ ಬಸ್ಸುಗಳನ್ನು ಹತೋಟಿಗೆ ತರದಿದ್ದರೆ ದೇಶದ ಐಶ್ವರ್ಯ ಬಹುವಾಗಿ ಹೊರಗೆ ಹರಿದುಹೋಗುತ್ತದೆಂದು ಹೇಳುತ್ತೇನೆ. ಮನೆಯನ್ನು ಮೇಲಿನಿಂದ ಕಟ್ಟುವುದು ಪ್ರಯೋಜನವಿಲ್ಲ, ಕೆಳಗಿನಿಂದ ಕಟ್ಟಿಕೊಂಡು ಹೋಗಬೇಕು. ತಳಹದಿ ಸರಿಯಾಗಿರಬೇಕು. ಹೀಗಾಗಬೇಕಾದರೆ ಹಳ್ಳಿಗಳು ಸರಿಹೋಗಬೇಕು. ಮೊದಲು ತಲೆಯಮೇಲಿಟ್ಟು ತೆಗೆದುಕೊಂಡುಹೋಗುತ್ತಿದ್ದ ವೀಳೆಯದೆಲೆಯ ಪಿಂಡಿಯನ್ನು ಕೂಡ ಈಹೊತ್ತು ಬಸ್ಸಿನ ಮೇಲೆ ಹಾಕುವುದಕ್ಕೆ ಹೋಗುವ ಮನೋಭಾವ ಬಂದಿದೆ. ಹೀಗೆ ಮಾಡುವುದರಿಂದ, ಅಪ್ರತ್ಯಕ್ಷವಾಗಿ ನಾವು ಇದಕ್ಕೆ ಉತ್ತೇಜನ ಕೊಟ್ಟಂತಾಗಿ ಬಸ್ಸುಗಳಿಗೆ, spare parts ಗಳಿಗೆ ಹಣ ಖರ್ಚಾಗಿ ನಮ್ಮ ದೇಶದ ಹಣ ಹೊರಗೆಹೋಗುವುದಲ್ಲದೆ ನಮ್ಮ ರಸ್ತೆಗಳೂ ಕೆಟ್ಟುಹೋಗುತ್ತವೆ. ಬಸ್ಸು ಲೈಸೆನ್ಸ್ ಕೊಡದಿದ್ದರೆ ಅಧಿಕಾರದಲ್ಲಿರುವವರನ್ನು ಕೆಟ್ಟವರೆಂದು ಹೇಳುತ್ತಾರೆ. ಹೇಳಲಿ, ಅಧಿಕಾರದಲ್ಲಿದ್ದ ಮೇಲೆ ಹೀಗೆ ಕೆಲವರಿಂದ ಬೈಸಿಕೊಳ್ಳಬೇಕು. ನಿಂದಕರಿರಬೇಕು, ನನ್ನಂಥವರು, ಇಲ್ಲದಿದ್ದರೆ ಸರ್ಕಾರ ಸ್ವೇಚ್ಛೆಯಾಗಬಹುದು. ಆದರೆ ನಾನು ಯಾಕೆನ್ನೋ ನಿಂದನೆ ಮಾಡುತ್ತಿದ್ದೇನೆಂದು ದಯವಿಟ್ಟು ತಾವುಗಳ್ಯಾರೂ ಭಾವಿಸಬಾರದು. ಹಾಗೂ ಒಂದು ವೇಳೆ ನಾನು ನಿಂದನೆ ಮಾಡುತ್ತಿದ್ದೇನೆಂದರೆ ಅದರಿಂದ ಅನುಕೂಲವಾಗುತ್ತದೆಯೇ ವಿನಾ ಅನಾನುಕೂಲ ಖಂಡಿತ ಆಗುವುದಿಲ್ಲ. ಹೀಗೆ ನಿಂದಕರೇ ಇಲ್ಲದಿದ್ದರೆ ಆಡಳಿತ ವ್ಯವಸ್ಥೆಯಲ್ಲಿ ಸಡಿಲ ಹುಟ್ಟಿ ಅನೇಕ ಅನರ್ಥಗಳಾಗಬಹುದು. ಒಂದು ಬಸ್ಸನ್ನು ನಡೆಸಲು ಅವಕಾಶ ಕೊಡಬೇಕಾಗಿದ್ದರೆ ರಸ್ತೆ ಮೊದಲು ತಡೆಯುತ್ತದೆಯೇ ಎಂಬುದನ್ನು ನೋಡತಕ್ಕದ್ದು ಮುಖ್ಯವಾದ ವಿಷಯವಾಗಿರುತ್ತೆಂಬುದನ್ನು ಮಾನ್ಯ ಸಚಿವರು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕೆಂದ ನಾನು ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇದು ಮುಖ್ಯವಾಗಿ ಬಾಲಕರುಗಳ ಯುಗ. ಇವರುಗಳನ್ನು ಸಮಾಧಾನ ಪಡಿಸುವುದು ಬಹಳ ಕಷ್ಟ. ನನಗೆ ಈ ವಿಚಾರಗಳು ಚೆನ್ನಾಗಿ ಗೊತ್ತಿರುವುದರಿಂದ ಹೇಳುತ್ತಿದ್ದೇನೆ. ಒಂದು ವೇಳೆ 'ನೀವು ಹೇಳತಕ್ಕದ್ದನ್ನು ನೀವು ಹೇಳಿ' ನಾವು ಮಾಡತಕ್ಕದ್ದನ್ನು ನಾವು ಮಾಡುತ್ತೇವೆಂದು ಹೇಳುವುದಾದರೆ ಈ ಬಾಲಕರ ಪ್ರಪಂಚದಲ್ಲಿ ಬಹಳ ಕಷ್ಟ ಬೇಗ ಪ್ರಾಪ್ತಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನು ನಮ್ಮ ದೇಶದ ಆಹಾರ ಪರಿಸ್ಥಿತಿಯ ಬಗ್ಗೆ. ನಮ್ಮ ದೇಶದ ಹಣವನ್ನು ವಿಪರೀತವಾಗಿ ಹೊರಗಡೆಗೆ ಕಳುಹಿಸುತ್ತಿದ್ದೀರೇ ಹೊರತು ನಾವು ನಮ್ಮ ಕಾಲುಗಳ ಮೇಲೆ ನಿಲ್ಲುವಂತೆ ತಾವಿನ್ನೂ ಮಾಡಿರುವುದಿಲ್ಲ. ತಾವು ಹೀಗೆ ಮಾಡುತ್ತಿದ್ದರೆ ನಾವು ಆ ಸ್ವಪರಿಪೂರ್ಣತೆಯನ್ನು ಖಂಡಿತ ಹೊಂದುವುದಿಲ್ಲ. ನೀವೀಗ ಮಾಡುತ್ತಿರುವುದೆಲ್ಲಾ ಬರೀ ಒಂದು ಆಡಂಬರ. ಹೋದವರ್ಷದ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದಿಡುವಾಗ ಮಾನ್ಯ ಮಂತ್ರಿಗಳಾಗಿರತಕ್ಕ ಶ್ರೀ ಟಿ. ಮರಿಯಪ್ಪನವರು short-term projectsಗಳ ಮೇಲೆ ತಮ್ಮ ನಿಗವನ್ನು ಇಡುವುದಾಗಿ ತಿಳಿಸಿದ್ದರು. ಆದರೆ ಅದೊಂದು rule of law ಆಯಿತೇ ವಿನಃ ಅದರಿಂದೇನೂ ಸಾಧ

ವಾಗಿಲ್ಲ. ಆಹಾರ ಪರಿಸ್ಥಿತಿ ಇದ್ದಹಾಗೂ ಇರದೆ ಇನ್ನೂ ಭೀಕರ ಸ್ಥಿತಿಗೆ ಬರುತ್ತಿದೆ. ಈ ಭಾಗದಲ್ಲಿ ತಾವು ನಿಜವಾಗಿಯೂ ಕಾರ್ಯಸಾಧನೆ ಮಾಡಬೇಕೆಂಬ ಉದ್ದೇಶ ಉಳ್ಳವರಾಗಿದ್ದರೆ ಪ್ರತಿಯೊಂದು ಜಿಲ್ಲೆಯನ್ನೂ ಒಂದೊಂದು ಯೂನಿಟ್ಟನ್ನಾಗಿ ಮಾಡಿ, ಆ ಜಿಲ್ಲೆಯಲ್ಲಿರುವ ಹೂಳು ಮುಚ್ಚಿರತಕ್ಕ ಕೆರೆಗಳನ್ನು ಒಂದನ್ನೂ ಬಿಡದಂತೆ ರಿಪೇರಿ ಮಾಡಿದರೆ ಆಗ ಸಾಧ್ಯವಾಗಬಹುದು. ಇದರಿಂದ ತಮಗೆ ಹೆಚ್ಚಿನ ಖರ್ಚು ಬರಬಹುದು. ಅದಕ್ಕೆ ಸಾಕಾಗುವಷ್ಟು ಹಣ ತಮ್ಮಲ್ಲಿಲ್ಲದೆ ಇರಬಹುದು. ಆದರೆ ಈ ಬಗ್ಗೆ ತಾವು ಕೇಂದ್ರ ಸರ್ಕಾರದವರಿಂದ ಸಾಕಷ್ಟು ಸಬ್‌ಸಿಡಿ ಪಡೆದು, ಹೆಚ್ಚಿನ ಹಣ ಖರ್ಚುಮಾಡಿ ಮಾಡಿದರೆ ಈ ಆಹಾರ ಪರಿಸ್ಥಿತಿ ಸುಧಾರಿಸೀತೇ ವಿನಾ ಇಲ್ಲದಿದ್ದರೆ ಇದು ಖಂಡಿತ ಜಯಪ್ರದವಾಗುವುದಿಲ್ಲವೆಂದು ಹೇಳುತ್ತೇನೆ. ಆದರೆ ಈಗ ನಡೆಯುತ್ತಿರುವ ಪ್ರಕಾರ ಕೆಲವು ಪ್ರದೇಶಗಳಲ್ಲಿ ವರ್ಷಾನುಗಟ್ಟಳೆ ಮಳೆಯೇ ಬೀಳುತ್ತಿಲ್ಲ. ಮತ್ತೆ ಕೆಲವು ಕಡೆ ವರ್ಷಕ್ಕೆ 28-30 ಇಂಚು ಆಗುತ್ತಿದ್ದಂಥ ಕಡೆಗಳಲ್ಲಿ ಈಗ 14-15 ಇಂಚಿನಷ್ಟು ಮಳೆ ಕೂಡ ಆಗುತ್ತಿಲ್ಲ. ಇನ್ನು ಕೆಲವು ಪ್ರದೇಶಗಳಲ್ಲಿ ಮಳೆಷ್ಟು ಬೇಕಾಗಿಲ್ಲದಿದ್ದರೂ ಅಲ್ಲಿ ಹುಚ್ಚಾಪಟ್ಟೆ ಸುರಿಯುತ್ತಿರುತ್ತದೆ. ಹೀಗೆ ಇದು ಕುರುಡು ಮಳೆಯಾಗಿ ಹೋಗಿ ಎಲ್ಲಿಗೆ ಬೇಕೋ ಅಲ್ಲಿಗೆ ಬಾರದೆ ಬೇಡವಾದ ಸ್ಥಳಗಳಲ್ಲಿ ಬೀಳುತ್ತದೆ. ಅಲ್ಲದೆ ಆವಶ್ಯಕವಾಗಿದ್ದ ಕಾಲದಲ್ಲಿ ಬಾರದೆ, ಅಕಾಲದಲ್ಲಿ ಬಂದು ಅದರಿಂದ ಅನುಕೂಲವಾಗುವ ಬದಲು, ಹೆಚ್ಚಿನ ಅನಾನುಕೂಲವಾಗುತ್ತದೆ. ಈ ಕಾರಣಗಳಿಂದ ಇಲ್ಲಿಯತನಕ ಹೂತುಹೋಗಿರತಕ್ಕ ಪ್ರತಿಯೊಂದು ಸಣ್ಣ ಮತ್ತು ದೊಡ್ಡ ಕೆರೆಗಳನ್ನು ಮೊದಲು ತಾವು ರಿಪೇರಿ ಮಾಡಿಸಬೇಕು. ಈ ಒಂದು ನನ್ನ ಸಲಹೆಯಿಂದ ತಮಗೆ ಖರ್ಚಾಗುವುದಾದರೂ, ಅತಿ ಹೆಚ್ಚೆಂದು ಹೇಳಿದರೆ 20 ಲಕ್ಷ ರೂಪಾಯಿಗಳಾಗಬಹುದು. ಇದು ತಮ್ಮ ಮೇಲೆ ಬಿದ್ದಿರತಕ್ಕ ಒಂದು ದೊಡ್ಡ ಜವಾಬ್ದಾರಿ. ಖರ್ಚಿನ ಸಂದರ್ಭ ಒದಗಿದಾಗ ತಮ್ಮದು ಎಷ್ಟೇ ಹಿಡಿತದ ಕೈ ಆಗಿದ್ದರೂ ದುಡ್ಡು ಅದರಷ್ಟಕ್ಕೆ ಅದೇ ಹೊರಟುಹೋಗುತ್ತದೆ. ಇದನ್ನು ಯಾರಾದರೂ ಅನ್ಯಾಯವಾದ ಟೀಕೆಯೆಂದು ಭಾವಿಸುವುದಾಗಿದ್ದರೆ, ಅದು ಸರಿಯಾದ ಭಾವನೆಯಲ್ಲವೆಂದು ಹೇಳಬೇಕಾಗುತ್ತದೆ. ಒಂದು ಕೆರೆಯ ಹೂಳನ್ನು ತೆಗೆಯಲು 10—15 ದಿವಸಗಳಾಗಬಹುದು. ಅಥವಾ ಇನ್ನೂ ಒಂದೆರಡು ದಿವಸಗಳು ಹೆಚ್ಚಾಗಬಹುದು, ಆದರೂ ಚಿಂತೆಯಿಲ್ಲ. ಒಂದು ಕಡೆಯಿಂದ ಎಷ್ಟೆಷ್ಟು ಕೆರೆಗಳು ಸಾಧ್ಯವಾಗುತ್ತದೋ ಅಷ್ಟೂ ಕೆರೆಗಳ ಹೂಳನ್ನು ತೆಗೆದುಹಾಕಿ ಆದಷ್ಟು ಬೇಗ ಇದನ್ನು ಮುಗಿಸಬೇಕು. ಇಲ್ಲವಾದರೆ ಖಂಡಿತ ನಾವೆಲ್ಲರೂ ಇನ್ನೂ ಹೆಚ್ಚಿನ ಕಷ್ಟಕ್ಕೀಡಾಗಬೇಕಾಗುತ್ತದೆ. ಈಗ ತಾವು ಕೊಡುತ್ತಿರುವ ಪಡಿತರ ಪ್ರಮಾಣ ಯಾರಿಗೂ ಸಾಕಾಗುತ್ತಿಲ್ಲ. ಅದಕ್ಕಾಗಿ ಹೆಚ್ಚು ದವಸವನ್ನು ಕದ್ದು, ಮುಚ್ಚಿ ತರಬೇಕಾಗಿದೆ. ಆದರೆ ನಮ್ಮಂಥವರಿಗೆ ಹಾಗೆ ಮಾಡಲು ಮನಸ್ಸಿಲ್ಲ. ಇರತಕ್ಕ ಕಾನೂನಿಗೆ ವಿರೋಧವಾಗಿ ಹೋಗಬಾರದೆಂಬುದು ಧರ್ಮ ಸಂಕಟ ಆದರೆ ಎಲ್ಲಿಯತನಕ ಹೀಗೆ ಉಪವಾಸ ಮಾಡಲು ಸಾಧ್ಯ? ಹಾಗೆ ಉಪವಾಸ ಮಾಡತಕ್ಕವರು ಎಷ್ಟು ಜನರಿದ್ದಾರೆ. ತಾವು ಒಬ್ಬರು ಚೆನ್ನಾಗಿದ್ದರೆ, ಇಡೀ ದೇಶವೇ ಕ್ಷೇಮವಾಗಿರುತ್ತೆಂದು ಯಾರಾದರೂ ಭಾವಿಸಿದ್ದರೆ, ಅದು ಶುದ್ಧ ಮಿಥ್ಯವೇ ಸರಿ. ಈ ಹೊಟ್ಟೆಯ ಕೂಗಿಗಿಂತಲೂ ದೊಡ್ಡ ಕೂಗು ಬೇರೊಂದಿಲ್ಲ. ಆದ ಪ್ರಯುಕ್ತ, ತಾವು ತಮ್ಮನ್ನು ಹೊಗಳಿಸಿ ಕೊಳ್ಳುವ ಮತ್ತು ಅಡ್ವೆರ್ಟೈಜ್ ಮಾಡಿಕೊಳ್ಳುವ ಪ್ರಯತ್ನಗಳನ್ನು ಬಿಟ್ಟು ಮೊದಲು ತಾವು ಈ ಆಹಾರ ಬಾಬಿಗೆ ಮುಖ್ಯ ನಿಗಾ ಕೊಡತಕ್ಕದ್ದು ಅತ್ಯಗತ್ಯ. ಹಾಗೆ ಮಾಡದೆ ಇದನ್ನು ತಾತ್ಸಾರ ಮಾಡಿದಲ್ಲಿ ಈ ಹೊಟ್ಟೆ ಕೂಗಿನಿಂದ ದೇಶದಲ್ಲಿ ಮುಂದೆ ಕ್ರಾಂತಿ ಏಳಬಹುದು. ಇಂದಿನ ಯುವಕರ ಮನಸ್ಸು ಹೇಗಿರುತ್ತೆಂಬುದು ಮತ್ತು ಕ್ಷಣ ಕ್ಷಣಕ್ಕೂ ಹೇಗೆ ಬದಲಾವಣೆಯಾಗುತ್ತಿದೆಯೆಂಬುದೂ ಚೆನ್ನಾಗಿ ನನ್ನ ಅನುಭವಕ್ಕೆ ಬಂದಿದೆ. ಈ ಮಹತ್ಪ್ರಶ್ನೆ ತಮ್ಮೊಬ್ಬರದೇ ಎಂದು ನಾನು ಹೇಳುತ್ತಿಲ್ಲ. ಈ ಪ್ರಶ್ನೆ ಈ ಸಭೆಯಲ್ಲಿರತಕ್ಕ ಪ್ರತಿಯೊಬ್ಬ ಮಾನ್ಯ ಸದಸ್ಯರು ಮತ್ತು ಮಂತ್ರಿಗಳ ಹಾಗೂ ಇಡೀ ದೇಶದ ಜನತೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಇದೇನೂ ಒಂದು ಪಾರ್ಟಿ ಪ್ರಶ್ನೆಯಲ್ಲ. ಎಲ್ಲರೂ ಸಹಕರಿಸಿ ನಡೆಸತಕ್ಕ ಕೆಲಸವಾಗಿದೆ. ದೇಶದ ಇಡೀ ಶಾಂತಿ ಈ ಆಹಾರ ಪ್ರಶ್ನೆಯನ್ನೇ ಅವಲಂಬಿಸಿರುತ್ತದೆ. ಆದುದರಿಂದ ಎಲ್ಲರೂ ಸಹಕರಿಸಿ ಮೊದಲು ಈ ಹೊಟ್ಟೆ ಕೂಗನ್ನು ಮೊದಲು ಪರಿಹರಿಸಬೇಕೆಂದು ಹೇಳುತ್ತೇನೆ.

ಈಗ ನಡೆಯುತ್ತಿರುವ ಮತ್ತೊಂದು ಕೆಲಸವೇನೆಂದರೆ ಯಾರಾದರೂ ಒಬ್ಬಾತನಿಗೆ ಸರ್ಕಾರದಲ್ಲಿ ಏನಾದರೂ ಒಂದು ಕೆಲಸವಾಗಬೇಕಾಗಿದ್ದರೆ ಆತ ಕೂಡಲೇ ಬಂದು ಬನ್ನಿ ಸುಬ್ರಹ್ಮಣ್ಯರವರೇ ತಮ್ಮಿಂದ ಒಂದು ಕೆಲಸವಾಗಬೇಕಾಗಿದೆ, ಏನೋ ನಾವು ಹುಟ್ಟಿರುವುದೇ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡುವುದಕ್ಕಾಗಿ ಎನ್ನುವ ರೀತಿಯಲ್ಲಿ ಮಂತ್ರಿಗಳ ಹತ್ತಿರ ಸ್ವಲ್ಪ ಹೋಗಬೇಕಾಗಿದೆ ಎಂದು ಒತ್ತಾಯಮಾಡಿ ಜನರನ್ನು ಕರೆದುಕೊಂಡು ಬರುವುದು ಒಂದು ವಾಡಿಕೆಯಾಗಿ ಹೋಗಿದೆ. ಆದರೆ ಹಾಗೆ ಸುಬ್ರಹ್ಮಣ್ಯರ ಮಾತನ್ನು ಮಂತ್ರಿಗಳು ಕೇಳುತ್ತಾರೆಯೇ, ಇಲ್ಲವೇ, ಎಂಬುದು ಅವರಿಗೇನು ಗೊತ್ತು. ಅಂತೂ ಬನ್ನಿ ಹೋಗೋಣ..................

ಒಬ್ಬ ಮಾನ್ಯ ಸದಸ್ಯರು.—ಕೆಲಸ ಮಾಡಿಕೊಡುತ್ತೇವೆಂದು ಹೇಳುವುದಿಲ್ಲ. 'ಊ' ಎಂದು ಹೇಳುತ್ತಾರೆ ಅಷ್ಟೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಧರ್ಮಕ್ಕೆ ಕಟ್ಟುಬಿದ್ದು ಹಾಗೆ ಹೇಳಬೇಕಾಗುತ್ತೆ. ಇದು ಬಹಳ ದೊಡ್ಡ ಸಮಸ್ಯೆ. ಮಂತ್ರಿಗಳಿರತಕ್ಕದ್ದು ತಮ್ಮ ಸುಖಕ್ಕಾಗಲ್ಲ. ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯ ಸುಖಕ್ಕಾಗಿ ಎಂಬುದನ್ನು ತಾವು ಅರಿತುಕೊಂಡು ಹೋಗಬೇಕೆಂದು ಹೇಳುತ್ತೇನೆ.

ಇನ್ನು ಕಡೆಯದಾಗಿ ಈ ಹಣಕಾಸಿನ ವಿಚಾರದಲ್ಲಿ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಆದರೆ ನಾನೇನೂ ಈ ವಿಚಾರದಲ್ಲಿ ಅಷ್ಟು ನಿಪುಣನಲ್ಲ. ಅಲ್ಲದೆ ಈಗಾಗಲೇ ನಾನು ಸಭೆಯ ಹೆಚ್ಚಿನ ಕಾಲವನ್ನೂ ಸಹ ತೆಗೆದುಕೊಂಡಂತಾಗಿದೆ. ತಾವು ಮಂಡಿಸಿರತಕ್ಕ ಆಯವ್ಯಯಪಟ್ಟಿಯಲ್ಲಿ ನಮ್ಮ ಸಂಸ್ಥಾನದಲ್ಲಿ ಕೈಗೊಳ್ಳುವಂಥ ದೊಡ್ಡ ಯೋಜನೆಗಳ ಬಗ್ಗೆ ನಮಗೆ ಕೇಂದ್ರ ಸರ್ಕಾರದವರಿಂದ 2 ಕೋಟಿ ರೂಪಾಯಿಗಳಷ್ಟು ದ್ರವ್ಯ ಸಹಾಯ ಸಾಲದ ಮತ್ತು ಗ್ರಾಂಟ್ ರೂಪದಲ್ಲಿ ಒದಗುತ್ತೆಂದು ಹೇಳಲಾಗಿದೆ. ಈ ಕಾರಣದಿಂದ ದೇಶದಲ್ಲುಂಟಾಗಿರತಕ್ಕ ಅಭಾವಗಳನ್ನು ನೀಗಲು ಹಣವಿಲ್ಲವೆಂದು ತಾವುಗಳ್ಯಾರೂ ನಿರಾಶರಾಗಿರಬೇಕಾಗಿಲ್ಲ. ಈ ವ್ಯವಹಾರವು ಚಕ್ರತಿರುಗುತ್ತಿರುವೋಪಾದಿಯಲ್ಲಿರುತ್ತದೆ. ಒಂದು ಕಡೆ ಬಿತ್ತುತ್ತಿದ್ದರೆ ಮತ್ತೊಂದು ಕಡೆ ಬೆಳೆಯಾಗುತ್ತಿರುತ್ತದೆ. ಹಾಗೇ ಒಂದು ಕಡೆ ಹಣವನ್ನು ಖರ್ಚುಮಾಡುತ್ತಿದ್ದರೆ, ಹಾಗೆ ಖರ್ಚು

(ಶ್ರೀ ಟಿ. ಸುಬ್ರಹ್ಮಣ್ಯರವರು.)

ಮಾಡಿದ ಹಣದಿಂದ ಬರತಕ್ಕ ಉತ್ಪತ್ತಿ ಮತ್ತೊಂದು ಕಡೆಯಿಂದ ಖಜಾನೆಗೆ ಬಂದು ಸೇರುತ್ತಿರುತ್ತದೆ. ಆದಕಾರಣ ಇದ್ದ ಹಣವೆಲ್ಲಾ ಖರ್ಚಾಗಿ ಹೋಯಿತೆಂದಾಗಲೀ ಅಥವಾ ಸಾಕಷ್ಟು ನಮ್ಮಲ್ಲಿ ಹಣವಿಲ್ಲವೆಂದಾಗಲೀ ತಾವು ನಿರಾಶಾಭಾವನೆಯನ್ನು ಹೊಂದಬೇಕಾಗಿಲ್ಲ. ಈ ಸಂಬಂಧವಾಗಿ ತಮಗೆ ಇನ್ನೂ ಹೆಚ್ಚಿನ ದ್ರವ್ಯ ಸಹಾಯಬೇಕಾಗಿದ್ದರೆ, ಅದನ್ನೂ ಕೂಡ ತಾವು ಕೇಂದ್ರದವರೊಡನೆ ವ್ಯವಹಾರಮಾಡಿ ಪಡೆಯಬಹುದು. ಆದರೆ ಈಗಾಗಲೇ ನಮ್ಮ ಸಾಲ, ಆಸ್ತಿಗಿಂತ ಜಾಸ್ತಿಯಾಗಿದೆ. ಆದಾಗ್ಯೂ ನಾವು ಇದಕ್ಕೆ ಆಲೋಚನೆ ಮಾಡಬೇಕಾಗಿಲ್ಲ. ಆದರೆ ಇದರಲ್ಲೂ ಒಂದು ನಿಗದಿಯಿದೆ. ನಮ್ಮ ಸರ್ಕಾರದವರು ಈ ದಿವಸ ಇವರ ಆಸ್ತಿಯ ಎರಡರಷ್ಟು ಸಾಲವಿದ್ದಾಗ್ಯೂ, ಈಗ ಮಾತ್ರ 7 ಕೋಟಿ ರೂಪಾಯಿ ವೆಚ್ಚ ತಗಲುವಂಥ ಯೋಜನೆಗಳನ್ನು ಕೈಗೊಂಡಿದ್ದಾರೆ. ಹೀಗ್ಯೆ ಇವರು ಹುಮ್ಮಸ್ಸಿನಿಂದ ಮಾಡಿರತಕ್ಕ ಧೈರ್ಯಕ್ಕೆ ಏನೆಂದು ಹೇಳಬೇಕು; ಎಷ್ಟಪ್ಪ ಇವರಿಗೆ ಇರತಕ್ಕ ಧೈರ್ಯ! ನಾನು ಈ ಧೈರ್ಯವನ್ನು ಪುಂಡುಧೈರ್ಯವೆಂದು ಹೇಳದೆ ವಿಧಿಯಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಇದೆಲ್ಲ ದೇಶದಲ್ಲಿರತಕ್ಕ ಸಮಸ್ತ ಪ್ರಜೆಗಳ ಹಿತದೃಷ್ಟಿಯಿಂದ ಮಾಡಲಾಗಿದೆ. ಯಾರೂ ಗಾಬರಿ ಪಡಬೇಕಾಗಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಖರ್ಚುಮಾಡುವುದಾಗಿದ್ದರೆ ಶ್ರೀ ಪುಟ್ಟಸ್ವಾಮಿಯವರಿಗಿಂತಲೂ ನನಗೆ ಹೆಚ್ಚು ಸಂತೋಷ. ಆದರೆ ಈಗ ಸಧ್ಯಕ್ಕೆ ಯಾರೂ ಅಷ್ಟು ಗಾಬರಿ ಪಡಬೇಕಾಗಿಲ್ಲ. ಆದರೆ ಮುಂದೆ ಗಾಬರಿಪಡಬೇಕಾದ ಪ್ರಸಂಗಬಂದರೂ ಬರಬಹುದು. ಅದನ್ನು ಈಗ ಪ್ರಸ್ತಾಪಿಸುವುದು ಅಪ್ರಕೃತ. ಆದರೆ ಒಂದು ಗಾದೆ ಹೇಳುತ್ತಾರೆ. ಕೆಲಸಮಾಡತಕ್ಕವನಿಗೆ ಮೆಚ್ಚಿಕೊಡುತ್ತಾರೆ, ಲೋಭಿಯಾದವನು ಬಚ್ಚಿಡುತ್ತಾನೆ, ಎಂದು. ಈ ವಿಷಯ ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಆದರೆ ಈ ಸಂಬಂಧದಲ್ಲಿ ಒಂದು ಅಂಶವನ್ನು ತಾವು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ್ದೇನೆಂದರೆ, ಇದು ಯಾರದೋ ದುಡ್ಡು, ಸಾರ್ವಜನಿಕರ ದುಡ್ಡು ಎಂಬ ಉದಾಸೀನ ಭಾವ ತೋರದೆ ಈ ಹಣದ ಒಂದೊಂದು ಕಾಸೂ ಒಂದೊಂದು ತೊಟ್ಟು ವಿಷವೆಂದು ಪರಿಗಣಿಸಿ ಉಂಟಾಗಿರತಕ್ಕ ಅಭಾವಗಳನ್ನು ನೀಗಿಸಿದರೆ ಸಾಕು. ಇದೇ ಭಾವನೆ ತಮ್ಮಲ್ಲೂ ಇದೆಯೆಂದು ನಾನು ನಂಬಿದ್ದೇನೆ. ಹೀಗೊಂದು ಸತ್ಯಮಾರ್ಗದಲ್ಲಿ ನಡೆದರೆ ತಮಗೂ ಕೀರ್ತಿಬರುತ್ತೆ. ದೇಶಕ್ಕೂ ಒಳ್ಳೆಯದಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

Sri H. SIDDAVEERAPPA (Chitaldrug District—General).—Mr. Speaker, Sir, I thank you for having given me an opportunity to speak on this Budget. At the outset, Sir, I must congratulate the Hon'ble Finance Minister for having placed before us a balanced budget although with a small deficit of Rs. 37·54 lakhs. In the preparation of the budget this year he has adopted a new policy and I should say that this new policy has been more helpful to us to understand the budget figures although my learned friend Sri T. Subramanya said that the figures are baffling. We can easily see what exactly is the position of the budget of the State if we carefully analyse the figures given, particularly those in the Budget Memorandum. But at this juncture I would like to mention something with regard to industrial concerns. I am very happy he has given certain figures which are really very important and I would add that along with Government Industrial Concerns he would do well to include the Joint-Stock Companies in which we have our own shares also so that there may be a review of these industrial concerns in which we have nearly Rs. 7 crores by way of investment and so that we may know where these concerns stand.

The Hon'ble Sri H. C. DASAPPA.—Please see Annexure II at page 72 of the Budget Memorandum.

Sri H. SIDDAVEERAPPA.—But at the same time I would like to bring to your notice that instead of merely giving the figures of these industrial concerns you will do well to give a short review of these industrial concerns, as to how far and to what extent we are getting the benefits out of these. This is more necessary at the present moment. Hereafter we have to depend more on the industrial concerns for improving the finances of our State. If we see the figures this point will be made clear. For the year 1951-52 we start with a revenue receipt of Rs. 1380·69 lakhs and an expenditure of Rs. 1418·023. Out of this revenue, it will be seen that nearly Rs. 3½ crores will have to be received from us by way of revenue gap from the Centre according to the financial agreement we have entered into. It is well for us to remember even at this stage that this revenue we are going to get is not of a permanent nature. We are going to have it for a period of five years and after five years it is going to be on a tapering scale and in a period of ten years it will be completely wiped off. That revenue gap of Rs. 3½ crores on the basis of which the Budget is financed is not a permanent feature.

Therefore if you deduct that, it will be seen that our revenue would be somewhere in the neighbourhood of ten crores; and for that I would invite the attention of this House to Annexure III in the Budget Memorandum. If we see page 73 of the Financial Memorandum the figures given there show the analysis of Budget provision relating to fixed charges under certain major heads of classification. It comes to Rs. 618'75 lakhs. I am told that this figure does not include some other figures also,—labour and other things. If we refer to page 6 of the same memorandum it is said there:

"It may be seen from the above that the expenditure is rapidly increasing in all Departments on account of (1) increases due to increments to staffs, increased cost of materials, extra staff and equipment to existing institutions, etc., (2) expansion schemes such as opening of new institutions, etc., Unless the expenditure is curtailed it may not be possible at all to balance the budget in future years..................."

Well, Sir, I do not mean to say that the Finance Minister is unaware of the need for rigid economy. But what is it that has been done? We had the report of the Economy Officer and from several interpellations put on the floor of this House, it was known that a small savings of Rs. 20 lakhs have been made, with regard to this expenditure, which is ever growing in Government service. After all in my humble opinion there cannot be so much need for all these officers in the State. I chanced to have a look at the small publication called the Mysore Information Bulletin wherein we see it mentioned there are as many as 33 Directors or so in the State. If we see all these it clearly shows that rigid economy has not been introduced in cutting down the number of avoidable officers and in continuing those who draw huge salaries. In this connection I would invite the attention of the Hon'ble the Finance Minister to the second report of the Estimates Committee of the Central Government wherein they say on page 11, para 20.

"The work-load of each person in the office should be laid down clearly and responsibility fixed at each level and on each individual and steps should be taken to provide appropriate punishments in the case of defaulters. In our report............................"

Here, supposing we have an officer who has got full time work just as our friend Sri T. Subramanya put it, it will not be possible for him to enter into gossip. He will have to be engaged in his work. With regard to the revenues we find that land revenue has remained more or less stationery. Excise duties bring us very nearly 203'92 lakhs. Of course the opinion is sharply divided with regard to the introduction of total prohibition in the State especially in reference to the great financial strain and stringency we are having. There is much honest difference of opinion on that point. It is well for us to remember that particularly this year a major part of a large slice of income will be derived from Excise duty. With regard to the Nation Building activities and spending departments, we have been seeing that we are spending 82.11 lakhs. Education has taken very nearly 1/4th or even more than what our total budget has provided for. We have got to spend this year 308'96 lakhs so far as this aspect of it is concerned. I take this opportunity to congratulate the Government for the bold step they have taken for the promotion of education throughout the State. If we see the 1951 census, the figures under Education show that we have reached the stage where 20 and odd per cent have been the educated in the State. I would therefore say that in regard to this our Budget compares far better than any other butget in any other part of this country.

Sri B. HUTCHE GOWDA (Tumkur District—General).—Question.

Sri H. SIDDAVEERAPPA.—I only wish that before questioning, you would take the trouble of studying the figures of other States. So far as the education policy is concerned, one thing strikes me. We will do well to take stock of the situation and find out the real position. No doubt there is quantitative increase in education. We have got a number of boys' schools and all that. But with regard to the quality what is it that we have got? We have to consider whether there is need to re-orientate the Education policy in the State or whether there is any need

(SRI H. SIDDAVEERAPPA.)

to give any vocational bias. It is necessary for us to think of it and try to find out how far and to what extent our Education has been progressing on proper lines. I may well say that so far as I have seen the students of the present generation have realised that they are citizens of a free nation and that they have to work hard in order to make this country prosperous. I know of a time when if a boy from a village went to a high school and returned to the village, he would think that he would be altogether unfit to do any manual work. But now-a-days that sense has gone. Our boys take pride in doing such work wherein manual labour is involved, wherein they actually contribute for the constructive programmes of the State. In the light of these things, it is absolutely necessary that this vocational bias is given to our boys and they are made to feel that they are the citizens of the State wherein they have to work hard and increase the wealth of the State. I would most respectfully submit to Government to consider this aspect in proper perspective. No doubt this year they have provided Rs. 3 lakhs for opening new schools and certain other items.

With regard to Agriculture, I may say that our figures compare favourably with the figures in any other State. With regard to food,—this monster is scaring us for the last one decade and I may say that however much we may think of increasing the food production, unless the people are made to feel that it is not the responsibility of the Government but of the people themselves to create opportunities and earn their bread, this problem would never be solved whatever amount we spend on it. These controls, however much Government deem that they are essential, have created such demoralisation that it is impossible for anybody in the State to think of solving this problem. The more we think of it the more baffling problems we are facing. The Grow More Food scheme is in existence from the year 1943 and we have got figures to show that we have not reached the stage of cultivation in pre-war years. How is it that this problem still remains unsolved in spite of the best efforts of the Government? The reason is not far to seek. It is found from the census figures of 1951 that there is a tendency on the part of the people to go out from the villages and divert to cities. Our own City of Bangalore has reached the remarkable figure of 7 lakhs and odd. How is it possible for any Government to feed them unless we have the means and the capacity and the labour to produce food that is necessary? I know intimately the dearth and scarcity of agricultural labour. As soon as one gets down from the train at Bangalore he finds hundreds of people asking for coolies. Go to villages; it is impossible to get five laboures for doing agricultural work. Unless we give up the policy of assuring food for the people that go to cities, my respectful submission is that it is impossible to solve this problem. (Cheers) There are no doubt schemes with regard to food production. But we have to consider whether we have been getting the maximum return for the money spent. Take for instance the food production drive. Rs. 42·24 lakhs have been allotted this year and for Agriculture under Post-war Development Schemes Rs. 51·65 lakhs have been allotted. I find that with regard to this scheme, the more we try to solve the problem, the less we go to the root of it. We are only working the scheme on the surface as it were. The Hon'ble Minister for Agriculture knows so well that he has expressed in several of the press statements and in some of the public utterances that the problem is a baffling one. I have been dinning into his ears that unless Government take up agriculture on a big factory scale, unless they take it up as a large scale industry, the problem will not be solved. We know sir, that so far as agriculture in our State is concerned most of it is a gamble. I may toil and use all the labour; but if the rains fall I am undone. What is the security you give? I request the Hon'ble Minister to introduce the system of social insurance whereby crop insurance may be taken as one of the schemes. It may look very big but

just as the Hon'ble Member Sri T. Subramanya said, faint hearts never won a battle.

The Hon'ble Sri H. C. DASAPPA.—Faint hearts never won fair ladies. (Laughter).

Sri H. SIDDAVEERAPPA.—You must tell the people "try to do it; if for reasons beyond your control you are not able to get the return we are here to support you." You introduce crop insurance. For short term credit you have allotted only Rs. 5 lakhs. Half loan is better than no loan. But is it going to be fruitful considering the quantum of short term credit needed to free the raiyat from the clutches of the middleman just at a time when he is in dire need of it? In my opinion Rs. 50 lakhs should have been the irreducible minimum with which you should have started. Let not the Hon'ble Minister feel that I am making any reference with regard to industries. We have been seeing figures to the extent of Rs. 2 crores and odd being allotted for industrial advancement. I do not mean to say that industries should not develop. That is a different matter. But what is it that never made you to open your eyes and see that you provided more towards short term credit than the meagre allotment you have made? With regard to this aspect, my respectful submission is that unless we think of solving the agricultural problem in a way wherein that sort of security is created in the minds of the agriculturist, we are not going to solve the problem.

With regard to Harvest Control Order, I would say that in the last three years, we were a little happier than this year. No doubt the position of the Hon'ble Minister for Food is not at all enviable. In the first place, he has not got the required quantity in the State by way of procurement. I cannot but say that in the actual procurement work, certain difficulties, certain harrassment has certainly taken place. I would respectfully request him to see that these difficulties are obviated. This Harvest Order, I have brought to the notice of the Hon'ble Minister already, has not benefited the agriculturist who is asked to give away all that is required by way of procurement. Supposing the grower takes about 50 seers or a palla for hulling. The Harvest Order is so stringent that the magistrate has to punish the man and see that the corn surrendered to Government. This Harvest Order requires to be changed.

Lastly, about law and order. I would be failing in my duty if I do not make mention of it particularly as I come from the district wherefrom we have been hearing that the position of law and order is far from happy. I do not mean to say that Government are not unware of it. They have taken immediate steps but still that sense of security, that sense of peace that an agriculturist or a poor villager must have is absent in our district today. Even if we have thousands of policemen it will not be possible to do it. Hitherto our people had not had the courage to face anybody that would come to plunder them. Government must see that fairly able-bodied men are armed and are taught the art of using those arms so that if need be they may be prepared to die rather than surrender. That kind of security will have to be created by Government. No amount of border control is able to solve the problem as the Hon'ble Minister himself is aware of. He must creat a new psychology in the minds of the people in the rural parts and a sense of security must be created. Already I have brought to the notice that there is a tendency to migrate to cities and towns where there is more security. It is a very serious problem. It is the first and foremost duty of a Government to see that law and order is maintained; never mind if other things are not attended to.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಸಭೆಯ ಮುಂದೆ ಅರ್ಥ ಸಚಿವರು ಮಂಡಿಸಿರುವ ಆದಾಯ ವೆಚ್ಚದ 'ಪಟ್ಟಿಯನ್ನು ಸ್ವಾಗತಿಸುತ್ತಾ ಅದರ ಸಂಬಂಧದಲ್ಲಿ ಕೆಲವು ಮಾತುಗಳನ್ನಾಡಲಿಚ್ಛಿಸುತ್ತೇನೆ. ಸ್ವಾತಂತ್ರ್ಯ ಬಂದ ಮೂರನೆಯ ವರ್ಷ ಕಳೆದು ಈಗ ನಾಲ್ಕನೆಯ ವರ್ಷ ನಡೆಯುತ್ತಿದೆ. ಈ ಅವಧಿಯಲ್ಲಿ ನಮಗೆ ಸಹಿಸಲಸಾಧ್ಯವಾದ ಅನೇಕ ಕಷ್ಟ ಪರಂಪರೆಗಳು ಬಂದುವು ಅವು

(ಶ್ರೀ ಎಂ. ಸಿ. ಶಿವಾನಂದ ಶರ್ಮರವರು)

ಗಳನ್ನೆಲ್ಲಾ ಎದುರಿಸಿಕೊಂಡು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿಕೊಂಡು ಬಂದಿದ್ದೇವೆ. ಆದರೂ ಸಹ ಈಗಲೂ ಆ ಕಷ್ಟನಷ್ಟಗಳಿಂದ ಪಾರಾಗಿದ್ದೇವೆಯೇ? ಅಭಿವೃದ್ಧಿಗಾಗಿ ಮಾಡಿದ ಪ್ರಯತ್ನಗಳೆಲ್ಲಾ ಸಫಲವಾಗಿವೆಯೇ ಎಂಬುದನ್ನು ನಾವೀಗ ವಿಮರ್ಶಿಸುವುದು ಬಹಳ ಅಗತ್ಯ. ಕಾರಣ ಇಷ್ಟೆ. ಯಾವ ಕಾರ್ಯಕ್ರಮವನ್ನೇ ಮಾಡಲಿ ಅದು ಎಷ್ಟೇ ಸದುದ್ದೇಶದಿಂದ ಕೂಡಿದ್ದರೂ ಅದು ಎಷ್ಟುಮಟ್ಟಿಗೆ ಕೈಗೂಡಿದೆಯೆಂಬುದನ್ನು ನೋಡಬೇಕಾದದ್ದು ಆವಶ್ಯಕ. ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಪರದೇಶಿಯರು ತಮ್ಮ ಪದ್ಧತಿಗನುಗುಣವಾಗಿ ದೇಶದಲ್ಲಿ ಗುಮಾಸ್ತಿಕೆಗೆ ಅನುಕೂಲವಾದ ವಿದ್ಯಾಭ್ಯಾಸದ ಪದ್ಧತಿಯನ್ನು ತಂದಿದ್ದರು. ಆ ತೆರದ ವಿದ್ಯಾಭ್ಯಾಸವಿರುವವರೆಗೂ ದೇಶಕ್ಕೆ ಹಿತಕರವಲ್ಲವೆಂಬ ಭಾವನೆಯಿತ್ತು. ಇದೇ ರೀತಿ ದೇಶದ ಉನ್ನತಿಗೆ ಸಂಬಂಧಪಟ್ಟ ಅನೇಕ ವಿಷಯಗಳಲ್ಲಿ ಹೀಗೆಯೇ ಭಾವನೆಯಿತ್ತು. ಅಂಥಾದ್ದು ಈ ನಾಲ್ಕು ವರ್ಷಗಳಲ್ಲಾದರೂ ಬದಲಾವಣೆಯಾಗಿದೆಯೇ ಎಂಬ ವಿಷಯವನ್ನು ನೋಡುವುದಾದರೆ ಏನೂ ಇಲ್ಲವೆಂಬ ಮನೋಭಾವನೆ ವ್ಯಕ್ತಪಡುತ್ತದೆ. ಕಾರಣ ಇಷ್ಟೆ. ಮಹಾತ್ಮಾಗಾಂಧಿಯವರ ಪದ್ಧತಿಗನುಗುಣವಾಗಿ, ಅವರ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನೇನೋ ಗಳಿಸಿದ್ದಾಯಿತು. ಆದರೆ ಆ ಮಹಾತ್ಮಾಗಾಂಧಿಯವರು ಯಾವ ಯಾವ ವಿಧದಲ್ಲಿ ನಡೆಯಬೇಕೆಂದು ಮಾರ್ಗ ಹಾಕಿಕೊಟ್ಟರೋ ಆ ಮಾರ್ಗದಲ್ಲಿಯೇ ಎಷ್ಟುಮಟ್ಟಿಗೆ ನಾವು ಹೋಗುತ್ತಿದ್ದೇವೆ. ಎಷ್ಟುಮಟ್ಟಿಗೆ ಸಫಲರಾಗಿದ್ದೇವೆಂಬುದನ್ನು ಪರಿಶೀಲಿಸುವುದಾದರೆ ಬಹಳ ವಿಷಾದವುಂಟಾಗುತ್ತದೆ. ಮಹಾತ್ಮಾಗಾಂಧಿಯವರು ಖಾದಿ, ಅಸ್ಪೃಶ್ಯತಾ ನಿವಾರಣೆ, ಶಿಕ್ಷಣದ ಮಾರ್ಪಾಡು, ಮತ್ತು ಗ್ರಾಮೋದ್ಧಾರ ಈ ವಿಷಯಗಳಲ್ಲಿ ಬಹಳ ಒತ್ತಾಯಮಾಡುತ್ತಿದ್ದರು. ಖಾದಿ ವಿಷಯದಲ್ಲಿ ಒತ್ತಾಯಮಾಡುತ್ತಿದ್ದುದಕ್ಕೆ ಕಾರಣವೇನೆಂದರೆ, ಈಗ ಸಾಮಾನ್ಯವಾಗಿ ನೋಡುವುದಾದರೆ ಹಳ್ಳಿಯಲ್ಲಿ ರೈತನಿಗೆ ವರ್ಷದಲ್ಲಿ 6 ತಿಂಗಳು ಮಾತ್ರ ಕೆಲಸವಿರುತ್ತದೆ. ಇನ್ನಾರು ತಿಂಗಳು ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅವನಿಗೊಂದು ಉಪಕಸುಬು ಅತ್ಯಾವಶ್ಯಕವಾಗಿರುತ್ತದೆ. ಅಂಥವನಿಗೆ ಒಂದು ಒಳ್ಳೆಯ ಉಪಕಸುಬು ಖಾದಿ ನೂಲುವುದು, ನೇಯುವುದು ಎಂದು ಹೇಳಿದ್ದಾರೆ. ಅವನು ತನ್ನ ಕೆಲಸ ಕಾರ್ಯಗಳನ್ನೆಲ್ಲಾ ಮುಗಿಸಿಕೊಂಡು ತನ್ನ ವಿಶ್ರಾಮಕಾಲದಲ್ಲಿ ಚರಕದಿಂದ ನೂಲು ತೆಗೆಯಬಹುದು. ಇದರಿಂದ ಹಳ್ಳಿಯಲ್ಲಿ ನೇಯ್ಗೆ ಕೆಲಸ ಮಾಡುವವರಿಗೂ, ಅಗಸನಿಗೂ, ಕೆಲಸ ಸಿಕ್ಕುವಂತಾಗುತ್ತದೆ. ಈ ರೀತಿಯಾಗಿ ಮಾಡಿ ಬಟ್ಟೆ ವಿಷಯದಲ್ಲಿ ಸ್ವಯಂಪರಿಪೂರ್ಣತೆಯನ್ನು ಹೊಂದತಕ್ಕ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಅಭಿಪ್ರಾಯಪಡುತ್ತಿದ್ದರು. ಇನ್ನೊಂದು ದೃಷ್ಟಿಯಿಂದಲೂ ಅವರು ಈ ಖಾದಿ ಕೈಗಾರಿಕೆಯನ್ನು ಪ್ರೋತ್ಸಾಹಿಸಬೇಕೆಂದು ಹೇಳುತ್ತಿದ್ದರು. ಏಕೆಂದರೆ ಒಂದು ಬಟ್ಟೆ ಮಿಲ್ ಏರ್ಪಡಿಸಬೇಕಾದರೆ ಪರದೇಶಕ್ಕೆ ಲಕ್ಷಾಂತರ ರೂಪಾಯಿಗಳನ್ನು ತೆತ್ತು ತರಬೇಕಾಗುತ್ತದೆ. ಯಂತ್ರಕ್ಕೆ ಬೇಕಾಗುವ ಹಣ ಮಿಕ್ಕ ಚಿಲ್ಲರೆ ಸಾಮಾನುಗಳಿಗೆ ಬೇಕಾಗುವ ಹಣ ಇದೆಲ್ಲಾ ಪರದೇಶಗಳಿಗೆ ಹೊರಟು ಹೋಗುತ್ತದೆ. ಅದೇ ಹಣವನ್ನು ನಮ್ಮ ದೇಶದಲ್ಲೇ ಉಪಯೋಗಿಸಿ ಚರಕಗಳನ್ನು ಏರ್ಪಡಿಸಲಿಕ್ಕೆ ಪ್ರಯತ್ನ ಮಾಡಿದರೆ ಬೇಕಾದಷ್ಟು ಜನರು ಹಳ್ಳಿಗಳಲ್ಲಿ ಚರಕಗಳಿಂದ ಉಪಕಸುಬು ಮಾಡಲು ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ ಪರದೇಶಕ್ಕೆ ಹೋಗುವ ಹಣವು ನಮ್ಮ ದೇಶದಲ್ಲಿಯೇ ನಿಂತು ಜನರು ಒಂದು ಉಪಕಸುಬಿನಲ್ಲಿ ತೊಡಗಿ ಇನ್ನೊಬ್ಬರನ್ನು ಅವಲಂಬಿಸದೆ ಜೀವನಮಾಡಬಹುದೆಂದು ಹೇಳಿದ್ದಾರೆ. ಸ್ವಾತಂತ್ರ್ಯದ ಹೋರಾಟ ನಡೆಸುತ್ತಿದ್ದ ಕಾಲದಲ್ಲಿ ಆಗಿನ ಸರ್ಕಾರದವರೂ ಸಹ ಗಾಂಧಿಜಿಯವರು ಹೇಳುತ್ತಿದ್ದುದನ್ನು ತಾವೂ ನಡೆಸಿಕೊಡುವಂತೆ ಸರ್ಕಾರದಿಂದಲೇ ಬದನವಾಳ ಮುಂತಾದ ಕಡೆಗಳಲ್ಲಿ ಖಾದಿ ತಯಾರಿಕೆಯನ್ನು ಮಾಡುವುದಕ್ಕೆ ಏರ್ಪಡಿಸಿ ಎಷ್ಟೋ ಉತ್ತಮ ರೀತಿಯಲ್ಲಿ ಖಾದಿ ತಯಾರಿಕೆಯನ್ನು ನಡೆಸುವುದಕ್ಕೆ ಪ್ರಯತ್ನಪಡುತ್ತಿದ್ದರು. ಬದನವಾಳ್ ಕೇಂದ್ರದ ಖಾದಿ ಎಷ್ಟು ಉತ್ತಮ ಸ್ಥಿತಿಯಲ್ಲಿತ್ತೆಂಬುದನ್ನು ಎಲ್ಲರೂ ಹೊಗಳುತ್ತಿದ್ದರು. ಅಂಥಾದ್ದು ಪ್ರಜಾ ಸರ್ಕಾರ ಬಂದ ಮೇಲೆ 4 ವರ್ಷಗಳಾದರೂ ಈ ಬದನವಾಳ ಕೇಂದ್ರ ಉತ್ತಮವಾಗುವುದು ಹೊರಟುಹೋಗಿ ಗಾಂಧಿ ಗಾಂಧಿ ಎಂದು ಹೇಳುವವರ ಆಡಳಿತ ಕಾಲದಲ್ಲಿ ಆ ಕೇಂದ್ರಕ್ಕೆ ಇಂಥ ಹೀನ ಸ್ಥಿತಿ ಬಂತಲ್ಲಾ ಎಂದು ನಿಜವಾಗಿಯೂ ದುಃಖದಿಂದ ಹೇಳಬೇಕಾಗಿದೆ. ನಿಜವಾಗಿಯೂ ದೊಡ್ಡವರ ಹೆಸರನ್ನು ಮಾತ್ರ ಹೇಳಿ ಅವರು ಹೇಳಿದ ಹಾಗೆ ಮಾಡದಿರುವುದಕ್ಕೆ ಕಾರಣವೇನೆಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಗಾಂಧಿಯವರ ವಿಷಯವನ್ನು ಎತ್ತದೇ ಇದ್ದರೆ ನಿಜವಾಗಿಯೂ ಕೆಲಸಕಾರ್ಯಗಳು ನಡೆಯುವುದು ಕಷ್ಟವೆಂಬುದನ್ನು ಅವರು ತಿಳಿದಿದ್ದಾರೆ. ಆದರೆ ಅವರ ಹೆಸರನ್ನು ಮಾತ್ರ ಉಪಯೋಗಿಸಿಕೊಂಡು ಅವರು ಹೇಳಿದಂತೆ ನಡೆಯದಿರುವುದು ಬಹಳ ವಿಷಾದಕರ. ಮಹಾತ್ಮಾಗಾಂಧಿಯವರು ಮೂಲ ಶಿಕ್ಷಣದ ವಿಚಾರವಾಗಿ ಬಹಳವಾಗಿ ಹೇಳುತ್ತಿದ್ದರು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಅನೇಕ ಲೋಪದೋಷಗಳಿವೆ, ಪರದೇಶಿಯರ ಶಿಕ್ಷಣದ ಕ್ರಮ ಸರಿಯಾಗಿಲ್ಲ ಅದರ ಮೂಲವನ್ನೇ ಬದಲಾವಣೆ ಮಾಡಬೇಕು. ಆ ರೀತಿ ಮಾಡಲು ಮೂಲ ಶಿಕ್ಷಣದ ಕ್ರಮವನ್ನು ಅನುಸರಿಸಬೇಕೆಂದು ಹೇಳಿದರು. ಆದರೆ ನಮ್ಮವರು ಈ ಮೂಲ ಶಿಕ್ಷಣಕ್ಕಾಗಿ ಎಷ್ಟು ಏರ್ಪಾಡುಗಳನ್ನು ಮಾಡಿದ್ದಾರೆಂಬುದನ್ನು ನೋಡಿ. ಉಪಾಧ್ಯಾಯರುಗಳನ್ನು ತಯಾರುಮಾಡುವುದಕ್ಕೆ ಹೆಚ್ಚು ಹೆಚ್ಚು ಖರ್ಚುಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ಒಂದು ತಾಲ್ಲೂಕಿನಲ್ಲಾಗಲೀ, ಒಂದು ಹೋಬಳಿಯಲ್ಲಾಗಲೀ ಮೂಲ ಶಿಕ್ಷಣದ ಕ್ರಮವನ್ನು ಸರಿಯಾಗಿ ಜಾರಿಗೆ ತರಲು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ಎಂದರೆ ಖಂಡಿತವಾಗಿಯೂ ಇಲ್ಲವೆಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಈಗಲೂ ಹಿಂದಿದ್ದ ಶಿಕ್ಷಣ ಪದ್ಧತಿಗೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದನ್ನು ನೋಡಿದರೆ ಇವರಿಗೆ ನಿಜವಾಗಿಯೂ ಆ ಮೂಲ ಶಿಕ್ಷಣ ಪದ್ಧತಿಯ ವಿಷಯದಲ್ಲಿ ಆಸಕ್ತಿಯಿಲ್ಲವೆಂದೇ ತೋರುತ್ತದೆ. ಇವರೀಗ ಅಲ್ಪಸ್ವಲ್ಪ ಖರ್ಚುಮಾಡುತ್ತಿರುವುದಾದರೂ ಹಿಂದೆ ಹೇಗೆ ಸ್ವಾತಂತ್ರ್ಯದ ಹೋರಾಟಕ್ಕೆ ಅಡ್ಡಿ ತರುವುದಕ್ಕೋಸ್ಕರವೆಂದು ಹೇಳಿ ಯಾವ ರೀತಿ ಅಲ್ಲಲ್ಲಿ ಖಾದಿ ಕೇಂದ್ರ, ಗ್ರಾಮಪುನರುಜ್ಜೀವನ ಮುಂತಾದುವುಗಳನ್ನು ಏರ್ಪಡಿಸುವ ನೀತಿಯನ್ನು ಅನುಸರಿಸುತ್ತಿದ್ದರೋ ಇವರೂ ಅದೇ ನೀತಿಯನ್ನು ಅನುಸರಿಸುತ್ತಿದ್ದಾರೆಯೋ ಎಂಬ ಸಂದೇಹ ಜನರಿಗುಂಟಾಗುವಂತಿದೆ. ಏನೋ ಅಲ್ಲಿ ಇಲ್ಲಿ ತರಪೇತು ಮಾಡುತ್ತಿದ್ದೇವೆ. ಒಂದು ಶಿಕ್ಷಣ ಶಾಲೆಯನ್ನು ತೆಗೆದು ಅದನ್ನು ಪ್ರಯೋಗಿಕವಾಗಿ ನಡೆಸುತ್ತಿದ್ದೇವೆ ಎಂದು ಇವರು ಹೇಳುವು

ದೆಲ್ಲಾ ಇವರ ಉದ್ದೇಶವನ್ನು ಶಂಕಿಸುವುದಕ್ಕೆ ಎಡೆ ಕೊಟ್ಟಿವೆ. ಕಡ್ಡಾಯವಾಗಿ ತಂದೇ ತರಬೇಕೆಂದು ಇಷ್ಟವಿದ್ದರೆ ಅಂಥ ಪ್ರಯತ್ನ ಈ ಬಡ್ಜೆಟ್ಟಿನಲ್ಲಿ ಅಷ್ಟಾಗಿ ಕಂಡು ಬರುತ್ತಿಲ್ಲ. ಆದ್ದರಿಂದ ನನ್ನ ಸಲಹೆಯಿಷ್ಟೆ. ಮೂಲ ಶಿಕ್ಷಣ ಕ್ರಮ ನಿಜವಾಗಿಯೂ ಯಶಸ್ವಿಯಾಗಿ ಆಗಬೇಕು, ದೇಶಕ್ಕೆ ಇದರಿಂದ ಪ್ರಯೋಜನವಿದೆಯೆಂದ ಮೇಲೆ ಇಡೀ ಸಂಸ್ಥಾನದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲದಿದ್ದರೂ ಪ್ರತಿಯೊಂದು ಡಿಸ್ಟ್ರಿಕ್ಟಿನ ಒಂದೊಂದು ಹೋಬಳಿಯಲ್ಲಾದರೂ ಕಡ್ಡಾಯವಾಗಿ ಜಾರಿಗೆ ತಂದೇ ತರಬೇಕೆಂದು ಹೇಳಿ ಅದಕ್ಕೆಷ್ಟು ಹಣ ಬೇಕಾಗುತ್ತಿತ್ತೋ ಅಷ್ಟನ್ನು ಒದಗಿಸಬೇಕಾಗಿತ್ತು. ಹಾಗೇನೂ ಇಲ್ಲಿ ಮಾಡಿಲ್ಲ. ಅಲ್ಲದೆ ಒಂದು ಪಕ್ಷ ಮೂಲ ಶಿಕ್ಷಣಶಾಲೆಯನ್ನು ಕೊಟ್ಟರೂ ಅದಕ್ಕೆ ಸರಿಯಾದ ಉಪಕರಣ ಕೊಡದೆ, ಶಿಕ್ಷಣಪಡೆದಿರುವವರ ವಿದ್ಯೆಯು ವ್ಯರ್ಥವಾಗುತ್ತಿರುವುದು ಕಂಡು ಬರುತ್ತಿದೆ. ಮೂಲ ಶಿಕ್ಷಣ ಪಡೆದು ಮಹಾತ್ಮಾ ಗಾಂಧಿಯವರ ಹೇಳಿಕೆಯಂತೆ ಸ್ವಪರಿಪೂರ್ಣತೆಯನ್ನು ಹೊಂದುವುದಕ್ಕೆ ಸಾವಿರಾರು ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿ ಬೇಕಾದಷ್ಟು ಉಪಕರಣಗಳನ್ನೇ ಹೊಂದಿಸದೆ ಇರುವಾಗ ಇನ್ನು ಇದನ್ನು ಮುಂದೆ ಹೇಗೆ ನಡೆಸುತ್ತಾರೆಂಬ ಪ್ರಶ್ನೆಯೂ ಹುಟ್ಟುತ್ತದೆ. ಪ್ರಾಯೋಗಿಕವಾಗಿ ಮಾಡಿ ನೋಡುತ್ತಿದ್ದೇವೆ. ಮುಂದೆ ಹೆಚ್ಚಿಗೆ ಖರ್ಚು ಮಾಡಬೇಕಾಗಿ ಬರುತ್ತದೆಂದು ಮಂತ್ರಿಗಳು ಹೇಳಿದರೆ ಇವರ ಆಸಕ್ತಿ ಎಷ್ಟರಮಟ್ಟಿಗಿದೆಯೆಂಬುದು ವ್ಯಕ್ತವಾಗುತ್ತದೆ. ಇನ್ನಾದರೂ ಈ ವಿಚಾರದಲ್ಲಿ ಸ್ಪಷ್ಟವಾದ ನಿರ್ಧಾರಕ್ಕೆ ಬಂದು ಮುಂದಿನ ಸಾಲಿನಲ್ಲಾದರೂ ಒಂದೊಂದು ಹೋಬಳಿಯಲ್ಲಾದರೂ ಇದಕ್ಕೆ ಸರಿಯಾದ ಏರ್ಪಾಡುಮಾಡುವುದು ಉಚಿತ, ನ್ಯಾಯ ಎಂದು ನಾನು ತಿಳಿಸಲಿಚ್ಛಿಸುತ್ತೇನೆ.

ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರವಾಯಿತು. ಇನ್ನು ಹೈಸ್ಕೂಲುಗಳ ವಿಷಯವನ್ನು ತೆಗೆದುಕೊಂಡರೆ, ಸರ್ಕಾರಿ ಹೈಸ್ಕೂಲುಗಳನ್ನು ದೇಶದಲ್ಲಿ ನಾವು ಯಾರಿಗೂ ಕೊಡುವುದಿಲ್ಲ, ಡಿಸ್ಟ್ರಿಕ್ಟ್ ಬೋರ್ಡಿನವರು, ಪೌರಸಭೆಯವರು, ಸಾರ್ವಜನಿಕರು ಸ್ಥಾಪಿಸಿ ನಡೆಸಬೇಕೆಂಬುದು ಸರ್ಕಾರದ ನೀತಿ ಎಂದು ಸರ್ಕಾರದವರು ಎಷ್ಟೋ ಸಲ ಹೇಳಿದ್ದಾರೆ. ಅನೇಕ ಜಿಲ್ಲಾ ಬೋರ್ಡ್, ಹೈಸ್ಕೂಲು ಮತ್ತು ಸ್ಥಳೀಯ ಸಂಸ್ಥೆಗಳ ಹೈಸ್ಕೂಲುಗಳ ಪ್ರಾರಂಭೋತ್ಸವಗಳಾದಾಗ ಕೂಡ ಸರ್ಕಾರಿ ಸ್ಕೂಲುಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಈ ವರ್ಷ ಬಡ್ಜೆಟ್ಟನ್ನು ನೋಡಿದರೆ 50 ಸಾವಿರ ರೂಪಾಯಿ ಒದಗಿಸಿ ಇದರಲ್ಲಿ ಸುಮಾರು ಎಂಟು ಹತ್ತು ಸರ್ಕಾರಿ ಹೈಸ್ಕೂಲುಗಳನ್ನು ಪ್ರಾರಂಭಮಾಡಬೇಕೆಂದಿದ್ದಾರೆಂಬುದು ಗೊತ್ತಾಗುತ್ತವೆ. ಇದನ್ನು ನೋಡಿದರೆ ಸರ್ಕಾರ ಒಂದು ನಿರ್ದಿಷ್ಟವಾದ ನೀತಿಯನ್ನನುಸರಿಸುತ್ತಿಲ್ಲವೆಂದು ಕಾಣುತ್ತದೆ. ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ಲೋಪವಿದೆ ವಿಶ್ವವಿದ್ಯಾಲಯದ ವಿದ್ಯಾಭ್ಯಾಸದಲ್ಲಿ ದೋಷವಿದೆ, ಎಂದು ಸ್ಪಷ್ಟವಾಗಿ ತಿಳಿದುಕೊಂಡಿರುವಾಗ, ಏಕೆ ಇಷ್ಟೊಂದು ಹಣವನ್ನು ಇದಕ್ಕಾಗಿ ವ್ಯಯಮಾಡುತ್ತಿದ್ದಾರೋ ಗೊತ್ತಿಲ್ಲ. ಇಡೀ ವಿಶ್ವದಲ್ಲಿ ಎಲ್ಲಿ ನೋಡಿದರೂ ಖಾಸಗೀ ಸಂಸ್ಥೆಗಳೇ ಸರ್ಕಾರಿ ಸಂಸ್ಥೆಗಳಿಗಿಂತ ಹೆಚ್ಚಾಗಿವೆ. ಸರ್ಕಾರದವರೇನಿದ್ದರೂ ಇವು ಸರಿಯಾಗಿ ನಡೆಯುತ್ತಿವೆಯೋ ಅಥವಾ ಇಲ್ಲವೇ ಎಂಬುದನ್ನು ಮಾತ್ರ ನೋಡಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಆ ನೀತಿಯನ್ನನುಸರಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ, ಉತ್ತಮ ರೀತಿಯಲ್ಲಿ ಮಕ್ಕಳಿಗೆ ಕೊಡಬೇಕಾದುದು ಸರ್ಕಾರದ ಕರ್ತವ್ಯವೇ ವಿನಾ ಹೈಸ್ಕೂಲು ಮತ್ತು ವಿಶ್ವವಿದ್ಯಾನಿಲಯಗಳಿಗೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯಲ್ಲ. ವಿಶ್ವವಿದ್ಯಾಲಯದಿಂದ ಹೊರಗೆ ಬರತಕ್ಕ ವಿದ್ಯಾರ್ಥಿಗಳು ದೇಶಕ್ಕೆ ಹೊರೆಯಾಗುತ್ತಿದ್ದಾರೆ. ಇವರ ತಂದೆತಾಯಿಗಳು ಇವರ ವಿದ್ಯಾಭ್ಯಾಸಕ್ಕಾಗಿ ವಿಶೇಷ ಹಣ ಖರ್ಚುಮಾಡಿ ಆರ್ಥಿಕ ತೊಂದರೆಗಳಿಗೆ ಸಿಕ್ಕಿ ನರಳುತ್ತಿದ್ದಾರೆ. ಇವರೆಲ್ಲ ನಿರುದ್ಯೋಗದಿಂದ ಒಂದು ಕಡೆ ಬಳಲುತ್ತಿದ್ದಾರೆ. ಹೀಗಿರುವಾಗ ಇದೇ ರೀತಿ ಈ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಖರ್ಚುಮಾಡುತ್ತಾ ಹೋದರೆ ಇದರ ಪರಿಣಾಮವೇನಾಗಬಹುದೆಂಬುದನ್ನು ಯೋಚಿಸಬೇಕಾದುದು ಎಲ್ಲರ ಕರ್ತವ್ಯ. ಇದರಿಂದ ದುಷ್ಪರಿಣಾಮವುಂಟಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ವಿಶ್ವವಿದ್ಯಾಲಯಗಳಿಗೆ ಹೆಚ್ಚು ಹಣವನ್ನು ವೆಚ್ಚಮಾಡುವುದನ್ನೂ ಸರ್ಕಾರಿ ಹೈಸ್ಕೂಲುಗಳನ್ನು ತೆರೆಯುವುದನ್ನೂ ಇನ್ನು ಮುಂದೆ ಬಿಟ್ಟುಬಿಡಬೇಕು.

ಸ್ವಾತಂತ್ರ್ಯ ಬಂದಮೇಲಂತೂ ಜನರ ನೀತಿಯ ಮಟ್ಟ ಇಳಿದುಹೋಗಿದೆ, ಅನ್ಯಾಯ ಹೆಚ್ಚುತ್ತಿದೆ ಎನ್ನುವ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಇದನ್ನು ನಿವಾರಣೆ ಮಾಡುವ ಬಗೆ ಹೇಗೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಉಪಾಧ್ಯಾಯರೆಂದರೆ ಎಳೆಯ ಸಸಿಗೆ ಸಮಾನವಾದ ಮಕ್ಕಳನ್ನು ಸುಶಿಕ್ಷಿತರನ್ನಾಗಿಯೂ ನೀತಿವಂತರನ್ನಾಗಿಯೂ ತರಬೇತುಮಾಡುವವರು. ಇಂತಹ ಶ್ರೇಷ್ಠತಮವಾದ ಕಾರ್ಯಕ್ಕೆ ಈ ಹೊತ್ತು ಉಪಾಧ್ಯಾಯರಾಗಿ ಬರುವವರು ಬೇರೆ ಕ್ಷೇತ್ರಗಳಲ್ಲಿ ತಿರಸ್ಕಾರವಾದವರು. ಬೇರೆಲ್ಲಿಯೂ ಮಾರ್ಗವಿಲ್ಲದೆ ಅಸಹಾಯಕರಾಗಿರುವವರು ಮಾತ್ರ ಉಪಾಧ್ಯಾಯವೃತ್ತಿಗೆ ಬರುತ್ತಿದ್ದಾರೆ. ಎಲ್ಲೋ ಒಬ್ಬಿಬ್ಬರು ಆದರ್ಶಪ್ರೇಮಿಗಳು ದೇಶದ ಹಿತದೃಷ್ಟಿಯಿಂದ ಈ ಕ್ಷೇತ್ರದಲ್ಲಿ ಕೆಲಸಮಾಡುವವರೂ ಇರಬಹುದು. ಆದರೆ ನಿಜವಾಗಿಯೂ ಇಂದಿನ ಮಕ್ಕಳು ಮುಂದಿನ ಪ್ರಜೆಗಳು ಇವರ ಏಳಿಗೆಗಾಗಿ ಬಲಿದಾನಮಾಡುವುದು, ತ್ಯಾಗಮಾಡುವುದು ನಮ್ಮ ಕರ್ತವ್ಯ ಎಂಬ ಮನೋಭಾವದಿಂದ ಕೆಲಸಮಾಡುವವರು ಅಪರೂಪ. ಇದಕ್ಕೆ ಕಾರಣವೇನೆಂದರೆ ಶಿಕ್ಷಣಕೊಡತಕ್ಕ ಉಪಾಧ್ಯಾಯರ ಜಾತಿಯನ್ನು ಸಮಾಜ ನಿಕೃಷ್ಟವಾದ ರೀತಿಯಲ್ಲಿ ಕಾಣುತ್ತಿದೆ. ಇವರಿಗೆ ಸಮಾಜದಲ್ಲಿ ಗೌರವಸ್ಥಾನವಿಲ್ಲ. ಇತರರಂತೆಯೇ ತಾವೂ ಹೆಮ್ಮೆಯಿಂದ ತಿರುಗಬಹುದೆಂಬ ಮನೋಭಾವ ಇವರಲ್ಲಿಲ್ಲ. ಈಗ ನಾಲ್ಕು ವರ್ಷಗಳಿಂದೀಚೆಗಾದರೂ ಈ ಪರಿಸ್ಥಿತಿ ಕಡಿಮೆಯಾಗಲು ಪ್ರಯತ್ನ ನಡೆದಿದೆಯೆ ಎಂದರೆ, ಇಲ್ಲವೇ ಇಲ್ಲ. ಉದಾಸೀನರೂ ಜೀವನದಲ್ಲಿ ಜಿಗುಪ್ಸೆಹೊಂದಿ ಅನೇಕ ಸಮಸ್ಯೆಗಳಿಗೊಳಗಾದವರೂ ಕೋಮಲವಾದ ಮತ್ತು ಶುದ್ಧವಾದ ಮನಸ್ಸುಳ್ಳ ಮಕ್ಕಳ ಮುಂದೆ ನಿಂತು ಪಾಠಹೇಳುವುದೆಂದರೆ ಅವರ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆಂಬುದನ್ನು ಹೇಳುವುದು ಕೂಡ ಕಷ್ಟ. ಮಕ್ಕಳನ್ನು ಪ್ರೀತಿಯಿಂದ ಸಾಕಿ ಇಂತಹ ಉಪಾಧ್ಯಾಯರ ಮುಂದೆ ಕೂಡಿಸಿದರೆ ಇದರಿಂದ ಸುಕೋಮಲವಾದ ಶುದ್ಧ ಹೃದಯದ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆಂಬುದನ್ನು ಯೋಚಿಸಬೇಕು......

Sri W. H. HANUMANTHAPPA.—Are we passing a vote of censure against the community of teachers?

Mr. SPEAKER.—That is his opinion.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಮಕ್ಕಳ ಬುದ್ಧಿ, ಪ್ರತಿಭೆ ಇಂತಹ ಉಪಾಧ್ಯಾಯರಿಂದ ನಿಜವಾಗಿಯೂ ಬೆಳೆಯಲಾರದು. ಬೆಳೆಯುವುದಕ್ಕೆ ಬದಲು ಅವರ ಬುದ್ಧಿ ಪ್ರತಿಭೆಗಳು ಇನ್ನೂ ಕೊಳೆಯಾಗುತ್ತವೆಯೆಂದು ಹೇಳುವುದರಲ್ಲಿ ಸಂದೇಹವಿಲ್ಲ, ಎಲ್ಲವನ್ನೂ ಉತ್ತಮಪಡಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಆದರೆ ಈ ಹೊತ್ತು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಸುವುದು ಕರ್ತವ್ಯ, ನಾನಂತೂ ನಿತ್ಯ ಜೀವನದಲ್ಲಿ ಇದನ್ನು ಅನುಭವಿಸುತ್ತಿದ್ದೇನೆ. ಮಕ್ಕಳಿಗೆ ಎಂತಹ ಉಪಾಧ್ಯಾಯರು ಬೇಕೆಂಬುದನ್ನು ತಿಳಿಯಲು ನಾನು ಪ್ರಯತ್ನಪಡುತ್ತಿದ್ದೇನೆ. ಲೋಯರ್ ಸೆಕೆಂಡರಿ ಪಾಸು ಮಾಡಿದ ತಕ್ಷಣ ಮಕ್ಕಳಿಗೆ ಪಾಠ ಹೇಳುವುದಕ್ಕೆ ಸಿದ್ಧರಾಗುತ್ತಾರೆ, ಯೋಗ್ಯರಾಗುತ್ತಾರೆ ಎಂಬ ಮನೋಭಾವವಿದೆ. ಇದು ತಪ್ಪು. ಖಂಡಿತವಾಗಿ ಶಸ್ತ್ರಚಿಕಿತ್ಸೆಯ ವಿಷಯವೇ ತಿಳಿಯದ ಮನುಷ್ಯನನ್ನು ಶಸ್ತ್ರಚಿಕಿತ್ಸೆಮಾಡೆಂದು ಹೇಳಿದರೆ ಏನು ಪರಿಣಾಮವಾಗುತ್ತದೆಂಬುದನ್ನು ಸುಲಭವಾಗಿ ಊಹಿಸಬಹುದಲ್ಲವೆ? ಇದರಲ್ಲಿಯೂ ಅಷ್ಟೇ ಪರಿಣಾಮವಾಗುತ್ತದೆ. ಉತ್ತಮ ಗುಣಸಂಪನ್ನರಾಗಿ ಕೋಮಲಹೃದಯರಾದ ಮಕ್ಕಳು ಬೆಳೆಯಲು ಅಂತಹ ಉಪಾಧ್ಯಾಯರೇ ಸಾಕೆಂದರೆ, ಅದು ದೇಶದ ದುರಾದೃಷ್ಟ. ವಿಶ್ವವಿದ್ಯಾಲಯ, ಹೈಸ್ಕೂಲು ವಿದ್ಯಾಭ್ಯಾಸ ಹಾಗಿರಲಿ ಮುಂದೆ, ಸತ್ಪ್ರಜೆಗಳಾಗುವ ಸಣ್ಣ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನಕೊಟ್ಟು ಇನ್ನು ಮುಂದೆ ಶಿಕ್ಷಣಕ್ಷೇತ್ರಕ್ಕೆ ಕಾಲಿಡುವುದೊಂದು ಹೆಮ್ಮೆಯ ಜೀವನ, ಮಕ್ಕಳಿಗೆ ಶಿಕ್ಷಣ ಕೊಡುವುದೊಂದು ಗೌರವ ಜೀವನವೆಂದು ತಿಳಿದುಕೊಂಡಿರುವ ಉಪಾಧ್ಯಾಯರು ಬರುವುದಕ್ಕೆ ಅವಕಾಶ ಕಲ್ಪಿಸುವುದು ಸರ್ಕಾರದವರ ಕರ್ತವ್ಯ. ಇದಕ್ಕೆ ತಕ್ಕ ಪ್ರಯತ್ನಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಭಾಷಾನೀತಿ. ಇರುವ ವಿಷಯವನ್ನು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಬೇಕು. ಹಿಂದೆ ನಾಡುನುಡಿ ವಿಷಯದಲ್ಲಿ ಒಂದು ಗೌರವವಿತ್ತು. ಇದು ನಮ್ಮ ಮಾತೃಭಾಷೆ ಎಂದು ಜನರಲ್ಲಿ ಪ್ರೇಮ ಬೆಳೆಯುತ್ತಿತ್ತು. ಸ್ವಾತಂತ್ರ್ಯ ಬಂದಮೇಲೆ ಕನ್ನಡನಾಡಿನ ಕನ್ನಡ ಭಾಷೆಯ ವಿಷಯ ಕಿವಿಗೆ ಬೀಳುತ್ತಲೇ ಇಲ್ಲ. ಇಂತಹ ಸ್ಥಿತಿ ಬಂದಿದೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಕ್ಕಳನ್ನು ಸಿದ್ಧಪಡಿಸಿದ ಅನೇಕ ಶಾಲೆಗಳಲ್ಲಿ ಅಭಿಮಾನದಿಂದ ಕನ್ನಡ ಮಾಧ್ಯಮವನ್ನು ಹರಡಿದ್ದರು. ಅಂತಹ ಶಾಲೆಗಳೂ ಸಂಸ್ಥೆಗಳೂ ಈಗ ಹೀನಸ್ಥಿತಿಗೆ ಬಂದಿವೆ. ಮೈಸೂರು ವಿದ್ಯಾವರ್ಧಕ ಹೈಸ್ಕೂಲು ಎಂಬ ಒಂದು ಹೈಸ್ಕೂಲಿದೆ. ಅದಕ್ಕೆ ಈಗ ಹುಡುಗರೇ ಬರುತ್ತಿಲ್ಲ, ನ್ಯಾಷನಲ್ ಎಜ್ಯುಕೇಷನ್ ಸೊಸೈಟಿಯೂ ಹೀನಸ್ಥಿತಿಯಲ್ಲಿದೆ, ಕನ್ನಡ ಮಾಧ್ಯಮವನ್ನು ವಿರೋಧಿಸುವವರ ವಾದವೇನೆಂದರೆ, ಕನ್ನಡ ಮಾಧ್ಯಮವನ್ನು ತೆಗೆದುಕೊಂಡು ಕಾಲೇಜುಗಳಿಗೆ ಹೋದರೆ ಇಂಗ್ಲೀಷಿನಲ್ಲಿ ಹಿಂದುಳಿಯುತ್ತಾರೆ ಎಂಬುದು. ಇದನ್ನು ಪ್ರವೀಣರು ಪರೀಕ್ಷೆಮಾಡಿ ಕನ್ನಡ ಮಾಧ್ಯಮದ ಹುಡುಗರು ಹಿಂದೆ ಬೀಳುವುದಿಲ್ಲವೆಂಬುದನ್ನು ಅಂಕಿ ಅಂಶಗಳಿಂದ ನಿರ್ಧರಿಸಿ ತೋರಿಸಿದ್ದಾರೆ. ಈ ವಿಚಾರದಲ್ಲಿಯೂ ಸರ್ಕಾರ ಯಾವ ನೀತಿಯನ್ನನುಸರಿಸುತ್ತಾರೆಂಬುದನ್ನು ತಿಳಿಸದಿರುವುದು ವಿಷಾದಕರವಾದ ಸಂಗತಿ.

ಇನ್ನೂ ಅನೇಕರು ಅನೇಕ ವಿಷಯಗಳಲ್ಲಿ ಮಾತನಾಡುವವರಾಗಿದ್ದಾರೆ ಆದರೂ ಇನ್ನೊಂದು ವಿಷಯ— ಬಸ್ಸುಗಳ ವಿಷಯ ಎರಡು ಮಾತುಗಳನ್ನಾಡಬೇಕೆಂದು ಆಶೆ. ರೋಡ್ ಟ್ರಾನ್ಸ್‌ಪೋರ್ಟ್ ಪ್ರಾರಂಭವಾದಾಗ ಬಹುಜನರು ಇದು ಉತ್ತಮ ಸ್ಥಿತಿಯಲ್ಲಿ ನಡೆಯುತ್ತದೆಂದು ತಿಳಿದುಕೊಂಡಿದ್ದರು ಜನ ಕೊಟ್ಟ ಹಣ ಸರ್ಕಾರಕ್ಕೇ ಹೋಗುತ್ತದೆ, ಹೋಗಬೇಕಾದ ಸ್ಥಳಗಳಿಗೆ ಸುರಕ್ಷಿತವಾಗಿ ಈ ಬಸ್ಸುಗಳಲ್ಲಿ ತಲಪುತ್ತೇವೆಂದು ತಿಳಿದಿದ್ದರು, ಆದರೆ ಈಗ ನಿರಾಶೆಯಾಗಿ ಪರಿಣಮಿಸಿದೆ. ಎಲ್ಲೋ ಹೋಗಿ ಮಧ್ಯೆ ಬಸ್ಸುಗಳು ನಿಂತುಹೋಗುತ್ತವೆ. ರಾಷ್ಟ್ರೀಕರಣ ಮಾಡಬೇಕೆಂದು ಒತ್ತಾಯಪಡಿಸುತ್ತಿದ್ದ ಜನರು ಈಗ ಅದು ಬೇಡವೆನ್ನುವ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿದು ಸರ್ಕಾರದವರು ಸರಿಪಡಿಸುವುದು ಅವರ ಕರ್ತವ್ಯ. ಪ್ರಾರಂಭದಲ್ಲೇ ರಾಷ್ಟ್ರೀಕರಣದ ಉದ್ದೇಶವೇ ಹೀಗೆ ಉತ್ತಮವಾಗಲಿಲ್ಲ.

ಕೊನೆಯದಾಗಿ, ಶಾಸನಸಭಾ ಕಾರ್ಯಾಲಯ ಸ್ವತಂತ್ರವಾಗಿರಬೇಕೆಂಬ ತತ್ವವನ್ನು ರಾಜ್ಯಾಂಗವೇ ಒಪ್ಪುತ್ತದೆ. ಇದನ್ನು ಸರ್ಕಾರದವರು ಆದಷ್ಟು ಬೇಗ ಮಾಡಿದರೆ ಬಹಳ ಉತ್ತಮ. ಪ್ರಜಾಪ್ರಭುತ್ವ ಪದ್ಧತಿಗನುಗುಣವಾಗಿ ಸ್ವತಂತ್ರವಾಗಿ ಕೆಲಸಕಾರ್ಯಗಳನ್ನು ಮಾಡಲು ಈ ಸಭೆಯ ಕಾರ್ಯದರ್ಶಿಗಳಿಗೆ ಸ್ವಾತಂತ್ರ್ಯವಿದ್ದಂತಾಗುತ್ತದೆ. ಇಲ್ಲಿ ಕೆಲಸ ಮಾಡತಕ್ಕ ಸೂಪರಿಂಟೆಂಡೆಂಟರು, ಸಿಬ್ಬಂದಿ ಎಲ್ಲವೂ ಸೇರಿ ಶಾಸನಸಭೆಯ ಸೆಕ್ರೆಟೇರಿಯೆಟ್ ಸ್ವತಂತ್ರವಾಗಿರಬೇಕೆಂಬ ತತ್ವವನ್ನು ಅಂಗೀಕರಿಸಿ ಅದರಂತೆ ಮಾಡಿದರೆ ಎಲ್ಲರೂ ಅವರವರಿಗೆ ದೇವರು ಕೊಟ್ಟಿರುವ ಬುದ್ಧಿಯನ್ನುಪಯೋಗಿಸಿ ನಿರ್ದಾಕ್ಷಿಣ್ಯದಿಂದ ನ್ಯಾಯವಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಇಂಥಾದ್ದನ್ನು ಜಾಗ್ರತೆ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಸರ್ಕಾರದವರು ಬೇಕಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರಯತ್ನಮಾಡಿದ್ದಾರೆ. ಮಧ್ಯೆ ತೊಂದರೆಗಳು ಬಂದಿರಬಹುದು. ನಾನು ಹೇಳಿದುದು ಬರೀ ಟೀಕೆಗೇ ಅಲ್ಲ. ಇಂತಹ ನೀತಿಯನ್ನನುಸರಿಸಿದ್ದೇವೆಂಬುದನ್ನು ನಿರ್ದಿಷ್ಟವಾಗಿ ತೋರಿಸುವ ಮನೋಭಾವವನ್ನು ಪ್ರತಿ ಸದಸ್ಯರೂ ಹೊಂದಿರಬೇಕು ಆ ರೀತಿಯ ನೀತಿಯನ್ನು ನಿರ್ಧರಿಸಿ ದೇಶಕ್ಕೆ ಮಾರ್ಗದರ್ಶಕರಾಗಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. M. MASCARENHAS (Retroceded Ara-General).—Mr. Speaker, Sir, Budgets are of many kinds, some crushing, some sobre, some unimaginative I am inclined to call the Budget of our Hon'ble Finance Minister as one full of hope, because I see fairly large allotments in every sphere of activity both recurring and for capital, both for welfare and development schemes. This is a new and hopeful sign and our thanks are surely due to him. But the tragedy may be that the good intentions of the Government may not be translated into action. I only hope the Government will take note of this.

Debate at length has already taken place on problems relating to food and the 'Grow More Food' Campaign. Every member has spoken out what he has felt. No subject to-day is of

greater importance than food. As my friend Sri Subramanya said, hunger and starvation cannot have stand and they must be kept out of the country without counting the cost. I may in this connection recall the memorable words of our Prime Minister when he said 'Produce or perish. If we do not do the first, then the second will obviously come." It is easy for us to criticise the Government for not producing more food and to feel happy that our task is completed once this is done. But let us not forget that in the growing of food, a number of factors are responsible over many of which the Government unfortunately has no control. The chief productive agency is the farmer over whom the Government has no hold. We may criticise them for unwisely spending sums of money, that their schemes did not go through according to schedule, but certainly it may not be wise to blame them if more food has not been grown. In the 'Grow More Food' Campaign as far as I see, four Departments are now playing their part—the Revenue Department, the Food Department, the Agricultural Department and the Engineering Department. We are all aware how notoriously slow and how efficient each Department is in the sphere of work allotted to it and you can imagine the results when in the Grow More Food' Campaign four departments are asked to co-ordinate their work. Unless and until this system changes I am afraid better results cannot be obtained. I would therefore suggest that a production chief for food alone be appointed and to him be transferred a certain section of the Agricultural Department and the Engineering Department; works such as restoration of minor tanks, de-silting of tanks, building of minor dams may be entrusted to this body. Let them work according to a plan and let there be a Minister purely for the Departments of Agriculture and Food. I am sure if this is done with a certain amount of boldness, better results will accrue.

Sri Subramanya referred to the bad condition of our roads. I am in full agreement with him. My own impression is that Mysore roads at no time were good and to-day perhaps they are a bit worse. I often wonder how a progressive State like Mysore did not think of a correct road policy or programme for the last twenty-five years. When cement and asphalt were plentiful, labour and material cheap, miles and miles of concrete or asphalt roads should have been laid in the State; but what do we see? Nothing. To-day the costs of materials are abnormally high; but this is not a cause for dismay. On good roads depends the economic prosperity of a country and I can boldly say that the 'Grow More Food' Campaign is closely associated with good roads. We have the motor petrol fund, the sales tax on petrol, motor vehicles taxation fund running to the tune of a few lakhs of rupees. It is in the fitness of things that every pie of this money should be spent on roads alone. If necessary, let a loan be raised to meet not only recurring expenditure on upkeep of present roads but for construction of new roads. Within the next ten years let us programme to connect every district headquarters with asphalt or concrete road and every important taluk of the State. Let there be also more roads between villages.

I was not to speak on prohibition to-day, but my friend Sri Subramanya has provoked me to do it. I am afraid he becomes an idealist; I just want to be a realist. Ever since the launching of prohibition the Governments which have embarked on this policy have become increasingly aware of its shortcomings. They have realised that morality cannot be enforced by legislation and that social reform is not the primary duty of a State. Let alone the loss of revenue of millions of rupees at a time like this when we have so many development schemes. Secondly, crime, I mean illicit distillation crime is on the increase thereby nece sitating a larger preventive force at extra cost. Thirdly, and this is most important, people are to-day drinking obnoxious decoctions in the name of liquor and the health of the nation itself is at stake. In view of all this, I personally feel that the policy of the Government in

(SRI V. M. MASCARENHAS).

trying to assess the resul s so far achieved befo-e embarking on any further policy is highly commendable and I am sure, will have the support of the major part of this House.

I now come to the industries of the State. I must say I am rather disappointed at the results. If I may draw the attention of the Hon'ble Members to page 76 in the Budget Memorandum wherein the trading results of Government Commercial concerns are given, you will see that we have sunk over Rs. 460 lakhs as capital and the realisation we have now is hardly Rs. 8 lakhs, *i.e.*, below two per cent. The Mysore Iron and Steel Works, which is in existence for the last thirty years, manufacturing products which may be considered monopoly products and which have no competition and which enjoy prices fixed by a good Government—even that has not shown a very good return. The smaller ones are more deplorable Please see the Government Electric Factory on page 76. At no time has this factory shown any profits. Similarly the Porcelain Factory. And all these factories have gone through a period of war boom when everything was so favourable and when it was possible to wipe off deficits and even all the capital account. Yet to-day we see these industries in such a pitiable state. The question now is, are we going to allow this state of affairs to contiuue? I am of the opinion that something is radically wrong somewhere. I would ask the Industries Minister to lose no time and find out what is radically wrong with these industries. If we cannot mend them let us end them. Of course I admit that the cost of labour has gone up and also the cost of raw materials. But if this is the case of the well-established Industrial concerns, what will be the case of the Industries that are now to be started? When I say this, I have in mind the Fertiliser Scheme at Bhadravathi. At the last session I put an interpellation on this subject and when I got the answer that no definite orders were placed, I felt happy. But this time I see an allotment of Rs. 30 lakhs, which means that Government are keen in pushing the scheme through. The scheme is said to cost about three crores and perhaps by the time it sees the light of the day it may be another one more totalling four crores. The Industries Minister at eve y s'age has taken care to see and tell us that every scheme of the Mysore Government is carefully scrutinised and has the blessings of the Government of India at every stage. Sometime ago this assurance might have been enough. But today after we have heard of the things at the Centre I am afraid I cannot but be sceptical. Was sindri illadvised or illconceived or was the prefabricated housing scheme not well thought of? Was Damodar Valley considered by a competent department of Government? And yet what has happened? Crores of good money have gone down the drain.

The Hon'ble Sri H. C. DASAPPA.—I may say—not that I rise to a point of order—that the Hon'ble member is out of court to refer to them. But I think it is best part of wisdom that we should not refer to them because the Government of India is not here to defend itself. Each person has got his own opinion and the Government of India has got its own opinion about the campaign. So I think even the criticisms such as he may choose to offer, could be offered without reference to what might happen in other parts. I think my friend will kindly oblige by not making too much of references.

Sri V. M. MASCARENHAS.—I said that because in the speech of the Finance Minister, he has taken pains to tell us that every scheme that is put forward has been very carefully scrutinised and that the Government of India gives its blessings to us. In the face of that fact I am just making that statement. Are we to go forward merely because the Government of India which does not contribute even one anna to our capital schemes will say 'go ahead'?

The Hon'ble Sri H. C. DASAPPA.—We have satisfied ourselves that the scheme is good. So you can tackle us as much as you wish and it is up to us to answer you. But then do not

bother merely because the circumsstances necessitated blessing. I am not going to shift my responsibility for the scheme merely because of the Government of India. blessing our schemes. That is not my intention.

Sri V. M. MASCARENHAS.—I would request the Hon'ble Minister for Finance and Industries before we spend Rs. 3 crores of money, to consult every possible source of expert opinion. After all, fertiliser schemes in this country are not abundant. The one that is working at always has not proved a success. Our own Mysore Chemical and Fertilisers is not working at full capacity after 12 years. What is it due to? Shall we start it merely because of some sacredness attached to the place *viz.*, Bhadravathi? Let us hope everything will be a success. I want the interests of the State to be safeguarded. It is not such a sum of money that we can say, 'all right, we make an honest mistake, let it go.' It is a mistake that will break our bones. It is only with that intention that I say so. I request the Hon'ble Minister kindly to bear this in mind. In every scheme of capital outlay in future be guided by the best interests of Mysore and of the citizens of Mysore.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ಟನ್ನು ಸಭೆಯ ಮುಂದಿಡುವಾಗ ಮಾನ್ಯ ಸಚಿವರು ಚುನಾವಣೆ ವಿಚಾರವನ್ನು ಹೇಳಿದ್ದಾರೆ. ಅದರಲ್ಲಿ ಈ ವರ್ಷವೇ ಚುನಾವಣೆ ಖಂಡಿತ ಆಗುತ್ತದೆಂದು ಒಂದು ಅಭಿಪ್ರಾಯ ಕೂಡ ಬಂದಿದೆ. ಅದಕ್ಕೆ ನಾನು ಅವರನ್ನು ವಂದಿಸಬೇಕಾಗಿದೆ. ಹಾಗೆ ಹೇಳುವಾಗ ಆ ಚುನಾವಣೆ ಫಲಿತಾಂಶದ ವಿಚಾರವಾಗಿ ತುಂಬಾ ಕಳವಳವನ್ನು ವ್ಯಕ್ತಪಡಿಸಿದಹಾಗೆ ನನಗೆ ಭಾಸವಾಗಿದೆ. ಚುನಾವಣೆಗೆ ಸಂಬಂಧಪಟ್ಟ ನಿರ್ಣಯ ಕೂಡ ಹಾಗೆಯೇ ಇದೆ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಕಳೆದ ಮೂರು ವರ್ಷಗಳಿಂದ ದೇಶದ ಆಡಳಿತ ನಡೆಯುತ್ತಿರುವಂತೆ ಮುಂದೆ ನಡೆದುಕೊಂಡು ಹೋದರೆ ಖಂಡಿತವಾಗಿ ಈ ಸಭೆಯ ಸದಸ್ಯರಾದ ನಾವು ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಲಾರೆವು ಎಂದು ಹೇಳುವುದರಲ್ಲಿ ಏನೇನೂ ಅನುಮಾನವಿಲ್ಲ. ಇದನ್ನು ಮಾನ್ಯ ಸಚಿವರು ತಿಳಿದುಕೊಂಡೇ ಎಲ್ಲರಿಗೂ ಎಚ್ಚರಿಕೆ ಕೊಟ್ಟಿದ್ದಾರೆ. ವಯಸ್ಕರ ಮತದಾನ ಪದ್ಧತಿ ಬರುತ್ತದೆ, ಹುಷಾರಾಗಿರಬೇಕು ಎಂದು ಹೇಳಿದ್ದಾರೆ. ಅಲ್ಲದೆ ಇಷ್ಟು ದಿವಸವೂ ನೀವು ಅನುಸರಿಸಿದ ನೀತಿಯ ಪರಿಣಾಮವನ್ನು ಇನ್ನು ಐದಾರು ತಿಂಗಳಲ್ಲಿ ಸರಿಪಡಿಸುವುದಕ್ಕೆ ಸಾಧ್ಯವಿಲ್ಲ, ಹೇಗೆ ವಚನಕೊಟ್ಟರೂ ಈಗ ಖಂಡಿತ ಸಾಧ್ಯವಿಲ್ಲ. ಈಗ ಮಾನ್ಯ ಸಚಿವರಿಂದ ಬರುವ ಸೂಚನೆ ಬಹಳ ನಿಧಾನವಾಗಿದೆಯೆಂದು ಭಾವಿಸುತ್ತೇನೆ.

ಮೊದಲನೆಯದಾಗಿ ಈ ಬಜೆಟ್ಟಿನಲ್ಲಿ ಸಾಮಾನ್ಯ ಜನರ ಅನುಕೂಲಕ್ಕೆ ಅವಶ್ಯಕವಾದ ಯಾವ ವಿಧವಾದ ಒಂದು ಕಾರ್ಯಕ್ರಮವೂ ಇಲ್ಲ ಮತ್ತು ಹೆಚ್ಚು ಸೌಕರ್ಯಗಳನ್ನೊದಗಿಸುವುದಕ್ಕೆ ಇದು ಸಾಧಕವಾಗಿಲ್ಲ ಎಂದು ಕೆಲವು ಸದಸ್ಯರು ಹೇಳಿದರು. ಅದಕ್ಕೆ ಮುಖ್ಯವಾಗಿ ಹಣಕಾಸಿನ ವಿಲೀನೀಕರಣವು ಕೇಂದ್ರದೊಂದಿಗೆ ಆಗಿರುವುದೇ ಕಾರಣವೆಂದು ಚೆನ್ನಾಗಿ ಗೊತ್ತಾಗುತ್ತದೆ. ಮೊದಲು ವಿಲೀನೀಕರಣವಾಗುವಾಗ ಬಹಳವಾಗಿ ಇಂಡಿಯಾ ದೇಶದ ಕಡೆಯಿಂದ ಉಪಕಾರವಾಗುತ್ತದೆಯೆಂಬ ಭಾವನೆಯಿತ್ತು. ಅವರು ನಮ್ಮಿಂದ ತೆಗೆದುಕೊಳ್ಳುವ ಇರಾಖೆಯ ವರಮಾನಕ್ಕೆ ಸರಿಯಾದ ಪ್ರತಿಫಲ ನಮಗೆ ಬರಬಹುದೆಂಬುದಾಗಿ ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಅದೂ ಅಲ್ಲದೆ ಆಹಾರದ ಸಬ್ಸಿಡಿಗಾಗಿ ಸುಮಾರು ಎರಡುಕೋಟಿ ರೂಪಾಯಿಗಳನ್ನು ಕೊಡುತ್ತಾರೆಂದು ತಿಳಿದುಕೊಂಡಿದ್ದರು ಈ ದಿವಸ ಎಲ್ಲವೂ ತಲೆಕೆಳಗಾಗಿದೆ. ನಮ್ಮ ದೇಶಕ್ಕೆ ಬರುವುದರ ಎರಡರಷ್ಟು ಉತ್ಪತ್ತಿಯನ್ನು ಇಂಡಿಯಾ ದೇಶವು ತೆಗೆದುಕೊಳ್ಳುತ್ತಿದೆ. ರೈಲ್ವೇ ಛಾರ್ಜನ್ನು ಹೆಚ್ಚಿಸಿದೆ, ವರಮಾನತೆರಿಗೆ ಹೆಚ್ಚಿದೆ, ಹಾಗೆಯೇ ಎಕ್ಸೈಜು ತೆರಿಗೆ ವಗೈರೆ ಎಲ್ಲವೂ ಕೂಡ ಹೆಚ್ಚಿದೆ. ಇದೂ ಅಲ್ಲದೆ ಇನ್ನೆರಡು ವರ್ಷಗಳಲ್ಲಿ ವರಮಾನ ತೆರಿಗೆಯು ಇನ್ನೊಂದುಬಾರಿಯಾಗುತ್ತದೆ. ಟೆಲಿಫೋನ್ ಛಾರ್ಜಸಹ ಹೆಚ್ಚಿದೆ. ಅಲ್ಲದೆ ಸರ್ವಿಸ್ ನಮ್ಮ ಜನರಿಗೆ ಸುಲಭವಾಗಿ ಸಿಕ್ಕುತ್ತಿದ್ದುದು ಈಗ ಬಹಳ ತೊಂದರೆಗೆ ಗುರಿಯಾಗಿದೆ. ಇದೆಲ್ಲವೂ ಪರಿಹಾರವಾಗಬೇಕಾದರೆ ಎಷ್ಟೋ ಕಷ್ಟಪಡಬೇಕು. ಇದರಿಂದ ಎಷ್ಟು ಅನುಕೂಲವಾಗುತ್ತದೆ ಎಂದು ನಿರೀಕ್ಷಿಸಿದ್ದೆವೋ ಅದಕ್ಕೆ ಎರಡರಷ್ಟು ಪ್ರತಿಕೂಲವಾಗುತ್ತಾ ಇದೆ.

ಇನ್ನೊಂದು ವಿಚಾರ. ನಾವು ಇತರ ದೇಶಗಳಿಗಿಂತಲೂ ಪ್ರಗತಿಮಾರ್ಗದಲ್ಲಿ ಇದ್ದೇವೆ, ಅದರಲ್ಲೂ ವಿದ್ಯಾಭ್ಯಾಸದಲ್ಲಿ ಬಹಳ ಮುಂದಿದ್ದೇವೆ ಎಂದು ಮಾನ್ಯ ಮಿತ್ರರಾದ ಶ್ರೀ ಸಿದ್ಧವೀರಪ್ಪನವರು ಹೇಳಿದರು. ಇದಕ್ಕೆ ನಾನು ಒಂದೇ ಒಂದು ಉದಾಹರಣೆ ಕೊಡುತ್ತೇನೆ. ತಿರುವಾಂಕೂರು ಕೊಚ್ಚಿನ್ ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ 331 ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದಾರೆ. ಅದೇ ನಮ್ಮ ಸಂಸ್ಥಾನದಲ್ಲಿ 308 ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ. ಯೂನಿವರ್ಸಿಟಿಗೆ ಈ ಪೈಕಿ, ತಿರುವಾಂಕೂರಿನಲ್ಲಿ 25 ಲಕ್ಷ ಮಾತ್ರ ಕೊಟ್ಟರೆ ಮೈಸೂರಿನಲ್ಲಿ 45 ಲಕ್ಷ ಕೊಟ್ಟಿದೆ. ಅದೂ ಅಲ್ಲದೇ ಜನಗಳಿಗೆ ಮುಖ್ಯವಾದದ್ದು ಆರೋಗ್ಯ. ಆ ಬಾಬಿಗಾಗಿ ಅವರು 135 ಲಕ್ಷ ರೂಪಾಯಿ ಕೊಡುತ್ತಿದ್ದಾರೆ, ಇಲ್ಲಿ 134 ಲಕ್ಷ ಕೊಡುತ್ತಿದ್ದೀರಿ. ಎಂದ ಮೇಲೆ ನಮಗಿಂತ ಅವರು ಯಾವುದರಲ್ಲಿ ಕಡಿಮೆಯಾಗಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಅವರ ದೇಶದ ಸ್ಥಿತಿ ಹೇಗಿದೆ ಎಂದರೆ ಸರ್ವಿಸಸ್‌ಗೆ 5 ಕೋಟಿ ರೂಪಾಯಿ ಕೊಡುತ್ತಿದ್ದಾರೆ. ನಮ್ಮಲ್ಲಿ 6 ಕೋಟಿ 18 ಲಕ್ಷ ಕೊಡುತ್ತಿದ್ದೀರಿ. ಇಷ್ಟು ಕೊಟ್ಟರೂ ಅನುಕೂಲವಾಗಿದೆಯೇ ಎಂದರೆ ಬಡ ನೌಕರರಿಗೆ ಅನುಕೂಲವಾಗಿಲ್ಲ. ತಿರುವಾಂಕೂರಿನಲ್ಲಿ 40 ರೂಪಾಯಿಗಿಂತ ಕಡಿಮೆ ಸಂಬಳ ಯಾರಿಗೂ ಇಲ್ಲ. ಇದ್ದರೂ ಅಲೋಯನ್ಸ್ ಕೊಟ್ಟು ಭರ್ತಿ ಮಾಡಿಕೊಡುತ್ತಾರೆ. ಆರೀತಿ ಇಲ್ಲದೆ, ನಮ್ಮಲ್ಲಿ ಕೆಳದರ್ಜೆಗೂ ಮೇಲ್‌ದರ್ಜೆಗೂ ಬಹಳ ವ್ಯತ್ಯಾಸವಿದೆ. ನೀವು 1 ಕೋಟಿ 18 ಲಕ್ಷ ರೂಪಾಯಿ ಹೆಚ್ಚಾಗಿ ಕೊಟ್ಟರೂಕೂಡ ಸಾಮಾನ್ಯನೌಕರರಿಗೆ ಏನೂ ಪ್ರಯೋಜನವಾಗುತ್ತಿಲ್ಲ.

(ಶ್ರೀ ಬಿ. ಹುಚ್ಚೇಗೌಡರು).

ಇನ್ನು ಸಾಮಾನ್ಯ ಜನಗಳಿಗೆ ಎಷ್ಟು ಅನುಕೂಲ ಮಾಡುತ್ತಾ ಇದ್ದೀರಿ ಎಂಬುದನ್ನು ನೋಡುವುದಾದರೆ ಹಿಂದಿನಿಂದಲೂ ವರ್ಷಕ್ಕೆ 400 ಸ್ಕೂಲುಗಳನ್ನು ಸ್ಥಾಪಿಸುತ್ತಿದ್ದರು. ಈಗ ಅದನ್ನು ಕಡಿಮೆಮಾಡಿದ್ದೀರಿ. ಇವತ್ತು ಹೇಳಬೇಕಾದರೆ ಪ್ರೈಮರಿ ವಿದ್ಯಾಭ್ಯಾಸವನ್ನು ಕೊಡಬೇಕಾದ್ದು ಸರ್ಕಾರದ ಮೊಟ್ಟಮೊದಲನೆಯ ಜವಾಬ್ದಾರಿ ಎಂದು ಹೇಳುತ್ತಿದ್ದುದನ್ನು ನಾವು ಅನೇಕಕಡೆ ಕೇಳಿದ್ದೇವೆ. ಒಂದು ಉದಾಹರಣೆ ಹೇಳುವುದಾದರೆ ನಮ್ಮ ಅರ್ಥಿಕ ಸಚಿವರು 1936ನೆಯ ಇಸವಿಯಲ್ಲಿ ಹಾಸನದಲ್ಲಿ ಒಂದು ಸಭೆ ಮಾಡಿದ್ದರು. ಆಗ ದೇಶದಲ್ಲಿ ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರತಿಯೊಬ್ಬನಿಗೂ ಮಾಡಿಸಬೇಕು ಅದು ಸರ್ಕಾರದ ಜವಾಬ್ದಾರಿ ಎಂದು ಹೇಳಿದ್ದಾರೆ. ಅದನ್ನು ಈ ಸಮಯದಲ್ಲಿ ಅವರ ಜ್ಞಾಪಕಕ್ಕೆ ತರಲು ಇಚ್ಛಿಸುತ್ತೇನೆ. ಸಂಸ್ಥಾನಾವಾಳೆ ಬಲಾತ್ಕಾರ ವಿದ್ಯಾಭ್ಯಾಸ ಮಾಡಿಸುವುದು ಸರ್ಕಾರದ ಒಂದು ನೀತಿ. ಅದನ್ನು ಪ್ರತಿ ಡಿಸ್ಟ್ರಿಕ್ಟ್‌ನಲ್ಲೂ ಜಾರಿಗೆ ಕೊಟ್ಟು, ಪ್ರಜಾಭಿಪ್ರಾಯದಂತೆ ನಡೆಸಿಕೊಂಡು ಬರುತ್ತಾ ಇದ್ದರು. ಈಗ ಅದೂಕೂಡ ಬಹುಮಟ್ಟಿಗೆ ಕಡಿಮೆಯಾಗಿದೆ. ಇಂಥಾದ್ದರಲ್ಲಿ ನಮ್ಮ ಸಂಸ್ಥಾನ ಯಾವುದರಲ್ಲಿ ಪ್ರಗತಿದಾಯಕವಾಗಿದೆ ಎಂದು ಹೇಳಿಕೊಳ್ಳುವ ಧೈರ್ಯವಿದೆ ಎಂದು ಪ್ರಶ್ನೆ ಹಾಕುತ್ತೇನೆ.

ಇನ್ನೊಂದು ವಿಷಯ. ನಮ್ಮ ಆಡಳಿತ ಎಷ್ಟು ಮಟ್ಟಿಗಿದೆ? ಪ್ರತಿಯೊಂದರಲ್ಲೂ ಸಹ ಯಾವ ಒಂದು ನೀತಿ, ತತ್ವ ಅನುಸರಿಸುತ್ತೇವೆ ಎಂದು ಹೇಳುತ್ತಿದ್ದೀರೋ ಅದನ್ನು ಅನುಸರಿಸುತ್ತಿಲ್ಲ. ಉದಾಹರಣೆಗೆ ಪಾನ ನಿರೋಧವನ್ನು ತೆಗೆದುಕೊಳ್ಳಿ, ಅದು ಯಶಸ್ವಿಯಾಗಿದೆಯೇ? ಅದೇ ರೀತಿ ಬಸ್ಸುಗಳ ರಾಷ್ಟ್ರೀಕರಣವಾಗಲೀ, ಬಲಾತ್ಕಾರ ವಿದ್ಯಾಭ್ಯಾಸವಾಗಲೀ ಯಾವುದರಲ್ಲಾದರೂ ಪೂರ್ಣ ಮನಸ್ಸಿಟ್ಟು whole hearted ಆಗಿ ಕೆಲಸ ಮಾಡಿ ಯಶಸ್ವಿಯಾಗಿ ಕೊನೆಗಾಣಿಸಬೇಕೆಂದು ಮಾಡಿದ್ದಾರೆಯೇ ಎಂದರೆ ಇಲ್ಲ. ಎಲ್ಲದರಲ್ಲೂ ಅರ್ಧ ಮನಸ್ಸು. ತತ್ವ ಬೋಧನೆಗಾಗಿ ಮಾಡಬೇಕೆಂದು ಇದೆಯೇ ಹೊರತು ಅದನ್ನು ಪರಿಪೂರ್ಣವಾಗಿ ಜಯಪ್ರದವಾಗಿ ಮಾಡಬೇಕೆಂದು ಸರ್ಕಾರದವರ ಮನಸ್ಸಿನಲ್ಲಿಲ್ಲ.

ಪಾನನಿರೋಧದ ವಿಚಾರ ಎಷ್ಟೋ ಸಾರಿ ಈ ಸಭೆಯಲ್ಲಿ ಚರ್ಚೆಯಾಗಿದೆ. ಹೋದಸಾರಿಯೂ ಕೂಡ ಒಂದು ನಿರ್ಣಯ ಅಂಗೀಕಾರವಾಗುವುದರಲ್ಲಿತ್ತು. ಹಾಸನ ಜಿಲ್ಲೆಗೆ ಮುಂದುವರಿಸುತ್ತೇವೆ ಎಂದು ಒಪ್ಪಿಕೊಂಡ ಮೇಲೆ ಅದರ ಸೂಚಕರು ಅದನ್ನು ವಾಪಸು ತೆಗೆದುಕೊಂಡರು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮುಂದುವರಿಸುತ್ತೇವೆ ಎಂದು ಒಪ್ಪಿಕೊಳ್ಳಲಿಲ್ಲ. ಆಲೋಚನೆ ಮಾಡುತ್ತೇವೆ ಎಂದು ಹೇಳಿದ್ದೆವು.

ಶ್ರೀ ಬಿ. ಹುಚ್ಚೇಗೌಡರು.—ಏನೇ ಆಗಲಿ, ನಮ್ಮ ಮಂತ್ರಿವರ್ಗದವರು ಹಿಂದೆ ಯಾವ ತತ್ವಗಳನ್ನು ಹೇಳುತ್ತಾ ಇದ್ದರೋ ಅವನ್ನು ಕಾರ್ಯತಃ ಮಾಡಿ ತೋರಿಸುತ್ತಿದ್ದಾರೆಯೇ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. 1947ನೆ ಜನವರಿ 26ನೇ ತಾರೀಖು ಹೊಸ ರಾಜ್ಯಾಂಗ ಸುಧಾರಣೆ ಜಾರಿಗೆ ಬಂತು. ಆಗಿನಿಂದಲಾದರೂ ಹಿಂದೆ ಇದ್ದ ಪರಿಸ್ಥಿತಿ ಹೋಗಿ ಜನಗಳಿಗೆ ಸುಖವಾಗುತ್ತದೆಯೋ ಏನೋ ಎಂದು ಭಾವಿಸಿದ್ದೆವು. ಆದರೆ ಈಗಲೂ ಕೂಡ ಅದೇ ರೀತಿ ನಡೆಯುತ್ತಾ ಇದೆ. ಉದಾಹರಣೆಗೆ ಪಬ್ಲಿಕ್ ಸರ್ವೀಸ್ ಕಮೀಷನ್ ತೆಗೆದುಕೊಳ್ಳಿ. ಸರ್ಕಾರಿ ಕೆಲಸಕ್ಕೆ ನೇಮಕಮಾಡಿಕೊಳ್ಳುವಾಗ ಯಾವ ಕೈವಾಡವೂ ಇರಕೂಡದೆಂದೂ, ಒಂದು ಕಮೀಷನ್ ಮಾಡಿ ಆ ಮೂಲಕ ನೇಮಕಮಾಡಿಕೊಳ್ಳಬೇಕೆಂದೂ 1940ನೇ ಕಾನ್‌ಸ್ಟಿಟ್ಯೂಷನ್‌ನಲ್ಲೇ ಹೇಳಿದ್ದರು. ಆಗಲೇ ಮಾಡಬೇಕಾಗಿತ್ತು. ಈಗ ಕಡ್ಡಾಯ ಬಂದ ಮೇಲೂ ಸಹ ಇನ್ನೂ ಮಾಡಿಲ್ಲ. ಅವರ ಅಭಿಪ್ರಾಯದಲ್ಲಿ ತಮಗೆ ಬೇಕಾದವರಿಗೆ, ತಮ್ಮ ಮಿತ್ರರಿಗೆ ಸಹಾಯ ಒದಗಿಸುವುದಕ್ಕೆ, ಕೆಲಸ ಕಾರ್ಯ ಕೊಡುವುದಕ್ಕೆ ಅಧಿಕಾರ ತಪ್ಪುತ್ತದೆಂದು ಈ ರೀತಿ ತಡ ಮಾಡುತ್ತಿದ್ದಾರೆ. ಇವತ್ತಿನವರೆಗೂ ಪಬ್ಲಿಕ್ ಸರ್ವಿಸ್ ಕಮೀಷನ್ ನೇಮಕಮಾಡಿಲ್ಲ. ಬೆಳಿಗ್ಗೆ ಮಾಡುತ್ತಾರೆ, ಸಾಯಂಕಾಲ ಮಾಡುತ್ತಾರೆ ಎಂದು ಆಗುತ್ತಾ ಇವೆ. ಈ ಒಂದೇ ನಿದರ್ಶನ ಸಾಕು ಎಷ್ಟುಮಟ್ಟಿಗೆ ಪ್ರತಿಗಾಮಿ ತತ್ವ ಇದೆ ಎಂಬುದು ವ್ಯಕ್ತಪಡುತ್ತದೆ, ನೂರಾರು ನಿದರ್ಶನಗಳನ್ನು ಕೊಡಬೇಕಾಗಿಲ್ಲ. ಕೇವಲ ತಮ್ಮ ಕಡೆಯವರಿಗೆ ತಮಗೆ ಮನಸ್ಸು ಬಂದಂತೆ ಕೆಲಸಗಳನ್ನು ಹಂಚಲು ಈ ಕಮಿಷನನ್ನು ನೇಮಕಮಾಡಿಲ್ಲವೆಂದು ಭಾವಿಸುತ್ತೇನೆ.

ಶ್ರೀ ಜಿ. ಎ. ಆಚಾರ್ಯರವರು.—ನಾವೇನೋ ನಮ್ಮವರಿಗೆ ಒಂದು ಹುದ್ದೆಮಾಡಿಸಿಕೊಳ್ಳಬೇಕೆಂದು ಹೇಳಿ ಇದಕ್ಕೆ ತಡೆಮಾಡಿದ್ದೇವೆ ಎನ್ನುವ ಅರ್ಥ ಬರುವ ಹಾಗೆ ಅವರು ಹೇಳುತ್ತಿದ್ದಾರೆ! ಅಂಥಾದ್ದೇನಾದರೂ ಸತ್ಯವಾಗಿ ಇದ್ದರೆ ನಮಗೂ ತಿಳಿಸಲಿ, ನಾವೂ ತಿಳಿದುಕೊಳ್ಳೋಣ. ಹಾಗಿಲ್ಲದೆ ಸುಮ್ಮನೆ ಈ ರೀತಿ ಅವರು ಅಪಾದನೆ ಮಾಡುವುದು ಸರಿಯಲ್ಲ. ಅವರು ಹಾಗೆ ಹೇಳಲಿಲ್ಲವೆಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ.

ಒಬ್ಬ ಸದಸ್ಯರು.—ಹಾಗೇನೂ ಇಲ್ಲವೆಂದು announcement ಆದಮೇಲೆ ತಮಗೇ ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ದೇಶದಲ್ಲಿ ಇವತ್ತಿನ ದಿವಸ ಏನು ಕೂಗಿದೆಯೆಂದರೆ—ಅನ್ನ, ಬಟ್ಟೆ. ಇದೇ ಸರಿಯಾಗದ ಮೇಲೆ ಇನ್ನೇನು! ಜನರಿಗೆ ವಿದ್ಯೆಯಿಲ್ಲ! ಕುಡಿತ ಮುಂತಾದುವನ್ನು ತಪ್ಪಿಸಿ ಜನರ ನೈತಿಕ ಮಟ್ಟವನ್ನು ಜಾಸ್ತಿಮಾಡುವುದಿಲ್ಲ? ದುಡ್ಡು ಗಳಿಸುವುದಿಲ್ಲ! ಜನರ ಯೋಚನೆಯಲ್ಲಾ ಅನ್ನ ಬಟ್ಟೆ ಇವೆರಡರ ಕಡೆ ಮಾತ್ರ ಹೋಗುತ್ತಿದೆ. ನಿಮ್ಮ ಸೆನ್ಸಸ್ ಲೆಕ್ಕಗಳನ್ನು ನೋಡಿದರೇ ಎಷ್ಟರಮಟ್ಟಿಗೆ ಆಹಾರದ ದೆಸೆಯಿಂದ ಜನರು ಪಟ್ಟಣದ ಕಡೆಗೆ ಓಡುವಂತೆ ಸರ್ಕಾರದವರು ಮಾಡಿದ್ದಾರೆಂಬುದು ಗೊತ್ತಾಗುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದೇಶದಲ್ಲೇ ಜನಸಂಖ್ಯೆ ಜಾಸ್ತಿಯಾಗಿದೆ!!

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಜನಸಂಖ್ಯೆ ಜಾಸ್ತಿಯಾಗಿದ್ದರೆ ಬೆಂಗಳೂರು ಸಿಟಿಯಲ್ಲಿ ಶೇಕಡ 92 ರಷ್ಟು ಜಾಸ್ತಿಯಾಗಿರುವುದಕ್ಕೂ ಬೇರೆ ಕಡೆಗಳಲ್ಲಿ ಅಷ್ಟು ಜಾಸ್ತಿಯಾಗದಿರುವುದಕ್ಕೂ ಏನು ಕಾರಣ!

ಶ್ರೀ ಜಿ. ಎ. ಆಚಾರ್ಯರವರು.—ಇಲ್ಲಿ ನಾವು ಬೇಕಾದಷ್ಟು social service ಏರ್ಪಾಡುಗಳನ್ನು ಮಾಡಿದ್ದೇವೆ.

The Hon'ble Sri T. MARIAPPA.—Malnad also has shown an increase.

ಶ್ರೀ ಬಿ. ಹುಚ್ಚೇಗೌಡರು.—ಸೋಷಿಯಲ್ ಸರ್ವಿಸ್ ಏರ್ಪಾಡುಗಳನ್ನೂ ಮಾಡಿಕೊಟ್ಟಿದ್ದೇವೆಂದರೆ ಯಾರ್ಯಾರಿಗೆ ಕೊಟ್ಟಿದ್ದೀರಿ! ಹಾಗೇನಾದರೂ ಇದ್ದರೆ ಅದನ್ನು ಅವರಿಗೆ ಮಾತ್ರವೇ ಮೀಸಲಾಗಿಟ್ಟುಕೊಳ್ಳಕೂಡದೆಂದು ಕೇಳಿಕೊಳ್ಳುತ್ತೇನೆ.

Sri G. A. ACHARYA.—I said that on social services the State is spending more.

Sri B. HUTCHE GOWDA.—In Bangalore?

Sri G. A. ACHARYA.—In the whole State, the Government here are spending on social service much more than any other Government.

ಅಧ್ಯಕ್ಷರು.—ಅವರು ಹೇಳುವುದು ಪಟ್ಟಣಗಳಲ್ಲಿ ನೀವು ಹೆಚ್ಚಿಗೆ ಖರ್ಚು ಮಾಡುತ್ತೀರಿ, ಹಳ್ಳಿಗಳಲ್ಲಿ ಇಲ್ಲ ಎಂದು.

ಶ್ರೀ ಬಿ. ಹುಚ್ಚೇಗೌಡರು.—ಆಮೇಲೆ ರಸ್ತೆಗಳ ವಿಚಾರ. ರಸ್ತೆಗಳ ರಿಪೇರಿಗಾಗಿ ಕೇಂದ್ರ ಸರ್ಕಾರದವರು 18ಲಕ್ಷ ರೂಪಾಯಿಗಳವರೆಗೂ ಕೊಡುತ್ತಾರೆ. ತಿರುವಾಂಕೂರಿನಂಥ ಸಂಸ್ಥಾನದಲ್ಲಿ ರಸ್ತೆಗಳಿಗಾಗಿ 10ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ, ರಸ್ತೆಗಳನ್ನು ಮಾಡಿಸುವುದಕ್ಕೆ 16ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ನಮ್ಮಲ್ಲಾದರೋ ಅಲ್ಲಿಂದ ಬರುವ ಹಣದಲ್ಲೂ ಸ್ವಲ್ಪ ಉಳಿತಾಯ ಮಾಡುತ್ತೀರಿ. ನನಗೂ ಮಿಕ್ಕ ಸಂಸ್ಥಾನಗಳವರಿಗೂ ಹೋಲಿಕೆ ಮಾಡಿದರೆ ನಾವೆಷ್ಟು ಕಡಿಮೆ ಖರ್ಚುಮಾಡುತ್ತಿದ್ದೇವೆಂಬುದು ವೇದ್ಯವಾಗುತ್ತದೆ.

ಭೂಕಂದಾಯವನ್ನು ನೋಡಿ. 1936-37 ರಲ್ಲಿ 130 ಲಕ್ಷ ರೂಪಾಯಿಗಳಿತ್ತು. ಇವತ್ತಿನದು 143 ಲಕ್ಷ ಮಾತ್ರ. ಇಷ್ಟೆಲ್ಲಾ ನೀರಾವರಿ ಏರ್ಪಾಡುಗಳು, ನಾನಾ ಅನುಕೂಲತೆಗಳನ್ನೆಲ್ಲಾ ಕೊಟ್ಟರೂ ಇಷ್ಟು ವರ್ಷಗಳ ಮೇಲಾದರೂ ಇಷ್ಟೇನೇ ಹೆಚ್ಚಿಗೆ ಉತ್ಪತ್ತಿ! ಇದರಿಂದ ಏನು ವ್ಯಕ್ತಪಡುತ್ತದೆಂದರೆ, ಜನರಿಗೆ ಜಮೀನು ಅಷ್ಟಾಗಿ ಲಾಭದಾಯಕವಾಗಿಲ್ಲವೆಂದು ತೋರಿದೆ. ಜನರು ಹೆಚ್ಚು ಹೆಚ್ಚಾಗಿ ಪಟ್ಟಣಗಳನ್ನು ಸೇರುತ್ತಿರುವುದಕ್ಕೆ ಇದೂ ಒಂದು ಕಾರಣ. ಈ ಕಾಲದಲ್ಲಿ ಹೆಚ್ಚಿಗೆ ಜಮೀನು ಸಾಗುವಳಿ ಮಾಡಿರುವುದೆಷ್ಟೆಂಬದನ್ನು ನೋಡಿದರೆ ಅದು ಕೇವಲ 17,000 ಎಕರೆ. ಇದರಿಂದ ಇನ್ನೆಂದಿಗೂ ನಮ್ಮ ಆಹಾರದ ಸಮಸ್ಯೆ ಪರಿಹಾರವಾಗಲಾರದೆಂದು ತೋರುತ್ತೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು ಹೇಳಿದ್ದು ಯಾವ ಕಾಲಾವಧಿಯಲ್ಲಿ?

ಶ್ರೀ ಬಿ. ಹುಚ್ಚೇಗೌಡರು.—ಹೋದ ವರ್ಷದಲ್ಲಿ.

ಇನ್ನು ವಿದ್ಯಾಭ್ಯಾಸದ ಖರ್ಚನ್ನು ನೋಡಿ. ಪೋಲೀಸ್ ಇಲಾಖೆಗೆ ಹಿಂದೆ 45-46 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದುದು ಈಗ 96 ಲಕ್ಷಕ್ಕೆ ಏರಿದೆ. ಇಷ್ಟು ಖರ್ಚು ಮಾಡಿದರೂ ಜನರಿಗೇನಾದರೂ ನೆಮ್ಮದಿಯುಂಟಾಗಿದೆಯೇ? ದೇಶದಲ್ಲಿ ದರೋಡೆ ಮುಂತಾದುವುಗಳು ನಡೆಯುತ್ತಲೇ ಇವೆ. ಆ ಇಲಾಖೆಯಲ್ಲಿಯೂ ಕೂಡ ದಕ್ಷತೆ ಹೆಚ್ಚಿಲ್ಲ ಖರ್ಚು ಮಾತ್ರ ಜಾಸ್ತಿಯಾಯಿತು ಅಷ್ಟೆ. ಹಾಗೆಯೇ ದೇಶದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿಗೆ ಖರ್ಚಾಗುತ್ತಿದ್ದರೂ ಅಲ್ಲೂ ದಕ್ಷತೆಯಿಲ್ಲ. ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ ಎಷ್ಟರಮಟ್ಟಿನ ಆಡಳಿತ ದಕ್ಷತೆ ಕಂಡುಬರುತ್ತಿದೆ ನೋಡಿ. ಯಾವುದನ್ನು ಎತ್ತಿದರೂ ನಾವು ಪಕ್ಕದ ಮದ್ರಾಸ್ ಬೊಂಬಾಯಿ ನೋಡುತ್ತೇವೆ. ಅದೇ ದಕ್ಷತೆಯಲ್ಲಿಯೂ ಹಾಗೇಕಿರಕೂಡದು? ಮದ್ರಾಸಿನವರು ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರಲಿಲ್ಲವೇ? ಬೊಂಬಾಯಿಯವರು ಮಾಡಿಲ್ಲವೇ? ಅವರಿಗೆ ಸಾಧ್ಯವಿರುವಾಗ ನಮ್ಮಗೇಕೆ ತೊಂದರೆ? ಹೋಗಲಿ, ಇದನ್ನಿಟ್ಟುಕೊಂಡು ಎಕ್ಸೈಜ್ ಬಾಬಿನಿಂದ, ಸೇಲ್ಸ್‌ಟ್ಯಾಕ್ಸಿನಿಂದ, ಫುಡ್ ಸಬ್ಸಿಡಿ ಮುಂತಾದುವುಗಳಿಂದ ಇಷ್ಟೆಲ್ಲಾ ಹಣ ಬಂದರೂ ಇಂಥಾ ಖೋತಾ ಬಡ್ಜೆಟ್ ಏಕೆ?

ಇನ್ನು ನಮ್ಮ assests ಮತ್ತು liabilities ನೋಡುವುದಾದರೆ ನಮಗೀಗ 16 ಕೋಟಿ ರೂಪಾಯಿಗಳ liabilities. ಅದಕ್ಕೆ ಅನುಗುಣವಾಗಿ ಗಟ್ಟಿಮುಟ್ಟಾದ assets ಏನಾದರೂ ಇವೆಯೇ? ಗಟ್ಟಿಮುಟ್ಟಾದ್ದೆಲ್ಲಾ ಹೊರಟು ಹೋಗಿ ಈಗ ಉಳಿದುಕೊಂಡಿರುವುದು ಅಷ್ಟೇನೂ ಹೆಚ್ಚಿಲ್ಲ. ಕ್ಯಾಪ್ಟಲ್ ಇನ್ವೆಸ್ಟ್ ಮಾಡಿರುವುದು 38 ಕೋಟಿ ರೂಪಾಯಿಗಳು ಮಾತ್ರ, ಹಿಂದೆ 68 ಕೋಟಿಯಷ್ಟಿತ್ತು. ಇದನ್ನೂ ಅವುಗಳ face value ಮೇಲೆ ತೆಗೆದುಕೊಳ್ಳುವ ಹಾಗಿಲ್ಲ. ಎಲ್ಲಾ inflation ರೀತಿಯಲ್ಲಿ ತೋರಿಸಿದ್ದೀರಿ ಅಷ್ಟೆ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವುದು?

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿ ಕೊಟ್ಟಿರುವ 38 ರೂಪಾಯಿಗಳ book value ತೆಗೆದುಕೊಳ್ಳಬೇಕೇ ಹೊರತು face value ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಭದ್ರಾವತಿ ಕಾರ್ಖಾನೆಗೆ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಾಗ್ಯೂ ಕೆಲವು ವರ್ಷಗಳ ಮೇಲೆ ಸುಮಾರು 78 ಲಕ್ಷ ಟ್ಯಾರಿಫ್ ಬೋರ್ಡಿನವರು ಬೆಲೆ ಕಟ್ಟಿದರು.

The Hon'ble Sri H. C. DASAPPA.—There is some utter confusion! ಭದ್ರಾವತಿಯೇ ಆಗಲಿ, ಯಾವುದೇ ಆಗಲಿ, book value ಗಿಂತಲೂ ಹೆಚ್ಚಿನ ಬೆಲೆ ಕಟ್ಟಬಹುದೇ ಹೊರತು ಕಡಿಮೆಯಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಎರಡು ವರ್ಷವಾದ ಮೇಲೆ ಇವುಗಳ ಬೆಲೆ ಇಳಿಯಿತೆಂದರೆ ಈಗ ನೀವು ಕಟ್ಟಿರುವ ಬೆಲೆ ಬರುವುದಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೆಲೆ ಇಳಿಯಿತು ಅಂದರೆ?

ಶ್ರೀ ಬಿ. ಹುಚ್ಚೇಗೌಡರು.—ಅಂದರೆ ಪುಸ್ತಕದಲ್ಲಿರುವ ಬೆಲೆಗಿಂತ ಆ ಉದ್ಯಮಗಳು ವಾಸ್ತವ ಬೆಲೆ ಕಡಿಮೆಯಾಗುತ್ತೆ.

ಆಮೇಲೆ ಮೈನರ್ ಇರಿಗೇಷನ್ ಕೆಲಸಗಳು, ಬಾವಿ ತೆಗೆಸುವುದು ಮುಂತಾದುವುಗಳಿಗೆ ಇಲ್ಲಿ ಸಾಕಷ್ಟು ಒದಗಿಸಿಲ್ಲ. ಇಷ್ಟೆಲ್ಲಾ ಮಾಡಿದರೂ, ಕೊನೆಯಲ್ಲಿ ಯಾವುದೊಂದು ಅಭಿವೃದ್ಧಿ ಇಲಾಖೆಯನ್ನು ತೆಗೆದುಕೊಂಡರೂ ಕೂಡ ಅದರಲ್ಲಿ ಪೂರ್ತಿಯಾಗಿ ಎಷ್ಟು ಕೆಲಸ ಮಾಡಬೇಕೋ ಅಷ್ಟು ಕೆಲಸಮಾಡಿಲ್ಲ, ಮತ್ತು ಕೊಟ್ಟಿರುವ ಗ್ರಾಂಟನ್ನೂ ಕೂಡ ಕಡಿಮೆ ಮಾಡುತ್ತಲೇ ಬಂದಿದ್ದೀರಿ. ಬಡ್ಜೆಟ್ಟಿನಲ್ಲಿ ಖರ್ಚಿಗೆ, ಅವಕಾಶ ಮಾಡುವುದರಲ್ಲಿ 4ಲಕ್ಷ ಕಡಿಮೆ ಮಾಡಿದ್ದೀರಿ. ಆಮೇಲೆ ರಿಜಿಸ್ಟ್ರೇಷನ್ ಇಲಾಖೆ ತೆಗೆದುಕೊಳ್ಳಿ. ಆ ಬಾಬಿನಲ್ಲಿ 12½% ಹೊಸ ಟ್ಯಾಕ್ಸ್ ಹಾಕಬೇಕೆಂದು ಹೇಳಿದ್ದೀರಿ ಮೊದಲು ಹಂಗಾಮಿಯಾಗಿ ಹಾಕಿದ್ದ 12½% ಸರ್ ಚಾರ್ಜನ್ನೇ ಇನ್ನೂ ಖಾಯಂ ಮಾಡದೆ ಇರುವಾಗ ಈ ಹೊಸ ತೆರಿಗೆ 12½% ಹಾಕಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ. ನಾವೆಲ್ಲರೂ ಆ ಸರ್‌ಚಾರ್ಜ್ ಇಂದೋ ನಾಳೆಯೋ ಹೋಗುತ್ತದೆಂದು ನಿರೀಕ್ಷಿಸುತ್ತಿರುವಾಗ ಈ ಹೊಸ ಟಾಕ್ಸ್ ಬೇರೆ ಬಂದಿದೆ.

ಇನ್ನು ಮೋಟಾರು ವಾಹನಗಳಿಗೆ ಸುಂಕ ಹಾಕಿದ್ದಾರೆ. ನಿಜವಾಗಿ ಇವಕ್ಕೆ ಈಗಾಗಲೇ ಸಾಕಾದಷ್ಟು ಹೊರೆಯಿಲ್ಲವೆ ಎಂಬುದನ್ನು ಯೋಚನೆ ಮಾಡಬೇಕು.

(ಶ್ರೀ ಬಿ. ಹುಚ್ಚೇಗೌಡರು)

ಆಮೇಲೆ ಆ ಬಿಲ್ಲಿನ ಮೇಲೆ ಇದರ ವಿಚಾರ ಬಂದಾಗ ಮಾತನಾಡುತ್ತೇನೆ.

ಮುಖ್ಯವಾಗಿ ನಮ್ಮ ದೇಶದಲ್ಲಿ ನೀರಾವರಿ ಉದ್ಯಮಗಳು ನಡೆಯಬೇಕು. ಈಗ ನುಗು ತುಂಗ ಮತ್ತು ಲಕ್ಕವಳ್ಳಿ ಇವೆ. ಹೋದ ವರ್ಷ ಇವಕ್ಕೆ 49½ ಲಕ್ಷ ರೂಪಾಯಿ ಕೊಟ್ಟಿದ್ದರು, ಖರ್ಚು ಅದದ್ದು 31 ಲಕ್ಷ ರೂಪಾಯಿ ಮಾತ್ರ, ಇದಕ್ಕೆ ಇನ್ನೊಬ್ಬರು ಚೀಫ್ ಇಂಜಿನಿಯರು ಬೇಕೆ? 31 ಲಕ್ಷ ರೂಪಾಯಿ ಖರ್ಚು ಮಾಡಲು ಒಬ್ಬರು ಹೊಸ ಚೀಫ್ ಇಂಜಿನಿಯರು ಏಕೆ? ಮುಂದಿನ ವರ್ಷಕ್ಕೆ ಈ ಕೆಲಸಗಳಿಗೆ 59 ಲಕ್ಷ ರೂಪಾಯಿ ಒದಗಿಸಿದ್ದಾರೆ. ಲಕ್ಕವಳ್ಳಿಗೆ 15 ಲಕ್ಷ ಕೊಟ್ಟಿದ್ದಾರೆ. ಇದನ್ನು ಲೆಕ್ಕ ಹಾಕಿದರೆ ಹೀಗೆಯೇ ಕೊಟ್ಟರೆ ಇದನ್ನು ಇನ್ನು 150 ವರ್ಷಗಳಲ್ಲಿ ಮುಗಿಸಬಹುದು. ಮೈಸೂರು ದೇಶದಲ್ಲಲ್ಲದೆ ಇನ್ನೆಲ್ಲಾದರೂ ಇಂತಹ ಯೋಜನೆಯನ್ನು ಹಾಕಿರುತ್ತಾರೆಯೆ? ಒಂದು ಕೆಲಸ ಪ್ರಾರಂಭಿಸಿ ಅದನ್ನು 150 ವರ್ಷಗಳಲ್ಲಿ ಮುಗಿಸುವುದೆಂದರೆ ಎಂತಹ ವಿಚಿತ್ರ! ಯಾವಾಗ ಒಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರನ್ನು ಕೊಡುತ್ತೀರೋ ಆಗ ಒಂದು ಕೋಟಿ ರೂಪಾಯಿ ಆದರೂ ಖರ್ಚು ಮಾಡಬೇಕು. ಐದಾರು ಕೋಟಿ ರೂಪಾಯಿ ಕೆಲಸವಿದ್ದರೆ ಅಲ್ಲಿಗೆ ಒಬ್ಬ ಚೀಫ್ ಇಂಜಿನಿಯರನ್ನು ಕೊಡಬಹುದು.

ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮೂರು ಲಕ್ಷ ರೂಪಾಯಿ ಗ್ರಾಂಟು ಕೊಟ್ಟಿದ್ದಾರೆ. ಅವರಿಗೆ ಎಕ್ಸೈಜು ಸುಂಕಗಳಿಂದ ನಷ್ಟವಾಗಿರುವುದನ್ನು ಇದರಿಂದ ಸರಿತೂಗಿಸಲು ಸಾಧ್ಯವೆ? ಸರ್ಕಾರಕ್ಕೆ ಈಗಲು ಎಕ್ಸೈಜು ವರಮಾನ ಬರುತ್ತಿದೆ, ಸೆಸ್ ಕೂಡ ಬರುತ್ತಿದೆ. ಹೀಗಿರುವಾಗ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಆಗಿರುವ ನಷ್ಟವನ್ನು ಭರ್ತಿ ಮಾಡಲು ಏನು ಮಾಡಿದ್ದಾರೆ? ಏನೂ ಮಾಡಿಲ್ಲ. ವೃತ್ತಿ ಶಿಕ್ಷಣಕ್ಕೆ 18.55 ಲಕ್ಷ ರೂಪಾಯಿ ಒದಗಿಸಿದ್ದಾರೆ. ಯಾರು ಹೆಚ್ಚು ಒತ್ತಾಯ ಮಾಡುತ್ತಾರೊ ಅವರಿಗೆ ಹೆಚ್ಚು ಹಣ ಒದಗಿಸುತ್ತಾರೆ. ರಸ್ತೆಗಳಿಗೆ ಗ್ರಾಂಟು ಕೊಡಬೇಕಾದರೆ 24 A Communications ನಲ್ಲಿ ಹೊಸ ರಸ್ತೆಗಳನ್ನು ಮಾಡಲು ಬೆಂಗಳೂರು ಜಿಲ್ಲೆಗೆ 1,84,500 ರೂಪಾಯಿ, ಮೈಸೂರು ಜಿಲ್ಲೆಗೆ 2,17,500 ರೂಪಾಯಿ, ತುಮಕೂರು ಜಿಲ್ಲೆಗೆ 4,000 ರೂಪಾಯಿ ಚಿತ್ರದುರ್ಗಕ್ಕೆ 2,000 ರೂಪಾಯಿ ಹೀಗೆ ಕೊಟ್ಟಿದ್ದಾರೆ. ಹೊಸ ಸೇತುವೆಗಳಿಗೆ ಬೆಂಗಳೂರು ಜಿಲ್ಲೆಗೆ 6,54,500 ಮೈಸೂರಿಗೆ 5,59,000 ತುಮಕೂರು ಜಿಲ್ಲೆಗೆ 12,000, ಚಿತ್ರದುರ್ಗಕ್ಕೆ 12,000 ಕೊಟ್ಟಿದ್ದಾರೆ. Asphaltingಗೆ ಬೆಂಗಳೂರು ಜಿಲ್ಲೆಗೆ 3,06,5,000, ಮೈಸೂರು ಜಿಲ್ಲೆಗೆ 32,3,000, ತುಮಕೂರು ಜಿಲ್ಲೆಗೆ 91,000, ಚಿತ್ರದುರ್ಗಕ್ಕೆ 50,000 ರೂಪಾಯಿ ಕೊಟ್ಟಿದ್ದಾರೆ. ಸೇತುವೆಗಳನ್ನು ಕಟ್ಟಲು ಹಾಸನ ಜಿಲ್ಲೆಯಲ್ಲಿ 12 ಸೇತುವೆಗಳಿಗೆ 5 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ತುಮಕೂರು ಜಿಲ್ಲೆಗೆ ಎರಡು ಸೇತುವೆಗಳಿಗೆ 2 ಲಕ್ಷದ 39 ಸಾವಿರ ರೂಪಾಯಿ ಮಂಜೂರು ಮಾಡಿ ಕೇವಲ 40,000 ರೂಪಾಯಿ ಒದಗಿಸಿದ್ದಾರೆ. ಮೈಸೂರು ಜಿಲ್ಲೆಗೆ 10 ಸೇತುವೆಗಳಿಗೆ 16 ಲಕ್ಷ ರೂಪಾಯಿ ಮಂಜೂರು ಮಾಡಿ ಎರಡು ಲಕ್ಷ ರೂಪಾಯಿ ಒದಗಿಸಿದ್ದಾರೆ ಆದರೆ ತುಮಕೂರು ಜಿಲ್ಲೆಗೆ ಎರಡು ಸೇತುವೆಗಳಿಗೆ 12 ಸಾವಿರ ಒದಗಿಸಿದ್ದಾರೆ.

ಇನ್ನು ರಸ್ತೆಗಳನ್ನು ತೆಗೆದುಕೊಂಡರೆ, ತುಮಕೂರು ಜಿಲ್ಲೆಗೆ ಕೊಟ್ಟಿರುವುದು 16,000 ರೂಪಾಯಿ, ಬೆಂಗಳೂರು ಜಿಲ್ಲೆಗೆ 4,27,000 ರೂಪಾಯಿ, ಶಿವಮೊಗ್ಗಕ್ಕೆ 3 ಲಕ್ಷ, ಚಿತ್ರದುರ್ಗಕ್ಕೆ 1,74,000 ರೂಪಾಯಿ. ಹೀಗೆ ಎಲ್ಲ ಕಡೆಗು ಒಂದು ಸಮಭಾವ ಸರ್ಕಾರದವರಿಗಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನದಿಗಳು ಇಲ್ಲದೇಯಿರುವ ಕಡೆಯೂ ಸೇತುವೆಗಳನ್ನು ಕಟ್ಟಬೇಕೆಂಬ ಉದ್ದೇಶವೆ ಮಾನ್ಯ ಸದಸ್ಯರದು ?

ಶ್ರೀ ಬಿ. ಹುಚ್ಚೇಗೌಡರು.—ಎಲ್ಲದಕ್ಕೂ 'ತತ್ವ' ಎಂದು ಹೇಳುತ್ತಾರೆ. ಬೆಂಗಳೂರು ಮೈಸೂರು ಜಿಲ್ಲೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೂ ಹೊಸ ಸೇತುವೆಗಳನ್ನು ಕಟ್ಟುವುದಕ್ಕೂ ಹೆಚ್ಚು ಹಣ ಕೊಟ್ಟಿದ್ದಾರೆ, ಮಿಕ್ಕಕಡೆ ಕಡಿಮೆ ಕೊಟ್ಟಿದ್ದಾರೆ. ಇದರಲ್ಲಿ ಏನು ತತ್ವವಿದೆ? ಮುಖ್ಯವಾಗಿ ದೇಶದಲ್ಲಿ ಸ್ವಾತಂತ್ರ್ಯ ಬರಲೆಂದು ಜನರು ಬಾಯಿ ಬಾಯಿ ಬಿಡುತ್ತಿದ್ದರು, ಬಂತು, ಆದರೆ ಪ್ರಯೋಜನ ಮಾತ್ರ ಜನಸಾಮಾನ್ಯರಿಗಾಗಲಿಲ್ಲ. ಯಾರು ಮುಂದುವರಿದಿದ್ದಾರೋ ಅವರ ದೃಷ್ಟಿಯಿಂದ ಈ ಬಡ್ಜೆಟ್ಟು ತಯಾರಾಗಿದೆಯೇ ಹೊರತು ಹಿಂದುಳಿದವರ ಹಿತದೃಷ್ಟಿಯಿಂದ ತಯಾರಾಗಿಲ್ಲ. ಅಜ್ಞಾನ ಅವಿದ್ಯೆಯಲ್ಲಿರುವವರಿಗೆ ಪ್ರಯೋಜನವಿಲ್ಲ. ವೈದ್ಯ ಸಹಾಯವಿಲ್ಲದಿರುವವರಿಗೆ ಹೆಚ್ಚಿನ ಸಹಾಯ ಕಲ್ಪಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಕೆಲವು ಕಡೆ 30 ಮೈಲಿಗೆ ಒಂದು ಆಸ್ಪತ್ರೆ ಇದೆ, ಕೆಲವು ಕಡೆ 4 ಮೈಲಿಗೆ ಒಂದೊಂದಿದೆ. ಯಾವ ಯಾವ ಕಡೆ ಕಡಿಮೆ ಇದೆಯೋ ಅಲ್ಲಿಗೆ ಕೊಡಬೇಕೆಂದು ಯೋಚನೆ ಮಾಡಿದ್ದಾರೆಯೆ? ಯಾರು ಭೂಕಂದಾಯ ಕೊಡುತ್ತಾನೋ ಅವನಿಗೆ ಮೆಡಿಕಲ್ ಸೆಸ್ ಹಾಕುವುದು. ಆದರೆ ಅಲ್ಲಿಗೆ 30 ಮೈಲಿಗೆ ಒಂದು ಆಸ್ಪತ್ರೆಯೂ ಇಲ್ಲ. ಸಾಮಾನ್ಯ ಜನರ ಸ್ಥಿತಿಯನ್ನು ಉತ್ತಮ ಮಾಡಬೇಕೆಂದರೆ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಡಿಸ್ಟ್ರಿಕ್ಟ್ ಬೋರ್ಡುಗಳವರು 14 ಹೈಸ್ಕೂಲುಗಳನ್ನು ಸ್ಥಾಪಿಸಿದ್ದಾರೆ, ಅವುಗಳನ್ನು ರೆಕಗ್ನೈಜ್ ಮಾಡಿದ್ದೀರಾ ಅವುಗಳಿಗೆ ಗ್ರಾಂಟು ಕೊಟ್ಟಿದ್ದೀರಾ ಎಂದು ಕೇಳುತ್ತೇನೆ. ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಹೆಚ್ಚು ಮಾಡಬೇಕೆಂಬ ನೀತಿಯನ್ನು ಸರ್ಕಾರ ಅನುಸರಿಸುತ್ತಿಲ್ಲ. ಬೆಂಗಳೂರಿನಲ್ಲಿ ಇನ್ನೂ ಹೊಸ ಹೈಸ್ಕೂಲುಗಳು ಗರ್ಲ್ಸ್ ಸ್ಕೂಲುಗಳೂ ಪ್ರಾರಂಭವಾಗುತ್ತಿವೆಯೇ ಹೊರತು ಗ್ರಾಮಾಂತರಗಳಲ್ಲಿ ಆಗುತ್ತಿಲ್ಲ. ಹೆಚ್ಚು ಅಂಕಿಅಂಶಗಳನ್ನು ಹೇಳುವುದಕ್ಕೆ ಈಗ ಕಾಲವಿಲ್ಲ. ಕತ್ತರಿ ನಿರ್ಣಯ ಚರ್ಚೆಗೆ ಬಂದಾಗ ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ನಮ್ಮ ಕಾಂಗ್ರೆಸ್ ಸರ್ಕಾರದವರು ದೇಶದ ಆಡಳಿತವನ್ನು ವಹಿಸಿಕೊಂಡಾಗ ದೇಶದಲ್ಲಿ ಅನೇಕ ತೊಂದರೆಗಳಿದ್ದವು. ಸ್ವಾತಂತ್ರ್ಯ ಬಂದು ಪ್ರಜಾ ಸರ್ಕಾರ ಬಂದ ಮೇಲೆ ಧಾರಣೆಗಳು ಇಳಿದು ಜನಜೀವನದ ಪರಿಸ್ಥಿತಿ ಉತ್ತಮವಾಗಬಹುದೆಂದು ನಿರೀಕ್ಷಣೆಯಿತ್ತು. ಇದೇ ರೀತಿ ಆಹಾರಾಭಾವವೂ ಕಡಿಮೆಯಾಗಿ ಬಡಬಗ್ಗರ ಸ್ಥಿತಿಗತಿಗಳು ಉತ್ತಮವಾಗಬಹುದೆಂಬ ಆಸೆಯಿತ್ತು. ಆದರೆ ಹಣದ ಉಬ್ಬರ ನಮ್ಮ ದೌರ್ಭಾಗ್ಯದಿಂದ ದಿನೇ ದಿನೇ ಹೆಚ್ಚುತ್ತಿದೆ. ಆಹಾರಾಭಾವ, ಒಂದು ದೃಷ್ಟಿಯಿಂದ ನೋಡಿದರೆ ಉತ್ಕಟಾವಸ್ಥೆಯನ್ನು ಹೊಂದಿದೆ; ಈ ಆಹಾರಾಭಾವದ ವಿಚಾರವಾಗಿ ಅಧಿವೇಶನ ಪ್ರಾರಂಭವಾದಲಾಗಾಯಿತು ಇದುವರೆಗೆ ಅನೇಕರು ಭಾಷಣಗಳನ್ನು ಮಾಡಿದ್ದಾರೆ. ಭಾಷಣಗಳಿಂದ ಮಳೆ ಬೆಳೆಗಳಾಗುವುದಿಲ್ಲವೆಂಬುದನ್ನು ನಾನು ಅರಿತಿದ್ದೇನೆ. ಆದರೂ ಆಹಾರದ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಸೂಕ್ಷ್ಮ

ವಾಗಿ ಹೇಳಲಚ್ಛಿಸುತ್ತೇನೆ. ಎಲ್ಲಿಯವರೆಗೆ ಆಹಾರ ದವಸಗಳ ಮೇಲೆ ಹತೋಟಿ ಇರುತ್ತದೆಯೋ, ಎಲ್ಲಿಯವರೆಗೆ ಹಳ್ಳಿಯ ಜನರಿಗೆ ಪಟ್ಟಣಗಳ ಮೇಲೆ ವ್ಯಾಮೋಹವಿರುತ್ತದೆಯೋ, ಎಲ್ಲಿಯವರೆಗೆ ಈಗಿರತಕ್ಕ ವಿದ್ಯಾಭ್ಯಾಸ ಕ್ರಮವು ಜಾರಿಯಲ್ಲಿರುತ್ತದೆಯೋ ಅಲ್ಲಿಯವರೆಗೂ ಆಹಾರ ಪರಿಸ್ಥಿತಿ ಉತ್ತಮವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರನೇಕರು ಹೆಚ್ಚು ಬೆಳೆ ಬೆಳೆಯುವ ಯೋಜನೆಯಿಂದ ಏನೂ ಪ್ರಯೋಜನವಾಗಿಲ್ಲವೆಂದು ಹೇಳಿದರು ; ಏನೂ ಪ್ರಯೋಜನವಾಗಿಲ್ಲವೆಂಬುದನ್ನು ನಾನು ಒಪ್ಪುವುದಿಲ್ಲ. ಸ್ವಲ್ಪ ಪ್ರಯೋಜನವಾಗಿದೆ. ಆದರೆ ಈ ಯೋಜನೆಯಿಂದ ಈ ಆಹಾರ ಸಮಸ್ಯೆಯನ್ನು ಬಗೆಹರಿಸಲಾಗಿದೆ ಎಂದರೆ ಅದನ್ನೂ ಒಪ್ಪುವುದಕ್ಕಾಗುವುದಿಲ್ಲ. ಹಳ್ಳಿಯ ಜನರು ತಾವು ಪಟ್ಟಣಗಳಿಗೆ ವಲಸೆ ಹೋಗಿ ಅಲ್ಲಿ ಆಕರ್ಷಣೀಯವಾದ ವಾತಾವರಣದಲ್ಲಿ ಜೀವನ ನಡೆಸಲು ನೆಲಸಬೇಕೆಂಬ ಹಂಬಲವಿದೆ. ಅಲ್ಲದೆ ವಿದ್ಯಾವಂತರಾದವರು ಯಾರೂ ಹಳ್ಳಿಗಳಲ್ಲಿ ನೆಲಸಿ ವ್ಯವಸಾಯದಲ್ಲಿ ನಿರತರಾಗಲು ಸಿದ್ಧರಾಗಿಲ್ಲ. ಈ ದಿವಸ ನಮ್ಮ ಸಂಸ್ಥಾನದಲ್ಲಿ 50 ಸಾವಿರ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೈಸ್ಕೂಲುಗಳಲ್ಲಿ ಓದುತ್ತಿದ್ದಾರೆ, ಸುಮಾರು 12 ಸಾವಿರ ಜನರು ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಅವರ ವಿದ್ಯಾಭ್ಯಾಸ ಮುಗಿದಮೇಲೆ ಅವರೆಲ್ಲರೂ ವ್ಯವಸಾಯದಲ್ಲಿ ನಿರತರಾಗುವುದಿಲ್ಲ ಸರ್ಕಾರಿ ನೌಕರಿ, ಅದು ಸಿಕ್ಕದಿದ್ದರೆ ಯಾವುದಾದರೂ ಪಟ್ಟಣಗಳಲ್ಲಿ ಖಾಸಗಿ ವ್ಯಾಪಾರ ಸಂಸ್ಥೆಗಳೋ ಹೋಟೆಲುಗಳೋ ಬಸ್ಸು ಸರ್ವಿಸುಗಳೋ ವೃತ್ತಪತ್ರಿಕಾ ಏಜೆಂಟರಾಗಿಯೂ ಹೋಗಿ ಕೆಲಸ ಮಾಡುತ್ತಾರೆ. ವಿದ್ಯಾಭ್ಯಾಸದ ವಿಚಾರದಲ್ಲಿ ಸರ್ಕಾರದವರೂ ಸಾರ್ವಜನಿಕರೂ ತಮ್ಮ ಮುಂದಿನ ನೀತಿಯೇನೆಂಬುದನ್ನು ನಿರ್ಧರಿಸುವ ಕಾಲ ಸನ್ನಿಹಿತವಾಗಿದೆ. ಹಾಗೆ ಮಾಡದೆ ಈಗಿರುವ ಒಂದು ಅಂಥ ನೀತಿಯನ್ನೇ ಅನುಸರಿಸುತ್ತ ಹೋದರೆ ದೇಶಕ್ಕೆ ಇದರಿಂದ ಸತ್ಪರಿಣಾಮವಾಗುವುದಕ್ಕೆ ಬದಲು ದುಷ್ಪರಿಣಾಮವಾಗುವಂತೆ ಕಾಣುತ್ತದೆ. ದೇಶದ ಆರ್ಥಿಕ ಸಾಮಾಜಿಕ ಸಮಸ್ಯೆಗಳು ಪರಿಹಾರವಾಗುವುದಕ್ಕೆ ಬದಲು ಇಂದು ಹೊಸ ಹೊಸ ಸಮಸ್ಯೆಗಳು ಉದ್ಭವವಾಗುತ್ತಿವೆ. ಸಾಂಸ್ಕೃತಿಕ ದೃಷ್ಟಿಯಿಂದ ನೋಡುವುದಾದರೆ ಈಗಿನ ವಿದ್ಯಾವಂತರು ಹಳ್ಳಿಯ ಜನರಿಗಿಂತ ಯಾವ ರೀತಿಯಲ್ಲಿಯೂ ಉತ್ತಮವಾಗಿಲ್ಲ. ಆರ್ಥಿಕ ದೃಷ್ಟಿಯಿಂದಲೂ ಹಾಗೆಯೇ ಇದ್ದಾರೆ. ಇದೆಲ್ಲವೂ ಉತ್ತಮಗೊಳ್ಳಲು ಮುಖ್ಯವಾಗಿ ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಅತಿ ಜಾಗ್ರತೆ ಮಾರ್ಪಡಿಸಬೇಕು. ಹಾಗೆ ಮಾಡದಿದ್ದರೆ ಕೇವಲ ಅಲ್ಪಕಾಲದಲ್ಲಿಯೇ ಸಮಾಜದಲ್ಲಿ ಒಂದು ಅಂದೋಳನವೇ ನಡೆಯಬಹುದು. ನಿರುದ್ಯೋಗಿಗಳಾದ ವಿದ್ಯಾವಂತರು ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ, ಪಂಡಿತ ಜವಹಾರ್‌ಲಾಲ್‌ರವರೂ ಅಪ್ಪಣೆ ಕೊಟ್ಟಿರುವ ಹಾಗೆ ಇತರ ಕಡೆಗಳಂತೆ ನಮ್ಮ ದೇಶದಲ್ಲಿ ಕಮ್ಯುನಿಜಂ ತತ್ವವನ್ನು ಜನರು ಅರ್ಥಮಾಡಿಕೊಂಡಿಲ್ಲ. ಕಮ್ಯುನಿಜಂ ಎಂದರೆ ದೇಶದಲ್ಲಿ ಅಲ್ಲೋಲಕಲ್ಲೋಲವನ್ನುಂಟುಮಾಡುವುದು, ಆಸ್ತಿಪಾಸ್ತಿಗಳನ್ನು ಹಾಳುಮಾಡುವುದು ಮುಂತಾದವು ಆ ಭಯವೇನೂ ಇಲ್ಲದಿದ್ದರೂ ಸಮಾಜದಲ್ಲಿ ಬೇರೆ ಸಮಸ್ಯೆಗಳು ಹುಟ್ಟುತ್ತವೆ.

ಆಹಾರ ಹೆಚ್ಚು ಬೆಳೆಯುವ ಯೋಜನೆಯ ವಿಚಾರದಲ್ಲಿ ಒಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ. ಸ್ವಾಮಿ, ಈಗ ನಾನಿನ್ನು ದರಖಾಸ್ತು ಅರ್ಜಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಸಂಬಂಧವಾಗಿ ನಡೆಯುತ್ತಿರುವ ಭೂಮಿ ಹಂಚಿಕೆಯು ಸಮರ್ಪಕವಾಗಿಲ್ಲ. ಈಗ ದರಖಾಸ್ತಿನ ಮೂಲಕ ವಿಲೇವಾರಿಯಾಗುತ್ತಿರುವ ಜಮೀನುಗಳೆಲ್ಲವೂ ದೊಡ್ಡ ದೊಡ್ಡ ಜಮೀನ್ದಾರರುಗಳ ಕೈ ಸೇರುತ್ತದೆ. ಗ್ರಾಮದಲ್ಲಿ ಭೂಮಿಕಾಣಿಗಳಿಲ್ಲದ ವ್ಯವಸಾಯಗಾರನಿಗೆ ಜಮೀನು ಸರಾಗವಾಗಿ ದೊರೆಯುತ್ತಿಲ್ಲ. ದರಖಾಸ್ತುಗಳ ವಿಲೇವಾರಿಯು ಬಹಳ ನಿಧಾನವಾಗಿ ಆಗುತ್ತಿದೆ. ಈ ಬಗ್ಗೆ ಎಷ್ಟು ಪ್ರಯತ್ನಗಳನ್ನು ಮಾಡಿದಾಗ್ಯೂ ಜಮೀನಿಲ್ಲದ ರೈತನಿಗೆ ಜಮೀನು ದೊರೆಯದಂತೆ ಮಾಡತಕ್ಕ ಕೆಲವು ಬಲಶಾಲಿಗಳಾದ ಜನರು ಗ್ರಾಮಾಂತರಗಳಲ್ಲಿರುತ್ತಾರೆ. ಈ ದರಖಾಸ್ತು ಅರ್ಜಿಗಳು ಎಷ್ಟು ಬೇಗ ಇತ್ಯರ್ಥವಾದರೆ ಅಷ್ಟು ಜಾಗ್ರತೆ ದೇಶಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ದರಖಾಸ್ತು ಮೂಲಕ ಜಮೀನುಗಳನ್ನು ವಿಲೇವಾರಿ ಮಾಡತಕ್ಕ ವಿಚಾರವಾಗಿ ತಮಗೆ ನಾನೊಂದು ಸಲಹೆ ನೀಡಬೇಕೆಂದಿದ್ದೇನೆ. ಆಯಾಯ ತಾಲ್ಲೂಕು ಅಮಲ್ದಾರರ ಅಧ್ಯಕ್ಷತೆಯಲ್ಲಿ ಆ ತಾಲ್ಲೂಕಿನ ಕೆಲವು ಪ್ರಮುಖ ವ್ಯಕ್ತಿಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕಮಾಡಿ, ಆ ಸಮಿತಿಯವರು ಕೊಡತಕ್ಕ ತೀರ್ಮಾನವೇ ಅಖೈರು ತೀರ್ಮಾನವೆಂದು ತಾವು ಆಜ್ಞೆ ಹೊರಡಿಸಿದರೆ ಆಗ ಇದು ಸರಿ ಹೋಗಬಹುದು. ಮೊನ್ನೆ ತಾನೇ ಇದೇ ಸಭೆಯ ಮುಂದೆ ಭಿಕ್ಷುಕರ ಸಂಬಂಧವಾದ ಒಂದು ಪ್ರಶ್ನೆ ಚರ್ಚೆಗೆ ಬಂದಿತ್ತು ಮತ್ತು ಈ ಆಹಾರಾಭಾವನನ್ನು ನೀಗಬೇಕೆಂದು ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದ ಕಾಲದಲ್ಲಿ ಈಗ ಜನರಲ್ಲಿ ಒಂದು ಸೋಮಾರಿತನ ಬಂದು ಹೋಗಿ ಇವುಗಳಿಗೆಲ್ಲಾ ಕಾರಣವಾಗಿರುತ್ತೆಂದು ತಿಳಿಸಿದ್ದಾರೆ. ಹೀಗಾಗಿ ಈಗ ದುಡಿಯತಕ್ಕವರ ಸಂಖ್ಯೆ ಕಮ್ಮಿಯಾಗಿದೆ; ಇಲ್ಲವೇ ದುಡಿಯಲಾರದವರ ಸಂಖ್ಯೆ ಜಾಸ್ತಿ ಆಗಿದೆ. ಸ್ವಲ್ಪ ದಿನಗಳ ಹಿಂದೆ ವಿದ್ಯಾರ್ಥಿಗಳ ಚರ್ಚಾ ಕೂಟ ನಡೆಯುತ್ತಿದ್ದಂಥ ಒಂದು ಸ್ಥಳಕ್ಕೆ ನಾನು ಹೋಗಿದ್ದಾಗ್ಯೆ ಆಗ ಒಬ್ಬ ವಿದ್ಯಾರ್ಥಿಯು ಮಾತನಾಡುತ್ತಾ ಇಂದು ದೇಶದಲ್ಲಿರತಕ್ಕ ಬಡವರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾನೆ. ಆ ವಿದ್ಯಾರ್ಥಿಯು ಹೇಳಿದುದೇನೆಂದರೆ ಈಗ ದೇಶದಲ್ಲಿರತಕ್ಕ ಬಡವರನ್ನೆಲ್ಲಾ ಎರಡು ಪಂಗಡಗಳಾಗಿ ವಿಂಗಡಿಸಬಹುದು. ಕಷ್ಟಪಟ್ಟು ಕೆಲಸ ಮಾಡಿ ತಮ್ಮ ಜೀವನೋಪಾಯವನ್ನು ನಡೆಸಿಕೊಳ್ಳುತ್ತಿರುವವರು ಮೊದಲನೆಯ ಪಂಗಡಕ್ಕೆ ಸೇರಿದವರೆಂದೂ ಮತ್ತೊಂದು ಪಂಗಡಕ್ಕೆ ಸೇರಿರತಕ್ಕ ಬಡವರು ಯಾವ ಕೆಲಸವನ್ನು ಮಾಡದೆ ಸೋಮಾರಿಗಳಾಗಿ, ಬೀದಿ ಬೀದಿಗಳಲ್ಲಿ ಕತ್ತೆಗಳಂತೆ ಅಲೆಯುತಕ್ಕವರು ಎಂದು ಬಹಳ ಚೆನ್ನಾಗಿ ಹೇಳಿದ್ದಾನೆ. ಇಂದು ಅದೇ ರೀತಿ ಆ ಸೋಮಾರಿಗಳ ಸಂಖ್ಯೆ ದಿನೇ ದಿನೇ ಏರುತ್ತಿದೆ. ಹೀಗೆ ಸೋಮಾರಿಗಳಾಗಿ ಬೀದಿಗಳಲ್ಲಿ ಕೆಲಸವಿಲ್ಲದೆ ಅಲೆದಾಡತಕ್ಕ ಜನಗಳನ್ನು ಮತ್ತು ಭಿಕ್ಷುಕರುಗಳನ್ನು ಹಿಡಿದು, ಅವರಿಗಾಗಿ ಒಂದು ವ್ಯವಸಾಯ ಕ್ಷೇತ್ರವನ್ನು ಮಾಡಿ ಇವರುಗಳಿಂದ ಬಲಾತ್ಕಾರವಾಗಿ ಕೆಲಸ ತೆಗೆದುಕೊಳ್ಳುವಂತೆ ಮಾಡಬೇಕೆಂದು ನಾನೀ ಸಂದರ್ಭದಲ್ಲಿ ಸೂಚಿಸುತ್ತೇನೆ.

ಇನ್ನು ದೇಶದಲ್ಲಿ ಈ ದಿವಸ ಆಹಾರದ ಅಭಾವವು ಎಷ್ಟರಮಟ್ಟಿಗಿದೆಯೋ ಬಟ್ಟೆಯ ಅಭಾವವೂ ಅಷ್ಟೇ ಮಟ್ಟಿಗಿದೆ. ಅಥವಾ ಅದಕ್ಕಿಂತಲೂ ಜಾಸ್ತಿಯಾಗಿದೆಯೆಂದು ಹೇಳಿದರೂ ಹೇಳಬಹುದು. ದೊಡ್ಡ ಅಂಗಡಿಗಳ ಮೊದಲುಗೊಂಡು ಸಣ್ಣ ಪುಟ್ಟ ಅಂಗಡಿಗಳವರೆಲ್ಲರೂ ಬಟ್ಟೆಯೇ ಇಲ್ಲವೆಂದು ಹೇಳುತ್ತಿದ್ದಾರೆ. ಹೀಗಾಗಿ ಈಗ ಜನರಿಗೆ ಅತ್ಯವಶ್ಯಕವಾಗಿ ಬೇಕಾದ ಬಾರಾವರ್ಗೆ ಪಂಚೆಗಳು ಕೂಡ ಸಿಕ್ಕದಂತಾಗಿದೆ: ಇದಕ್ಕೆ ಕಾರಣ ಕೇಂದ್ರ ಸರ್ಕಾರದವರು ನಮ್ಮ ದೇಶದ

(ಶ್ರೀ ಕಡಿದಾಳ್ ಮಂಜಪ್ಪನವರು).

ಜವಳಿಯನ್ನು ಪರದೇಶಕ್ಕೆ ಕಳುಹಿಸಿಕೊಡಲು ಅವಕಾಶ ಕೊಟ್ಟದ್ದರಿಂದ ಇಂದು ದೇಶದಲ್ಲಿ ಬಟ್ಟೆಗೆ ಅಭಾವ ಉಂಟಾಗಲು ಕಾರಣವಾಗಿರುತ್ತೆ. ಆದುದರಿಂದ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ಈ ವಿಷಯವನ್ನು ಪ್ರಸ್ತಾಪ ಮಾಡಿ ಬೇಗ ಅನುಕೂಲಪಡಿಸಬೇಕೆಂದು ಹೇಳುತ್ತೇನೆ.

ಈಗ ಸಭೆಯ ಮುಂದೆ ಮಂಡಿಸಲಾಗಿರತಕ್ಕ ಆಯವ್ಯಯ ಪಟ್ಟಿಯಲ್ಲಿ ಗ್ರಾಮಾಭಿವೃದ್ಧಿಯ ಬಗ್ಗೆ ಮೀಸಲಾಗಿಟ್ಟಿರತಕ್ಕದ್ದು 54 ಲಕ್ಷದ 69 ಸಾವಿರ ರೂಪಾಯಿಗಳು. ಈ ಪೈಕಿ ಶಿಬ್ಬಂದಿ ವೆಚ್ಚದ ಬಗ್ಗೆ 10 ಲಕ್ಷ ರೂಪಾಯಿಗಳು ಹೋಗುತ್ತ ಇನ್ನುಳಿಯುವುದರಲ್ಲಿ ಪ್ರಾವಿಡೆಂಟ್ ಫಂಡ್ ಇತ್ಯಾದಿಗಳಿಗೆ ಬೇರೆ ಹಣವನ್ನು ಒದಗಿಸಲಾಗಿದೆ. ಹೀಗಾಗಿ ಈ ಮೊಬಲಗು ಈ ಕಾರ್ಯಕ್ಕೆ ಏನೇನೂ ಸಾಲದೆಂದು ತಿಳಿಸಬೇಕಾಗಿದೆ. ಈಗಾಗಲೆ ಮಾತನಾಡಿದ ಅನೇಕ ಮಾನ್ಯ ಸದಸ್ಯರು ರಸ್ತೆಗಳ ಸ್ಥಿತಿಗತಿ ಅಷ್ಟು ಚೆನ್ನಾಗಿರುವುದಿಲ್ಲವೆಂದು ಹೇಳಿದ್ದಾರೆ. ಆದ ಪ್ರಯುಕ್ತ ಇದನ್ನು ಕನಿಷ್ಟಪಕ್ಷ 75 ಲಕ್ಷಕ್ಕಾದರೂ ಹೆಚ್ಚಿಸಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಮಾತನಾಡುತ್ತ ಶ್ರೀ ಬಿ. ಹುಚ್ಚೇಗೌಡರು ಈಗ ಇದಕ್ಕೆ ಮೀಸಲಾಗಿಟ್ಟಿರತಕ್ಕ ಹಣ ಏನೇನೂ ಸಾಲದೆಂದು ಹೇಳುತ್ತ ಈಗ ವಿಶ್ವವಿದ್ಯಾ ನಿಲಯದ ಬಗ್ಗೆ ಒದಗಿಸಿರತಕ್ಕ 25 ಲಕ್ಷ ರೂಪಾಯಿಗಳು ಏನೇನೂ ಸಾಲದೆಂದು ಟೀಕೆ ಮಾಡಿದ್ದಾರೆ. ಆದರೆ ಈ ಬಗ್ಗೆ ನಾವು ಮುಖ್ಯವಾಗಿ ಆಲೋಚಿಸತಕ್ಕ ಅಂಶವೇನಿದೆಯೆಂದರೆ, ದೇಶದ ಸದ್ಯದ ಪರಿಸ್ಥಿತಿಯಲ್ಲಿ ಹಾಗೆ ಹೆಚ್ಚು ಹಣವನ್ನು ವಿಶ್ವವಿದ್ಯಾನಿಲಯಗಳಿಗೆ ಖರ್ಚುಮಾಡವುದು ಸೂಕ್ತವೇ ಅಥವಾ ಆ ಹೆಚ್ಚು ಹಣವನ್ನು ಸಾಧಾರಣ ವಿದ್ಯಾಭಿವೃದ್ಧಿಗೆ ಬಳಸುವುದು ಸೂಕ್ತವೇ ಎಂಬುವನ್ನು ವಿಮರ್ಶೆಮಾಡಿ ನೋಡಿದರೆ, ಹಾಗೆ ಮಾಡುವುದಕ್ಕಿಂತ ಪ್ರಾಥಮಿಕ ಮತ್ತೂ ಪ್ರೌಢ ಪಾಠಶಾಲೆಗಳಿಗೆ ಹೆಚ್ಚು ಹಣ ಖರ್ಚುಮಾಡತಕ್ಕದ್ದು ಅವಶ್ಯಕವಾಗಿದೆಯೆಂದು ನಾನು ಸಲಹೆ ಮಾಡುತ್ತೇನೆ. ಈಗಾಗಲೇ ನಾವು ವಿದ್ಯಾಭ್ಯಾಸಕ್ಕಾಗಿ ಸುಮಾರು 3 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇನ್ನೂ ಹೆಚ್ಚು ಹಣವನ್ನು ಇದಕ್ಕಾಗಿ ಖರ್ಚು ಮಾಡುವಂತೆ ಹೇಳುವುದು ಅಷ್ಟು ಸಾಧುವಾದುದಲ್ಲವೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಸಂಸ್ಥಾನದಲ್ಲಿ ಆಗುತ್ತಿರುವ ಖರ್ಚುಬಾಬುಗಳನ್ನು ಕಮ್ಮಿ ಮಾಡುವ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. 14 ಕೋಟಿ ರೂಪಾಯಿಗಳ ಉತ್ಪತ್ತಿ ಇರುವ ಸಂಸ್ಥಾನದಲ್ಲಿ ಕೇವಲ ನೌಕರ ದಾರರ ಸಂಬಳ ಸಾರಿಗೆಗಾಗಿ 6 ಕೋಟಿ 18 ಲಕ್ಷ 75 ಸಾವಿರ ರೂಪಾಯಿಗಳನ್ನು ಈಗ ಖರ್ಚುಮಾಡಲಾಗುತ್ತಿದೆ. ಸರ್ಕಾರಿ ಕಾರ್ಖಾನೆಗಳಲ್ಲಿ ಕೆಲಸಮಾಡತಕ್ಕ ಕೂಲಿಗಾರರ ಸಂಬಳದ ಖರ್ಚು ಇದರಲ್ಲಿ ಸೇರಿರುವುದಿಲ್ಲ. ಈ ಮೊಬಲಗಿನಲ್ಲಿ ಇನ್ನೂ ಲೇಬರ್ ಇಲಾಖೆಯ ಸಂಬಳ ಸಾರಿಗೆ ಸೇರಿಲ್ಲ. ಅಂದ ಮೇಲೆ ಹೀಗೆ ಬರತಕ್ಕ 14 ಕೋಟಿ ರೂಪಾಯಿಗಳ ಉತ್ಪತ್ತಿಯಲ್ಲಿ ಸಂಬಳ ಸಾರಿಗೆಗಾಗಿ 6 ಕೋಟಿ ಚಿಲ್ಲರೆಯಷ್ಟನ್ನು ಖರ್ಚು ಮಾಡುವುದು ಸೂಕ್ತವಲ್ಲವೆಂದು ನಾನು ಹೇಳಬೇಕಾಗಿದೆ.

ಇನ್ನು ಮಲೆನಾಡು ಅಭಿವೃದ್ಧಿಯ ಬಗ್ಗೆ ಕೆಲವು ಮಾತುಗಳನ್ನಾಡಬೇಕಾಗಿದೆ. ಕೆಲವು ಶತಮಾನಗಳ ಹಿಂದೆ ಪೂರಾ ಜನ ಭರಿತವಾಗಿದ್ದು ಸಂಪತ್ತಿನಿಂದ ಕೂಡಿದ್ದಂಥ ಪ್ರದೇಶ ಇಂದು ಗಿಡ ಮರಗಳ ಕಾಡಾಗಿ ಹೋಗಿದೆ. ಒಂದೊಂದು ಗ್ರಾಮವೇ ನಿಶ್ಶೇಷವಾಗಿ ಜನರಿಲ್ಲದಂತಾಗಿ ಊರು ಕಾಡಾಗಿ ಹೋಗಿದೆ. ಇದಕ್ಕೆಲ್ಲಾ ಕಾರಣ, ಆ ಮಲೆನಾಡಿನ ಜನರಿಗೆ ಆರೋಗ್ಯ ಭಾಗ್ಯವಿಲ್ಲದೆ ಮತ್ತು ರಾಜಧಾನಿಗೆ ಬಹಳ ದೂರವಾಗಿದ್ದು ಸರಿಯಾದ ನಿಗಾವಣೆಗೆ ಅವಕಾಶವಿಲ್ಲದೆ ಹೋಗಿ ಈ ಸ್ಥಿತಿಗೆ ಬಂದಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಅರ್ಥಿಕ ಸಚಿವರು).—ಅದೇ ಮಲೆನಾಡಿಗೆ ಸಂಬಂಧಪಟ್ಟ ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ಇತ್ಯಾದಿ ಕಡೆ ಏಕೆ ಹಾಗಾಲಿಲ್ಲ!

ಶ್ರೀ ಕಡಿದಾಳ್ ಮಂಜಪ್ಪನವರು.—ಮತ್ತೊಂದು ಅಂಶವೇನೆಂದರೆ–ಇತ್ತೀಚೆಗೆ ನಡೆದ ಜನಗಣತೆಯಲ್ಲಿ ಆ ಮಲೆನಾಡಿನ ಜನ ಸಂಖ್ಯೆ ಜಾಸ್ತಿಯಾಗುತ್ತಿದೆಯೆಂದು ಮಾನ್ಯ ಸಚಿವರು ಅಪ್ಪಣೆಕೊಡಿಸಿದ್ದಾರೆ. ಆದರೆ ಹಾಗೆ ಅಲ್ಲಿ ಜನಸಂಖ್ಯೆ ಖಂಡಿತ ಜಾಸ್ತಿಯಾಗಿಲ್ಲ. ಹಾಗೆ ಜಾಸ್ತಿಯಾಗಿರುತ್ತೆಂದು ತಾವು ಭಾವಿಸಿರುವುದಕ್ಕೆ, ಕಾರಣವಾದರೂ ಇಷ್ಟೆ—ಈಗ ಆ ಮಲೆನಾಡು ಪ್ರಾಂತ್ಯದಲ್ಲಿ ಅಲ್ಲಲ್ಲೇ ಕೆಲವು ದೊಡ್ಡ ನೀರಾವರಿ ಯೋಜನೆಗಳು, ಅಂದರೆ ಲಕ್ಕವಳ್ಳಿ, ಜೋಗ್ ಮತ್ತು ತುಂಗಾ ಇತ್ಯಾದಿ, ಯೋಜನೆಗಳು ಪ್ರಾರಂಭವಾಗಿ, ಅಲ್ಲಿ ನಡೆಯುತ್ತಿರುವ ಕೆಲಸಗಳ ಸಂಬಂಧವಾಗಿ, ಕೂಲಿಗಾರರು ಅಲ್ಲಿಗೆ ವಿಶೇಷವಾಗಿ ಹೊರಗಡೆಯಿಂದ ಬಂದಿರುವುದರಿಂದ ಜನ ಸಂಖ್ಯೆ ಅಲ್ಲಿ ಜಾಸ್ತಿಯಾಗಿರುವಂತೆ ತೋರುತ್ತದೆ.

ನಮ್ಮ ದೇಶಕ್ಕೆ ಅಕ್ಕಿಯ ಬಗ್ಗೆ ಇರತಕ್ಕ ಕೊರತೆಯು ಸುಮಾರು $1\frac{1}{2}$ ಲಕ್ಷ ಟನ್. ಅದಕ್ಕೆ ಸರಿಯಾದ ವಾತಾವರಣ ಕಲ್ಪಿಸಿದ್ದರೆ ಕೇವಲ ಮಲೆನಾಡಿನ ಒಂದೆರಡು ತಾಲ್ಲೂಕುಗಳಲ್ಲೇ ಅಷ್ಟನ್ನೂ ಬೆಳೆಯುವುದಕ್ಕೆ ಸಾಧ್ಯವಿರುತ್ತಿತ್ತು ಅದಕ್ಕೆ ತಕ್ಕ ಪ್ರಯತ್ನವಾಗಬೇಕು. ಇತ್ತೀಚೆಗೆ ಡಿ. ಡಿ. ಟಿ. ಪ್ರಯೋಗದಿಂದ ಮಲೇರಿಯ ರೋಗವು ಅಲ್ಲಿಬಹಳಮಟ್ಟಿಗೆಕಡಿಮೆಯಾಗಿದೆ. ಮಲೆನಾಡಿನ ಎಲ್ಲಾ ಭಾಗಗಳಲ್ಲೂ ಡಿ. ಡಿ. ಟಿ. ಸರಿಯಾಗಿ ಪ್ರಯೋಗವಾಗುತ್ತಿಲ್ಲ. ಅದೂ ಅಲ್ಲದೆ ಕ್ರಮವಾಗಿ ಸರಿಯಾದ ಕಾಲದಲ್ಲಿ ಪ್ರಯೋಗಮಾಡುತ್ತಿಲ್ಲ. ಆ ಪ್ರಯೋಗವನ್ನು ಎಲ್ಲಾ ಭಾಗಗಳಲ್ಲೂ ಸಮರ್ಪಕವಾಗಿ ಮಾಡಿದರೆ ಕೇವಲ 5 ವರ್ಷಗಳಲ್ಲಿ ಮಲೇರಿಯ ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮೈದಾನದಲ್ಲಿ ಜನಸಂಖ್ಯೆ ಹೆಚ್ಚು ಕೆಲವು ತಾಲ್ಲೂಕುಗಳಲ್ಲಿ ಇರುವೆಗಳು ತುಂಬಿದ ಹಾಗೆ ಜನರು ತುಂದಿದ್ದಾರೆ. ಕೆಲವು ತಾಲ್ಲೂಕಿನ ಹಳ್ಳಿಗಳಲ್ಲಿ ಗೊಬ್ಬರದ ಗುಂಡಿ ಮಾಡುವುದಕ್ಕೆ ಸಹ ಜಾಗ ಸಿಕ್ಕುವುದಿಲ್ಲ. ಹೀಗಿರುವಾಗ ಮೈದಾನದವರು ಇಂದಲ್ಲದಿದ್ದರೆ ನಾಳೆಯಾದರೂ ಮಲೆನಾಡಿಗೆ ಹೋಗಲೇಬೇಕು. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಮತ್ತು ಮೈದಾನದ ಹಿತದೃಷ್ಟಿಯಿಂದ ಮಲೆನಾಡಿನ ಅಭಿವೃದ್ಧಿಗೆ ಸರ್ಕಾರದವರ ಗಮನ ಹೆಚ್ಚು ಬೀಳಬೇಕು ಎಂದು ಪ್ರಾರ್ಥಿಸುತ್ತೇನೆ.

ಆಮೇಲೆ ಪೋಲಿಸ್ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನಾಡದಿದ್ದರೆ ಕರ್ತವ್ಯಲೋಪ ಮಾಡಿದಂತಾಗುತ್ತದೆ. ಸಾರ್ವಜನಿಕ ಮುಖಂಡರ ಪ್ರಭಾವ ಅಧಿಕಾರಿಗಳ ಮೇಲೆ ಹೆಚ್ಚಾಗಿದೆ, ಅವರು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ನಮ್ಮ ಮಿತ್ರರಾದ ಶ್ರೀ ಸುಬ್ರಹ್ಮಣ್ಯಂರವರು ಹೇಳಿದರು, ಕೆಲವು ಕಡೆ ಹಾಗಾಗಿದೆ. ಇನ್ನು ಕೆಲವು ಕಡೆ ಯಾರ ಪ್ರಭಾವವಿಲ್ಲದೆ ಇದ್ದರೂ ಅಧಿಕಾರಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ. ಉದಾಹರಣೆಗೆ ಪೋಲೀಸ್ ಇಲಾಖೆಯಲ್ಲಿ ಏನು ರೋಗ ಬಂದಿದೆಯೋ ಗೊತ್ತಾಗುವುದಿಲ್ಲ. ಯಾವ ದೂರು ಬಂದರೂ 'ಪ್ರಜಾಸರ್ಕಾರ' ನಾವೇನೂ ಮಾಡುವ ಹಾಗಿಲ್ಲ ಎಂದು

ಹೇಳುತ್ತಾರೆ. ಪ್ರಜಾಸರ್ಕಾರದಲ್ಲಿ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಅಂಥವರನ್ನು ದಯವಿಟ್ಟು ನಿವೃತ್ತಿ ಮಾಡಿ. ಅನೇಕ ತಾಲ್ಲೂಕುಗಳಲ್ಲಿ ಡಕಾಯ್ತಿ ನಡೆಯುತ್ತಿದೆ. ಪೋಲಿಸಿನವರು ಏನು ಮಾಡುತ್ತಿದ್ದಾರೆ? ಜನರಲ್ಲಿ ಪೋಲೀಸಿನವರ ಮೇಲೆ ಏನು ಒಂದು ಅಭಿಮಾನ, ಗೌರವ ಇತ್ತೋ ಅದೂ ಮತ್ತು ಏನು ಒಂದು ಹೆದರಿಕೆಯಿತ್ತೋ ಅದು ಎಲ್ಲಾ ಮಾಯವಾಗಿದೆ. ಆದರೆ ಎಲ್ಲಾ ಕಡೆಗಳಲ್ಲೂ ಕೂಡ ಸಾರ್ವಜನಿಕ ಮುಖಂಡರು ಹೋಗಿ ಅವರ ಮೇಲೆ ಪ್ರಭಾವ ಬೀರಿ ಕೆಲಸ ಮಾಡದ ಹಾಗೆ ಮಾಡುತ್ತಾರೆಂದು ಹೇಳುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಮ್ಮ ಜಿಲ್ಲೆಯಲ್ಲಿ ಸಾರ್ವಜನಿಕ ಮುಖಂಡರ ಪ್ರಭಾವ ಅಧಿಕಾರಿಗಳ ಮೇಲೆ ಬಹಳ ಕಡಮೆ ಎಂದು ನಾನು ಒತ್ತಿಹೇಳುತ್ತೇನೆ. ಬೇಕಾದರೆ ಅಧಿಕಾರಿಗಳನ್ನು ಕೇಳಿ ತಿಳಿದುಕೊಳ್ಳಬಹುದು ಮುಂದುವರೆದು ಪೋಲೀಸ್ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ ಆ ಇಲಾಖೆಯಲ್ಲಿಗುವ ಸೇಕಡ 50 ರಷ್ಟು ಇನ್ಸ್ಪೆಕ್ಟರು, ಥಪೇದಾರರು ಮತ್ತು ಸಬ್ ಇನ್ಸ್ಪೆಕ್ಟರುಗಳನ್ನು ಈ ದಿವಸ ವಜಾ ಮಾಡಬಹುದು ಎಂದು ಒಳಾಡಳಿತ ಶಾಖೆಯ ಸಚಿವರಿಗೆ ತಿಳಿಸುತ್ತೇನೆ. ಸರಿಯಾಗಿ ಕೆಲಸ ಮಾಡುವ ಜನರು ಬೇಕಾದಷ್ಟು ಸಿಕ್ಕುತ್ತಾರೆ. ಇದೇ ಸಂದರ್ಭದಲ್ಲಿ ಸೂಕ್ಷ್ಮವಾಗಿ ಹೇಳುವುದಾದರೆ ಸರ್ಕಾರದಲ್ಲಿ ದರ್ಪವಿಲ್ಲವೆಂದು ಹೇಳುವುದಿಲ್ಲ ದರ್ಪ ಮತ್ತು ಬಿಗಿ ಜಾಸ್ತಿಯಾಗಬೇಕು.

ನಮ್ಮ ಬಡ್ಜೆಟ್ಟು ಎಲೆಕ್ಷನ್ ಬಡ್ಜೆಟ್ಟಾಗಿದೆ ಎಂದು ಶ್ರೀ ಹುಚ್ಚೇಗೌಡರು ಹೇಳಿದರು. ನಮ್ಮ ಕರ್ತವ್ಯವನ್ನು ನಾವು ಮಾಡಿರುತ್ತೇವೆ. ಇಲ್ಲೇ ಇರಬೇಕೆಂಬ ದುರಭಿಮಾನ ನಮಗಿಲ್ಲ, ದೇಶ ಬೇಡವೆಂದು ಹೇಳಿದರೆ ಖಂಡಿತವಾಗಿಯೂ ನಾವು ಅಧಿಕಾರವನ್ನು ಬಿಡಲು ಸಿದ್ಧರಾಗಿದ್ದೇವೆ. ಯಾರಾದರೂ ಪುಣ್ಯಾತ್ಮರು ಈ ದಿವಸ ಬಂದು ಪ್ರತಿಯೊಬ್ಬರಿಗೂ 20 ಔನ್ಸಿನಂತೆ ಆಹಾರ, ರೂಪಾಯಿಗೆ 6 ಸೇರಿನಂತೆ ಅಕ್ಕಿ ಕೊಡಿಸುತ್ತೇವೆಂದು ಸರಿಯಾದ ಭರವಸೆ ಕೊಟ್ಟರೆ ಖಂಡಿತ ಅಧಿಕಾರ ಬಿಟ್ಟು ಕೊಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಶ್ರೀ ಕಡಿದಾಳ್ ಮಂಜಪ್ಪನವರು ಬಿಟ್ಟುಕೊಡುತ್ತಾರೋ ಅಥವಾ ಸರ್ಕಾರದವರು ಬಿಟ್ಟುಕೊಡುತ್ತಾರೋ?

ಶ್ರೀ ಎಂ. ಎನ್. ಜೋಯಿಸರು.—ಅವರಿಗೂ ಸರ್ಕಾರಕ್ಕೂ ವ್ಯತ್ಯಾಸವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಆಡಳಿತದಲ್ಲಿ ಅಲ್ಲಲ್ಲ ಲೋಪದೋಷವಿರಬಹುದು. ಬಸ್ ಪರ್ಮಿಟ್ ಕೊಟ್ಟಿರುವ ವಿಚಾರ ಅಥವ ನೌಕರಿಗಳನ್ನು ಕೊಟ್ಟಿರುವ ವಿಚಾರದಲ್ಲಿ ಟೀಕೆಗಳು ಇರಬಹುದು. ಆದರೆ ಒಟ್ಟಿನಲ್ಲಿ ಸರ್ಕಾರವು ಅನೇಕ ವಿಷಯಗಳಲ್ಲಿ ಸರಿಯಾದ ರೀತಿಯಲ್ಲಿ ವರ್ತಿಸಿದೆ, ಅನೇಕ ಕಾರ್ಯಗಳನ್ನು ಸಾಧಿಸಿದೆ, ಅದನ್ನು ಗಮನಿಸಬೇಕು. ನಮ್ಮ ದೇಶದಲ್ಲಿ ಸಣ್ಣ ಸಣ್ಣ ವಿಷಯಗಳಲ್ಲಿ ಟೀಕೆ ಬಹಳ ಬರುತ್ತಿದೆ. ಅದರಲ್ಲೂ ಕೇವಲ ಕೆಲಸಕ್ಕೆ ಬಾರದ ವಿಚಾರಗಳು ಹೆಚ್ಚಾಗಿವೆ, ಇದು ಸರಿಯಲ್ಲ. ಯಾರಿಗೆ ಬಸ್‌ಪರ್ಮಿಟ್ ಸಿಕ್ಕಿಲ್ಲವೋ ಅವರು ಮತ್ತು ಯಾರಿಗೆ ಕೆಲಸ ಸಿಕ್ಕಿಲ್ಲವೋ ಅವರು ಇತರರಿಗೆ ಕೊಟ್ಟಿದ್ದನ್ನೇ ದೊಡ್ಡದು ಮಾಡಿ ತಕರಾರು ಮಾಡಲು ಪ್ರಾರಂಭಿಸಿದ್ದಾರೆ. ಇದನ್ನೇ ಒಂದು ದೊಡ್ಡ ಹಗರಣ ಮಾಡಿ ಸರ್ಕಾರ ಯಾವ ಒಳ್ಳೆಯ ಕೆಲಸವನ್ನೂ ಮಾಡಲೇ ಇಲ್ಲ ಎಂಬ ಭಾವನೆ ಬರುವ ರೀತಿಯಲ್ಲಿ ಮಾತನಾಡಿರುವುದನ್ನು ಕೇಳಿದ್ದೇನೆ. ಪತ್ರಿಕೆಗಳಲ್ಲೂ ಇಂಥ ಟೀಕೆಗಳು ಬಂದಿವೆ. ಒಟ್ಟಿನಲ್ಲಿ ಸಂಕ್ಷೇಪವಾಗಿ ಹೇಳುವುದಾದರೆ ಸರ್ಕಾರದವರು ಮಾಡಿರುವ ಎಲ್ಲಾ ಕಾರ್ಯಕಲಾಪಗಳನ್ನೂ ಮನಸ್ಸಿನಲ್ಲಿಟ್ಟು ಟೀಕೆ ಮಾಡುವುದು ಉಚಿತ ಎಂದು ಹೇಳುತ್ತೇನೆ.

ಆಮೇಲೆ ಹೋಟೆಲುಗಳ ವಿಚಾರವು ಬಹಳ ಸಣ್ಣ ಪ್ರಶ್ನೆಯಲ್ಲ. ಆ ಬಗ್ಗೆ ಏನೋ ಕಾನೂನು ಮಾಡಿದ್ದೇವೆ, ಹೋಟಲುಗಳನ್ನು ಆರೋಗ್ಯಕರವಾಗಿಯೂ ಮತ್ತು ನಿರ್ಮಲವಾಗಿಯೂ ಇಡುವುದಕ್ಕೆ ಬಹಳ ಕಾರ್ಯಕ್ರಮ ಕೈಗೊಂಡಿದ್ದೇವೆಂದು ಆರೋಗ್ಯ ಮಂತ್ರಿಗಳು ಮೊನ್ನೆ ಹೇಳಿದರು. ಅದು ಮಹತ್ವದ ಪ್ರಶ್ನೆ, ಈ ದಿವಸ ನಮ್ಮ ಸಂಸ್ಥಾನದ ಸೇಕಡ 50ರಷ್ಟು ಮಂದಿ ಹೋಟಲುಗಳಿಗೆ ಹೋಗಿ ತಿನ್ನುತ್ತಾರೆ. ಅಲ್ಲಿ ತಯಾರು ಮಾಡುವ ಆಹಾರ ಪದಾರ್ಥಗಳು ಶುಚಿಯಾಗಿರಬೇಕು. ಈ ದಿವಸ ನಮ್ಮ ದೇಶದಲ್ಲಿ ಎಲ್ಲಿ ಹೋದರೂ ಒಳ್ಳೆಯ ಹೋಟಲು ಇರುವುದಿಲ್ಲ. ಉತ್ತಮ ದರ್ಜೆಯ ಹೋಟಲೇ ಇಲ್ಲ. ಆದ್ದರಿಂದ ಇದರ ಮೇಲೆ ಹೆಚ್ಚು ನಿಗ ತೆಗೆದುಕೊಳ್ಳುವುದು ಸೂಕ್ತ ಎಂದು ಒತ್ತಿ ಹೇಳುತ್ತೇನೆ.

ಮಲೆನಾಡಿನಲ್ಲಿ ಆಸ್ಪತ್ರೆಗಳಿವೆ. ಆದರೆ ಡಾಕ್ಟರುಗಳಿಲ್ಲ. ಡಾಕ್ಟರಿದ್ದರೆ ಔಷಧಿಯಿಲ್ಲ. ಅದೇ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಕಂಬಕಂಬಕ್ಕೆ ಒಬ್ಬ ಡಾಕ್ಟರು, ಒಬ್ಬೊಬ್ಬ ಸೂಲಗಿತ್ತಿಯರು ಇದ್ದಾರೆ. ಅವರನ್ನು ಏಕೆ ಮಲೆನಾಡಿಗೂ ಮತ್ತು ಗ್ರಾಮಾಂತರ ಪ್ರದೇಶಗಳಿಗೂ ಕಳುಹಿಸಬಾರದು?

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅಲ್ಲಿಗೆ ಹೋದರೆ ಸಾಯುತ್ತಾರೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಆಮೇಲೆ ಹೆಚ್ಚು ಬೆಳೆ ಬೆಳೆಯುವ ಯೋಜನೆಗಾಗಿ ಖರ್ಚು ಮಾಡುವ ಹಣವನ್ನು ರೈತರ ಸಹಾಯಕ್ಕಾಗಿ ಖರ್ಚು ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER—The House will now adjourn till 8 A.M. tomorrow.

The Assembly adjourned at Eight Minutes past Twelve of the Clock to meet again at Eight of the Clock, on Friday, 23rd March 1951.

WD 3189—GPB—500—25-4-51